ಗುರುವಾರ, ಮಾರ್ಚ್ 6, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 65 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾ ವಾಣಿ
'ಕಬ್ಬಿಣ'ದ ಮೂಲ ತಮಿಳುನಾಡು ಎಂದು ಗೊತ್ತೇ?

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,730	22,337	₹90,640 (ಬೆಂಗಳೂರು)	₹1.01ಲಕ್ಷ (ಬೆಂಗಳೂರು)	87.06

ಏ.2ರಿಂದ ಪ್ರತಿ ಸುಂಕ: ಅಮೆರಿಕ ಅಧ್ಯಕ್ಷ ಟ್ರಂಪ್ ಘೋಷಣೆ • ಭಾರತ ವಿಧಿಸುವ ಸುಂಕ ಅಧಿಕ–ಟೀಕೆ

ಸುಂಕ ಸಮರ: ಭಾರತಕ್ಕೂ ಬಿಸಿ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಅಮೆರಿಕದಿಂದ ಆಮದು ಮಾಡಿಕೊಳ್ಳುವ ಸರಕುಗಳಿಗೆ ಅಧಿಕ ಸುಂಕ ವಿಧಿಸುತ್ತಿರುವ ಭಾರತದ ಮೇಲೆ ಏಪ್ರಿಲ್ 2ರಿಂದ ಪ್ರತಿಸುಂಕ ಹೇರಿಕೆ ಮಾಡಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಅಮೆರಿಕದ ಸರಕುಗಳ ಮೇಲೆ ಅಧಿಕ ಸುಂಕ ವಿಧಿಸುವ ಇತರ ದೇಶಗಳಿಗೂ ಪ್ರತಿ ಸುಂಕ ವಿಧಿಸಲಾಗುವುದು ಎಂದೂ ಹೇಳಿದ್ದಾರೆ.

'ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತಿರುವ ಆಟೊಮೊಬೈಲ್ ಸರಕುಗಳಿಗೆ ಭಾರತ ಶೇ 100ಕ್ಕೂ ಅಧಿಕ ಸುಂಕ ವಿಧಿಸುತ್ತಿದೆ. ಇದು ಭಾರಿ ಅನ್ಯಾಯ' ಎಂದು ಟೀಕಿಸಿದ್ದಾರೆ.

ಸಂಸತ್‌ನ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದ ಟ್ರಂಪ್, ಈ ಮಾತು ಹೇಳಿದ್ದಾರೆ. ಹೀಗಾಗಿ, ವಿಶ್ವದ ಹಲವು ರಾಷ್ಟ್ರಗಳೊಂದಿಗೆ ಅಮೆರಿಕ ಸಾರಿರುವ 'ವ್ಯಾಪಾರ ಯುದ್ಧ'ದ ಬಿಸಿ ಭಾರತಕ್ಕೂ ತಟ್ಟಲಿದೆ.

12ನೇ ಪುಟ ನೋಡಿ

₹11 ಲಕ್ಷ ಕೋಟಿ ಕಳೆದ ವರ್ಷ ಭಾರತದೊಂದಿಗೆ ಅಮೆರಿಕ ನಡೆಸಿರುವ ಒಟ್ಟು ಅಂದಾಜು ವ್ಯಾಪಾರ

₹3 ಲಕ್ಷ ಕೋಟಿ ಕಳೆದ ವರ್ಷ ಅಮೆರಿಕ ಭಾರತಕ್ಕೆ ರಫ್ತು ಮಾಡಿರುವ ಸರಕುಗಳ ಮೌಲ್ಯ

₹7 ಲಕ್ಷ ಕೋಟಿ ಕಳೆದ ವರ್ಷ ಭಾರತದಿಂದ ಅಮೆರಿಕ ಆಮದು ಮಾಡಿಕೊಂಡಿರುವ ಸರಕುಗಳ ಮೌಲ್ಯ

ಸೌಹಾರ್ದ ಪರಿಹಾರಕ್ಕೆ ಭಾರತ ಯತ್ನ

ನವದೆಹಲಿ (ಪಿಟಿಐ): ಪ್ರತಿ ಸುಂಕ ವಿಧಿಸುವ ಅಮೆರಿಕದ ಕ್ರಮದಿಂದ ಎದುರಾಗುವ ಸವಾಲುಗಳಿಗೆ ಸೌಹಾರ್ದಯುತ ಪರಿಹಾರ ಕಂಡುಕೊಳ್ಳುವ ಮಾರ್ಗಗಳನ್ನು ಭಾರತ ಹುಡುಕುತ್ತಿದೆ.

'ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಫೆ.13ರಂದು ಭೇಟಿ ನೀಡಿದ ಸಂದರ್ಭದಲ್ಲಿ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜೊತೆ ಮಾತುಕತೆ ನಡೆಸಿದ್ದಾರೆ. ಹೀಗಾಗಿ, ಈ ವಿಚಾರಕ್ಕೆ ಸಂಬಂಧಿಸಿ ಪರಿಹಾರ ಕಂಡುಕೊಳ್ಳುವ ವಿಶ್ವಾಸವನ್ನು ಭಾರತ ಹೊಂದಿದೆ' ಎಂದು ಮೂಲಗಳು ಹೇಳಿವೆ.

ಈ ನಡುವೆಯೇ, ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಅವರು ಅಮೆರಿಕಕ್ಕೆ ಭೇಟಿ ನೀಡಿದ್ದು, ಅಮೆರಿಕ ವಾಣಿಜ್ಯ ಸಚಿವ ಹೋವರ್ಡ್ ಲುಟ್ನಿಕ್ ಹಾಗೂ ಅಮೆರಿಕ ವ್ಯಾಪಾರ ಪ್ರತಿನಿಧಿ ಜೆಮಿಸನ್ ಗ್ರೀರ್ ಅವರೊಂದಿಗೆ ಪ್ರಸ್ತಾವಿತ ಒಪ್ಪಂದ ಕುರಿತು ಮಾತುಕತೆ ನಡೆಸಲಿದ್ದಾರೆ.

ಫೆ.1ರಂದು ಮಂಡಿಸಿದ್ದ 2025–26ನೇ ಸಾಲಿನ ಬಜೆಟ್‌ನಲ್ಲಿ, ಬೌರ್‌ಬಾನ್ ವಿಸ್ಕಿ, ವೈನ್ ಹಾಗೂ ಎಲೆಕ್ಟ್ರಿಕ್ ವಾಹನಗಳ (ಇ.ವಿ) ಕ್ಷೇತ್ರಕ್ಕೆ ಸಂಬಂಧಿಸಿದ ಸುಂಕಗಳನ್ನು ಕಡಿಮೆ ಮಾಡುವುದಾಗಿ ಕೇಂದ್ರ ಸರ್ಕಾರ ಘೋಷಿಸಿತ್ತು.



ವಿಶ್ವದ ಪ್ರತಿಯೊಂದು ದೇಶವೂ ಭಾರಿ ಸುಂಕ ವಿಧಿಸುವ ಮೂಲಕ ದಶಕಗಳಿಂದ ನಮ್ಮನ್ನು ಸುಲಿಗೆ ಮಾಡಿವೆ. ಇನ್ನು ಮುಂದೆ ಇಂಥ ಕ್ರಮಕ್ಕೆ ನಾವು ಅವಕಾಶ ನೀಡುವುದಿಲ್ಲ
ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

12ನೇ ಪುಟ ನೋಡಿ

ಶಾಂತಿ ಒಪ್ಪಂದಕ್ಕೆ ರಷ್ಯಾ ಉತ್ಸುಕ: ಟ್ರಂಪ್

'ಯುದ್ಧಕ್ಕೆ ಅಂತ್ಯ ಹಾಡಲು, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗೆ ಶಾಂತಿ ಒಪ್ಪಂದ ಮಾಡಿಕೊಳ್ಳಲು ತಾನು ಸಿದ್ಧ ಎಂಬ ಸಂದೇಶವನ್ನು ರಷ್ಯಾ ನನಗೆ ರವಾನಿಸಿದೆ' ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ಶಾಂತಿ ಸ್ಥಾಪನೆಗೆ ಸಂಬಂಧಿಸಿ ಮಾತುಕತೆ ನಡೆಸಲು ತಾನು ಸಿದ್ಧ. ಭದ್ರತೆ ಹಾಗೂ ಖನಿಜ ಒಪ್ಪಂದಕ್ಕೂ ಸಹಿ ಹಾಕಲು ಒಪ್ಪಿರುವೆ ಎಂಬುದಾಗಿ ಝೆಲೆನ್‌ಸ್ಕಿ ನನಗೆ ಪತ್ರ ಬರೆದಿದ್ದಾರೆ' ಎಂದೂ ಟ್ರಂಪ್ ಹೇಳಿದ್ದಾರೆ.



ಪ್ರತಿಭಟನೆ ತೊಗರಿ ಬೆಳೆ ಹಾನಿಗೆ ಪರಿಹಾರ ನೀಡಲು ಆಗ್ರಹಿಸಿ ಕಲಬುರಗಿಯ ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಎತ್ತಿನ ಗಾಡಿಗಳೊಂದಿಗೆ ಬಂದು ರೈತರು ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

ವಿವರ 12

ಪಶುಸಂಗೋಪನಾ ಸಚಿವ ವೆಂಕಟೇಶ್ ಸುಳಿವು

ಹಾಲಿನ ದರವೂ ಏರಿಕೆ?

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹಾಲಿನ ಖರೀದಿ ದರ ಏರಿಸುವ ಮತ್ತು ಅದನ್ನು ಗ್ರಾಹಕರಿಂದ ಭರಿಸುವ ಪ್ರಸ್ತಾವ ಸರ್ಕಾರದ ಮುಂದೆ ಇದೆ ಎಂದು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಹೇಳಿದರು.

ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ನೀಡುವ ಸಂಬಂಧ ವಿಧಾನ ಪರಿಷತ್ತಿನಲ್ಲಿ ಬುಧವಾರ ಬಿಜೆಪಿಯ ಹೇಮಲತಾ ನಾಯಕ್ ಮತ್ತು ಎಂ.ಜಿ. ಮುಳೆ ಹಾಗೂ ಕಾಂಗ್ರೆಸ್‌ನ ಉಮಾಶ್ರೀ ಅವರು ಕೇಳಿದ್ದ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಹಾಲಿನ ದರ ಏರಿಸುವ ಅಗತ್ಯವಿದೆ ಎಂದು ಹೇಳಿದರು.

'ಹಾಲಿನ ಖರೀದಿ ದರ ಹೆಚ್ಚಿಸಬೇಕು ಎಂದು ರೈತರು ಮತ್ತು ಹಾಲು ಉತ್ಪಾದಕರ ಸಂಘಗಳು ಬೇಡಿಕೆ ಸಲ್ಲಿಸುತ್ತಲೇ ಇವೆ. ಮೇವು ಮತ್ತಿತರ ವೆಚ್ಚ ಸೇರಿ ಹಾಲು ಉತ್ಪಾದನಾ ವೆಚ್ಚ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ. ಹೀಗಾಗಿಯೇ ಖರೀದಿ ದರ ಹೆಚ್ಚಿಸಬೇಕು ಎಂಬುದು ಉತ್ಪಾದಕರ ಒತ್ತಾಯ' ಎಂದು ಅವರು ಸದನಕ್ಕೆ ವಿವರಿಸಿದರು.

'ಹಾಲು ಉತ್ಪಾದಕರು ಕೇಳುತ್ತಿರುವುದರಲ್ಲೂ ನ್ಯಾಯವಿದೆ. ಈಗಿನ ಖರೀದಿ ದರದಿಂದ ಅವರಿಗೆ ನಷ್ಟವಾಗುತ್ತಿದೆ. ಹೀಗಾಗಿ ದರ ಏರಿಕೆಯ ಬಗ್ಗೆ ಚರ್ಚೆ ನಡೆಯುತ್ತಿದೆ. ದರವನ್ನು ಎಷ್ಟು ಹೆಚ್ಚಿಸಬೇಕು ಎಂಬುದು ನಿರ್ಧಾರವಾಗಿಲ್ಲ. ಈ ಹಿಂದೆ ಪ್ರತಿ ಲೀಟರ್ ಖರೀದಿ ದರದಲ್ಲಿ ₹2 ಏರಿಕೆ ಮಾಡಿದಾಗ, ಸರ್ಕಾರವೇ ಅದನ್ನು ಭರಿಸಿತ್ತು. ಆದರೆ ಈಗ ಮಾರಾಟ ದರವನ್ನು ಹೆಚ್ಚಿಸುವ ಬಗ್ಗೆಯೂ ಚಿಂತನೆ ನಡೆದಿದೆ' ಎಂದರು.

5ನೇ ಪುಟ ನೋಡಿ

ಆಟೊ ಪ್ರಯಾಣ ದರ ಹೆಚ್ಚಳ: 12ಕ್ಕೆ ಸಭೆ



ಬೆಂಗಳೂರು: ನಗರದ ಆಟೊಗಳ ಪ್ರಯಾಣ ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ಮಾರ್ಚ್ 12ರಂದು ಸಂಚಾರ ಡಿಸಿಪಿ ಕಚೇರಿ ಸಭಾಂಗಣದಲ್ಲಿ ಸಭೆ ನಡೆಯಲಿದೆ.

ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರಾಗಿರುವ ನಗರ ಜಿಲ್ಲಾಧಿಕಾರಿ ಅವರು ಸಭೆ ನಡೆಸಲು ಪ್ರಾಧಿಕಾರದ ಸದಸ್ಯರಾಗಿರುವ ಸಂಚಾರ ಡಿಸಿಪಿಗೆ ಸೂಚನೆ ನೀಡಿದ್ದಾರೆ. ಪ್ರಾಧಿಕಾರದ ಕಾರ್ಯದರ್ಶಿಯೂ ಆಗಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿ ಭಾಗವಹಿಸಲಿದ್ದಾರೆ. ನಗರದ ವಿವಿಧ ಆಟೊ ಸಂಘಗಳ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸಿ.ಎಂ ಆದೇಶವೂ ಪಾಲನೆ ಆಗಿಲ್ಲ

ಪ್ರಜಾವಾಣಿ ವಾರ್ತೆ

ಬಲ್ಡೋಟಾ ಕಾರ್ಖಾನೆ

ಕೊಪ್ಪಳ: 'ಬಲ್ಡೋಟಾ ಕಂಪನಿ ಉಕ್ಕಿನ ಕಾರ್ಖಾನೆ ವಿಸ್ತರಣೆಗೆ ನಡೆಯುತ್ತಿರುವ ಸಿದ್ಧತೆ ನಿಲ್ಲಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಆದೇಶಿಸಿದ ಬಳಿಕವೂ ಅಲ್ಲಿ ಬುಧವಾರ ಸಿದ್ಧತಾ ಕಾರ್ಯವು ಭರದಿಂದ ಸಾಗಿತ್ತು.

ಇದರಿಂದ ಆಕ್ರೋಶಗೊಂಡ ಕಾರ್ಖಾನೆ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸುತ್ತಿರುವ ಕೊಪ್ಪಳ ಜನಾಂದೋಲನ ಸಮಿತಿ ಪದಾಧಿಕಾರಿಗಳು ಕಾರ್ಖಾನೆಯ ಎದುರು ಪ್ರತಿಭಟಿಸಿದರು.



ಕೊಪ್ಪಳ ಜನಾಂದೋಲನ ಸಮಿತಿ ಪದಾಧಿಕಾರಿಗಳು ಬುಧವಾರ ಬಲ್ಡೋಟಾ ಕಂಪನಿ ಕಾಂಪೌಂಡ್ ಆವರಣದಲ್ಲಿ ಪ್ರತಿಭಟನೆ ನಡೆಸಿದರು

ಜಿಲ್ಲೆಯ ಎಲ್ಲ ರಾಜಕೀಯ ಪಕ್ಷಗಳ ಜನಪ್ರತಿನಿಧಿಗಳು ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಕಾರ್ಖಾನೆಯಿಂದಾಗುವ ಅಪಾಯದ ಬಗ್ಗೆ ಮಂಗಳವಾರ ಮನವರಿಕೆ ಮಾಡಿಕೊಟ್ಟಿದ್ದರು. ಆಗ ಸಿದ್ದರಾಮಯ್ಯ ಅವರು ಸಿದ್ಧತೆ ಸ್ಥಗಿತಗೊಳಿಸಲು ಕ್ರಮವಹಿಸುವಂತೆ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರಿಗೆ ಆದೇಶಿಸಿದ್ದರು.

ಆದರೆ, ಬುಧವಾರವೂ ನಗರದ ಹೊರವಲಯದಲ್ಲಿರುವ ಕಾರ್ಖಾನೆಯ ಆವರಣದಲ್ಲಿ ಟಿಪ್ಪರ್‌ಗಳ ಸಾಗಾಟ, ಮಣ್ಣು ಸಮತಟ್ಟು ಮಾಡುವ ಕಾರ್ಯ, ಜೆಸಿಬಿಗಳ ಓಡಾಟ ಎಂದಿನಂತೆ ಇತ್ತು.

ಇದರಿಂದ ಆಕ್ರೋಶಗೊಂಡ ಜನಾಂದೋಲನ ಸಮಿತಿಯ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು ಹಾಗೂ ಪದಾಧಿಕಾರಿಗಳು, 'ಮುಖ್ಯಮಂತ್ರಿ ಆದೇಶವನ್ನು ಪಾಲಿಸಿಲ್ಲ. ಜಿಲ್ಲೆಯ ಜನರ ಆಶಯಕ್ಕೆ ಬೆಲೆ ಕೊಡದ ಜಿಲ್ಲಾಧಿಕಾರಿಯನ್ನು ವರ್ಗಾಯಿಸಬೇಕು' ಎಂದು ಆಗ್ರಹಿಸಿದರು.

ಸಂಘಟನೆಯ ಮುಖಂಡರು, ಪದಾಧಿ ಕಾರಿಗಳು ಕಾರ್ಖಾನೆಯ ಆವರಣ ಪ್ರವೇಶಿಸುವಾಗ ಅಲ್ಲಿನ ಸಿಬ್ಬಂದಿ ಜೊತೆ ಮಾತಿನ ಚಕಮಕಿ ನಡೆಯಿತು. ಬಳಿಕ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದರು. ಈ ಬಗ್ಗೆ 'ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

ಮರ ಗಣತಿಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ತಾಜ್ ಟ್ರಪೀಜಿಯಂ ವಲಯ (ಟಿಟಿಜೆಡ್) ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿ ಮರಗಳ ಗಣತಿ ನಡೆಸಲು ಡೆಹ್ರಾಡೂನ್‌ನ ಅರಣ್ಯ ಸಂಶೋಧನಾ ಸಂಸ್ಥೆಯನ್ನು ನೇಮಕ ಮಾಡಬೇಕು ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ವಿಭಾಗೀಯ ಪೀಠವು, ಈಗ ಇರುವ ಮರಗಳ ಬಗ್ಗೆ ಮಾಹಿತಿ ಇಲ್ಲದಿರುವಾಗ ನಿಯಮ ಉಲ್ಲಂಘನೆ ಮಾಡಿದವರ ವಿರುದ್ಧ ದಂಡ ವಿಧಿಸಲು ಆಗುವುದಿಲ್ಲ ಎಂದು ಹೇಳಿದೆ.

ಟಿಟಿಜೆಡ್ ವಲಯವು ಅಂದಾಜು 10,400 ಚದರ ಕಿ.ಮೀ. ವ್ಯಾಪ್ತಿಯನ್ನು ಹೊಂದಿದೆ. ಇದು ಉತ್ತರ ಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಹರಡಿಕೊಂಡಿದೆ.

ರಾಜ್ಯಕ್ಕೆ ಕೇಂದ್ರದಿಂದ ಚಾಟಿ

'ಅರಣ್ಯವಾಸಿಗಳ ಪುನರ್ವಸತಿ ನ್ಯಾಯಸಮ್ಮತವಾಗಿರಲಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಅರಣ್ಯ ವಾಸಿಗಳ ಪುನರ್ವಸತಿ ಪ್ರಕ್ರಿಯೆಗೆ ಆಕ್ಷೇಪ ವ್ಯಕ್ತಪಡಿಸಿರುವ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯವು, ಅರಣ್ಯವಾಸಿಗಳ ಒಪ್ಪಿಗೆ ಪಡೆದೇ ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಈ ಪ್ರಕ್ರಿಯೆ ನಡೆಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಕಟ್ಟಪ್ಪಣೆ ಮಾಡಿದೆ.

ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ಇದೇ 3ರಂದು ಪತ್ರ ಬರೆದಿರುವ ಸಚಿವಾಲಯವು, 'ರಾಜ್ಯದಲ್ಲಿ ಅರಣ್ಯವಾಸಿಗಳನ್ನು ಕಾನೂನುಬಾಹಿರವಾಗಿ ಸ್ಥಳಾಂತರ ಮಾಡಲಾಗುತ್ತಿದೆ ಎಂಬ ಬಗ್ಗೆ ದೂರುಗಳು ಬಂದಿವೆ. ಈ ಕುರಿತು ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಸಚಿವಾಲಯಕ್ಕೆ ವರದಿ ಸಲ್ಲಿಸಬೇಕು' ಎಂದು ಸೂಚಿಸಿದೆ.

'ರಾಜ್ಯದ ವಿವಿಧೆಡೆ ವಾಸಿಸುತ್ತಿರುವ ಅರಣ್ಯ ವಾಸಿಗಳನ್ನು ಕಾನೂನುಬಾಹಿರವಾಗಿ ಸ್ಥಳಾಂತರ ಮಾಡಲಾಗುತ್ತಿದೆ. ಇದರಲ್ಲಿ ಭಾಗಿಯಾಗಿರುವ ಅರಣ್ಯಾಧಿಕಾರಿಗಳು, ಜಿಲ್ಲಾಧಿಕಾರಿಗಳು ಸೇರಿದಂತೆ ವಿವಿಧ ಇಲಾಖಾ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು' ಎಂದು ಆಗ್ರಹಿಸಿ ಕೇಂದ್ರ ಅರಣ್ಯ ಹಾಗೂ ಬುಡಕಟ್ಟು ಸಚಿವಾಲಯಕ್ಕೆ ಮಂಗಳೂರಿನ ಸುರತ್ಕಲ್ ನಿವಾಸಿ ರೇಷ್ಮಾ ಎಂಬುವರು ದೂರು ನೀಡಿದ್ದರು.

'ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಪ್ರಕಾರ ಹುಲಿ ಮೀಸಲು ಅರಣ್ಯಗಳ ಹೃದಯ ಭಾಗದಲ್ಲಿ ವಾಸಿಸುತ್ತಿರುವ ಅರಣ್ಯವಾಸಿಗಳಿಗೆ ಮಾತ್ರ ಪುನರ್ವಸತಿ ಕಲ್ಪಿಸಲು ಅವಕಾಶವಿದೆ. ಮೀಸಲು ಪ್ರದೇಶಗಳಲ್ಲಿ ವಾಸಿಸುತ್ತಿರುವವರನ್ನು ಸ್ಥಳಾಂತರಗೊಳಿಸಲು ಸ್ಪಷ್ಟ ನಿರ್ಬಂಧ ಇದೆ. ವನ್ಯಜೀವಿ ಕಾಯ್ದೆ ಮತ್ತು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಾರ್ಗಸೂಚಿ ಉಲ್ಲಂಘಿಸಿ ಕಾಳಿ ಹುಲಿ ಮೀಸಲು ಅರಣ್ಯದ ಬಫರ್ ಪ್ರದೇಶಗಳಾದ ಸುಲಾವಳಿ, ಕರಂಜೆ, ಕಲಭಾವಿ ಗ್ರಾಮಗಳಿಂದ ಅರಣ್ಯ ವಾಸಿಗಳನ್ನು ಸ್ಥಳಾಂತರಿಸಲಾಗಿತ್ತು. ಹುಲಿ ಸಂರಕ್ಷಿತ ಪ್ರದೇಶಗಳೆಂದು ಅಧಿಸೂಚಿತ ಗೊಳ್ಳದ ಮಹದೇಶ್ವರ ಬೆಟ್ಟ, ಭೀಮಗಡ, ಚಿಂಚೋಳಿ, ದಾಂಡೇಲಿ ಸೇರಿದಂತೆ ವಿವಿಧ ಅಭಯಾರಣ್ಯಗಳು ಹಾಗೂ ರಾಷ್ಟ್ರೀಯ ಉದ್ಯಾನಗಳಲ್ಲಿ ಕೈಗೊಳ್ಳಲಾಗುತ್ತಿರುವ ಪುನರ್ವಸತಿ ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸಬೇಕು' ಎಂದು ಅವರು ಆಗ್ರಹಿಸಿದ್ದರು.

'ಪರಿಹಾರ ಅತ್ಯಲ್ಪ'

'ಕೃಷಿಯನ್ನೇ ನಂಬಿಕೊಂಡಿರುವ ಅರಣ್ಯ ವಾಸಿಗಳಿಗೆ ಅರಣ್ಯ ಇಲಾಖೆ ಕೊಡುವ ಪರಿಹಾರ ಅತ್ಯಲ್ಪ. ಭೂ ಸ್ವಾಧೀನ ಹಾಗೂ ಪುನರ್ವಸತಿ ಕಾಯ್ದೆ 2013 ರ ಪ್ರಕಾರ ಪುನರ್ವಸತಿಗೊಳ್ಳುವ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು, ಸ್ಥಳಾಂತರ ಮಾಡುವ ಸಮಯದಲ್ಲಿ ಕಡ್ಡಾಯವಾಗಿ ಜಮೀನು ನೀಡಬೇಕು. ಈ ಸಂಬಂಧ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು' ಎಂದು ದೂರಿನಲ್ಲಿ ಒತ್ತಾಯಿಸಲಾಗಿತ್ತು.

ಬಿಜೆಪಿಯ ಬಣ ಜಗಳ ಮತ್ತೆ ತಾರಕಕ್ಕೆ • ಪರಸ್ಪರ ಟೀಕಾಪ್ರಹಾರ

ಯತ್ನಾಳ– ವಿಜಯೇಂದ್ರ ಜಟಾಪಟಿ

ಪ್ರಜಾವಾಣಿ ವಾರ್ತೆ



ಬಸನಗೌಡ ಯತ್ನಾಳ

ಬೆಂಗಳೂರು: ಬಿಜೆಪಿಯ ಬಣ ಜಗಳ ಮತ್ತೆ ತಾರಕಕ್ಕೇರಿದ್ದು, ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಪರಸ್ಪರ ಟೀಕಾಪ್ರಹಾರ ನಡೆಸಿದ್ದಾರೆ.

'ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರು ಲಿಂಗಾಯತರೇ ಅಲ್ಲ' ಎಂದು ಹೇಳಿದ್ದ ಯತ್ನಾಳ ಬುಧವಾರ ವಾಗ್ದಾಳಿ ಮುಂದುವರಿಸಿ, ಯಡಿಯೂರಪ್ಪ– ವಿಜಯೇಂದ್ರ ವೀರಶೈವ ಲಿಂಗಾಯತ ಕಾರ್ಡ್ ಉಪಯೋಗಿಸಲು ಪ್ರಯತ್ನಿಸುತ್ತಿದ್ದಾರೆ. ವೀರಶೈವ-ಲಿಂಗಾಯತರು ನಿಮ್ಮನ್ನು ಒಪ್ಪುವುದಿಲ್ಲ ಎಂದು ಹೇಳಿದರು.

ವೀರಶೈವ–ಲಿಂಗಾಯತರ ಹೆಸರಿನಲ್ಲಿ ನಡೆದ ಸಭೆಯಲ್ಲಿ ಇದ್ದ ಮುಖಗಳನ್ನು ನೋಡಿದರೆ ರೆಡಿಮೇಡ್ ಬಟ್ಟೆ ಹಾಕಿ ತಂದು ಕೂರಿಸಿದಂತಿತ್ತು. ಅಲ್ಲಿ ಪ್ರತಿಷ್ಠಿತ ವ್ಯಕ್ತಿಗಳು, ಸ್ವಾಮಿಗಳು ಯಾರೂ ಇರಲಿಲ್ಲ ಎಂದರು.

ವಿಜಯೇಂದ್ರ ಗ್ಯಾಂಗಿನವರೇ ಸಭೆ ಮಾಡಿಸಿದ್ದು, ಎಂಬುದು ಜಗತ್ತಿಗೇ ಗೊತ್ತಿರುವ ವಿಚಾರ. ರಾತ್ರೋ ರಾತ್ರಿ ಶಾಮನೂರು ಶಿವಶಂಕರಪ್ಪ ಅವರ ಮನೆಗೆ ಇವರು ಹೋಗಿದ್ದು ಏಕೆ? ಅವರ ಬೆಂಬಲ ಏಕೆ ಕೇಳಿದರು. ನೀವಿಬ್ಬರೂ ಸೇರಿ ವೀರಶೈವ-ಲಿಂಗಾಯತ ಕಾರ್ಡ್ ಬಳಸಲು ಸಾಧ್ಯವಿಲ್ಲ ಎಂದು ಯತ್ನಾಳ ತಿಳಿಸಿದರು.

ವೀರಶೈವ ಲಿಂಗಾಯತರಿಗೆ 2ಎ ಮೀಸಲಾತಿ ತಪ್ಪಿಸಿದ್ದೇ ಇವರು ಎಂದು ಅವರು ಹರಿಹಾಯ್ದರು.

ಭ್ರಮೆಯಲ್ಲಿದ್ದಾರೆ: ಬಿವೈವಿ



ವಿಜಯೇಂದ್ರ

'ಯಡಿಯೂರಪ್ಪ ಅವರು ವೀರಶೈವ- ಲಿಂಗಾಯತರೇ ಅಲ್ಲ' ಎಂದು ಯತ್ನಾಳ ಅವರು ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ವಿಜಯೇಂದ್ರ, 'ಜಾತಿ ಹೆಸರು ಹೇಳಿಕೊಂಡು ರಾಜಕಾರಣ ಮಾಡಲು ಹೋದವರು ಕೇವಲ ಶಾಸಕರಾಗಿ, ಮಾಜಿಗಳಾಗಿ ಉಳಿದಿದ್ದಾರೆ' ಎಂದು ಹೇಳಿದರು.

'ನಾಡಿನಲ್ಲಿ ಎಲ್ಲ ಸಮುದಾಯ ಮತ್ತು ವರ್ಗಗಳ ವಿಶ್ವಾಸಗಳಿಸಿ ಹೋರಾಟ ಮಾಡಿಕೊಂಡು ಬೆಳೆದು ಬಂದ ಯಡಿಯೂರಪ್ಪ ಅವರು ನಾಲ್ಕು ಬಾರಿ ಮುಖ್ಯಮಂತ್ರಿ ಆಗಿ ಆ ಬಳಿಕ ಮಾಜಿಗಳಾದರು. ನಾಡಿನ ಜನರ ಪ್ರೀತಿ ವಿಶ್ವಾಸ ಗಳಿಸಿದ್ದಾರೆ' ಎಂದರು.

'ಯಡಿಯೂರಪ್ಪ ಅವರನ್ನು ಟೀಕೆ ಮಾಡಿಕೊಂಡು ರಾಜಕೀಯವಾಗಿ ಮೇಲೆ ಬರುತ್ತೇವೆ ಎಂದು ಯಾರಾದರೂ ಅಂದುಕೊಂಡಿದ್ದರೆ. ಅದು ಅವರ ಭ್ರಮೆ ಅಷ್ಟೇ' ಎಂದು ವಿಜಯೇಂದ್ರ ಕುಟುಕಿದರು.

'ಅರೆ ಹುಚ್ಚನಂತೆ ಓಡಾಡಬೇಕು'

'ಬಿ.ಎಸ್.ಯಡಿಯೂರಪ್ಪ ಅವರ ಬಗ್ಗೆ ಮಾತನಾಡುವವರು ಡಮ್ಮಿಗಳು, ಕಾಮಿಡಿ ಪೀಸ್‌ಗಳು. ಇವರು ಮುಂದೆ ತಮ್ಮ ಬಟ್ಟೆ ತಾವೇ ಹರಿದುಕೊಂಡು ಅರೆ ಹುಚ್ಚರಂತೆ ಓಡಾಡಬೇಕಾಗುತ್ತದೆ' ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರು ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಕಿಡಿಕಾರಿದ್ದಾರೆ.

'ಈ ಮನುಷ್ಯನೇ ಪೇಮೆಂಟ್ ಗಿರಾಕಿ. ಬಬಲೇಶ್ವರ ಕ್ಷೇತ್ರದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವ ತಾಕತಿಲ್ಲ. ಮ್ಯಾಚ್ ಫಿಕ್ಸಿಂಗ್ ರಾಜಕಾರಣಿ. ಸಿದ್ದಸಿರಿ ಬ್ಯಾಂಕ್‌ನಲ್ಲಿ ನಿನ್ನ ಕುಟುಂಬದವರು ಇಲ್ವಾ' ಎಂದು ಅವರು ಕೇಳಿದರು.

ಫ್ಲ್ಯಾಟ್‌ನಲ್ಲಿತ್ತು ₹2.67 ಕೋಟಿ ನಗದು • ಪ್ರಕರಣ ಇ.ಡಿಗೆ ವರ್ಗ?

ರನ್ಯಾರಿಂದ ₹17.29 ಕೋಟಿಯ ಆಭರಣ, ನಗದು ಜಪ್ತಿ

ಪ್ರಜಾವಾಣಿ ವಾರ್ತೆ



ರನ್ಯಾ ರಾವ್

ಬೆಂಗಳೂರು: ದುಬೈನಿಂದ ಚಿನ್ನ ಕಳ್ಳ ಸಾಗಣೆ ಮಾಡುತ್ತಿದ್ದ ಆರೋಪದಡಿ ಬಂಧನಕ್ಕೆ ಒಳಗಾಗಿರುವ ನಟಿ ರನ್ಯಾ ರಾವ್ ಅವರು ನೆಲಸಿದ್ದ ನಗರದ ಲ್ಯಾವೆಲ್ಲೆ ರಸ್ತೆಯ ನಂದವಾಣಿ ಮ್ಯಾನ್ಷನ್ ಫ್ಲ್ಯಾಟ್ ಮೇಲೆ ದಾಳಿ ನಡೆಸಿದ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಅಧಿಕಾರಿಗಳು, ಅಪಾರ ಪ್ರಮಾಣದ ನಗದು ಹಾಗೂ ಚಿನ್ನದ ಬಿಸ್ಕತ್‌ಗಳನ್ನು ಜಪ್ತಿ ಮಾಡಿದ್ದಾರೆ.

'ರನ್ಯಾ ರಾವ್ ಅವರನ್ನು ಫ್ಲ್ಯಾಟ್‌ಗೆ ಕರೆದೊಯ್ದು ಅವರ ಸಮ್ಮುಖದಲ್ಲೇ ಐವರು ಅಧಿಕಾರಿಗಳು ತಪಾಸಣೆ ನಡೆಸಿದರು. ಪರಿಶೀಲನೆ ವೇಳೆ ₹2.06 ಕೋಟಿ ಮೌಲ್ಯದ ಚಿನ್ನದ ಬಿಸ್ಕತ್‌ಗಳು ಹಾಗೂ ₹2.67 ಕೋಟಿ ನಗದು ಪತ್ತೆಯಾಗಿವೆ. ಇದುವರೆಗೂ ನಡೆದಿರುವ ಕಾರ್ಯಾಚರಣೆಯಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ನಗರದ ಫ್ಲ್ಯಾಟ್‌ನಲ್ಲಿ ರನ್ಯಾ ರಾವ್ ಅವರಿಂದ ಒಟ್ಟು ₹17.29 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ನಗದು ವಶಕ್ಕೆ ಪಡೆದುಕೊಂಡಂತಾಗಿದೆ' ಎಂದು ಮೂಲಗಳು ತಿಳಿಸಿವೆ.

ಆರೋಪಿಯ ವಿರುದ್ಧ 1962ರ ಕಸ್ಟಮ್ಸ್ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ.

'ಕಮಿಷನ್ ಆಸೆಗೆ ನಟಿ ದುಬೈನಿಂದ ಚಿನ್ನವನ್ನು ಕಳ್ಳ ಸಾಗಣೆ ಮಾಡಿಕೊಂಡು ಬಂದು ನಗರದಲ್ಲಿರುವ ಚಿನ್ನದ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಿದ್ದರು ಎನ್ನುವ ಅನುಮಾನವಿದೆ.

ಯಾರಿಗೆ ಚಿನ್ನದ ಬಿಸ್ಕತ್‌ಗಳನ್ನು ಮಾರಾಟ ಮಾಡುತ್ತಿದ್ದರು? ಎಷ್ಟು ಹಣ ಪಡೆದುಕೊಳ್ಳುತ್ತಿದ್ದರು ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ. ಪ್ರಕರಣದಲ್ಲಿ ಪ್ರಭಾವಿಗಳೂ ಶಾಮೀಲಾಗಿರುವ ಸಂಶಯವಿದ್ದು, ಬಾಡಿ ವಾರಂಟ್ ಮೇಲೆ ರನ್ಯಾ ರಾವ್ ಅವರನ್ನು ಮತ್ತೆ ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಇತಿಹಾಸದಲ್ಲಿ ಒಂದೇ ಪ್ರಕರಣದಲ್ಲಿ ಇಷ್ಟೊಂದು ಪ್ರಮಾಣದ ಚಿನ್ನವನ್ನು ಮೊದಲ ಬಾರಿಗೆ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಫ್ಲ್ಯಾಟ್‌ನಲ್ಲಿ ಅಪಾರ ಪ್ರಮಾಣದ ನಗದು ಸಿಕ್ಕಿದ್ದು ಪ್ರಕರಣವನ್ನು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ವರ್ಗಾವಣೆ ಮಾಡಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸೋಮವಾರ ರಾತ್ರಿ ಎಮಿರೇಟ್ಸ್ ಏರ್‌ಲೈನ್ಸ್‌ನಲ್ಲಿ ದುಬೈನಿಂದ ಬೆಂಗಳೂರಿಗೆ ರನ್ಯಾ ರಾವ್ ಬಂದಿದ್ದರು. ಆಗ ಅವರನ್ನು ವಶಕ್ಕೆ ಪಡೆದುಕೊಂಡು ಬಂಧಿಸಲಾಯಿತು. ತಪಾಸಣೆ ವೇಳೆ 14.2 ಕೆ.ಜಿ ಚಿನ್ನ ಪತ್ತೆಯಾಗಿತ್ತು.

ಮೂರು ತಿಂಗಳ ಹಿಂದಷ್ಟೇ ರಾಜಕೀಯ ಕುಟುಂಬದ ಹಿನ್ನೆಲೆಯುಳ್ಳ ಯುವಕನನ್ನು ರನ್ಯಾ ಮದುವೆ ಆಗಿದ್ದರು. ತಾಜ್ ವೆಸ್ಟ್ ಎಂಡ್‌ನಲ್ಲಿ ಮದುವೆ ಸಮಾರಂಭ ನಡೆದಿತ್ತು. ರನ್ಯಾ ಅವರ ಪತಿ ಆರ್ಕಿಟೆಕ್ಟ್ ಆಗಿದ್ದಾರೆ. ಮದುವೆಯ ಬಳಿಕ ದಂಪತಿ, ಫ್ಲ್ಯಾಟ್‌ಗೆ ಸ್ಥಳಾಂತರಗೊಂಡಿದ್ದರು. ಪ್ರತಿ ತಿಂಗಳು ಫ್ಲ್ಯಾಟ್‌ಗೆ ದುಬಾರಿ ಬಾಡಿಗೆ ಪಾವತಿಸುತ್ತಿದ್ದರು. ರನ್ಯಾ ಬರುವುದಕ್ಕೂ ಮೊದಲು ಹೊರ ರಾಜ್ಯವೊಂದರ ಮುಖ್ಯಮಂತ್ರಿಯೊಬ್ಬರ ಪುತ್ರ ವಿದ್ಯಾಭ್ಯಾಸಕ್ಕೆಂದು ಈ ಫ್ಲ್ಯಾಟ್‌ನಲ್ಲಿ ನೆಲಸಿದ್ದರು.

ಚಿನ್ನ ಸಾಗಣೆ ಮಾಡುತ್ತಿದ್ದ ಪರಿ

- ದುಬೈ ವಿಮಾನ ನಿಲ್ದಾಣಕ್ಕೆ ರನ್ಯಾ ತಲುಪುತ್ತಿದ್ದಂತೆಯೇ ಶೌಚಾಲಯಕ್ಕೆ ಚಿನ್ನದ ಬಿಸ್ಕತ್‌ಗಳನ್ನು ತಲುಪಿಸಲಾಗುತ್ತಿತ್ತು
- ಚಿನ್ನದ ಬಿಸ್ಕತ್‌ಗಳನ್ನು ಟೇಪ್ ಸಹಾಯದಿಂದ ಬೆಲ್ಟ್ ರೀತಿಯಲ್ಲಿ ಅಂಟಿಸಿಕೊಂಡು ವಿಮಾನದ ಮೂಲಕ ಬೆಂಗಳೂರಿನತ್ತ ನಟಿ ಪ್ರಯಾಣಿಸುತ್ತಿದ್ದರು
- ಉಡುಪು ಹಾಗೂ ಬ್ಯಾಗ್‌ನಲ್ಲೂ ಚಿನ್ನವನ್ನು ಬಚ್ಚಿಟ್ಟುಕೊಂಡು ಬರುತ್ತಿದ್ದರು
- ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದ ಕೂಡಲೇ ಡಿಜಿಪಿ ಪುತ್ರಿ ಎಂಬುದಾಗಿ ಅಧಿಕಾರಿಗಳಿಗೆ ತಿಳಿಸುತ್ತಿದ್ದರು. ನಿಲ್ದಾಣದ ಅಧಿಕಾರಿಗಳು ಪರಿಶೀಲನೆ ನಡೆಸದೇ ಹೊರಗೆ ಕರೆತಂದು ಕಾರಿಗೆ ಹತ್ತಿಸಿ ಕಳುಹಿಸುತ್ತಿದ್ದರು

15 ದಿನದಲ್ಲಿ 4 ಬಾರಿ ದುಬೈಗೆ

'ಒಂದು ವರ್ಷದಲ್ಲಿ ರನ್ಯಾ ರಾವ್ ಅವರು 10ಕ್ಕೂ ಹೆಚ್ಚು ಬಾರಿ ದುಬೈಗೆ ಹೋಗಿ ಬಂದಿದ್ದಾರೆ. ಕಳೆದ 15 ದಿನಗಳಲ್ಲಿ ನಾಲ್ಕು ಬಾರಿ ದುಬೈಗೆ ಹೋಗಿ ವಾಪಸ್ ಆಗಿದ್ದರು. ಪ್ರತಿ ಬಾರಿ ಬಂದಾಗಲೂ ಚಿನ್ನವನ್ನು ಕಳ್ಳ ಸಾಗಣೆ ಮೂಲಕ ತಂದಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಡಿಆರ್‌ಐ ಮೂಲಗಳು ತಿಳಿಸಿವೆ.

'ಸೋಮವಾರ ತಪಾಸಣೆ ನಡೆಸಿದಾಗ ರನ್ಯಾ ಅವರು ಹೆಚ್ಚಿನ ಚಿನ್ನಾಭರಣಗಳನ್ನು ಧರಿಸಿದ್ದರು. ಉಳಿದ ಚಿನ್ನವನ್ನು ಬಟ್ಟೆಯಲ್ಲಿ ಬಚ್ಚಿಟ್ಟುಕೊಂಡಿದ್ದರು' ಎಂದು ಅಧಿಕಾರಿಯೊಬ್ಬರು ಹೇಳಿದರು.

ಪ್ರಕರಣ ವಜಾ

'ಡಿಜಿಪಿ ಕೆ.ರಾಮಚಂದ್ರ ರಾವ್ ಅವರು ಚಿಕ್ಕಮಗಳೂರಿನಲ್ಲಿ ಕಾಫಿ ಎಸ್ಟೇಟ್ ಹೊಂದಿದ್ದ ಮಹಿಳೆಯನ್ನು ಎರಡನೇ ಮದುವೆ ಆಗಿದ್ದರು. ರಾಮಚಂದ್ರ ರಾವ್ ಅವರ ಮಲಮಗಳು ನಾನು ಎಂಬುದಾಗಿ ರನ್ಯಾ ವಿಚಾರಣೆ ವೇಳೆ ಹೇಳಿಕೊಂಡಿದ್ದಾರೆ. ರಾಮಚಂದ್ರ ರಾವ್ ಆಂಧ್ರ ಪ್ರದೇಶದವರು. ಕರ್ನಾಟಕ ಕೇಡರ್‌ನ ಅಧಿಕಾರಿ. 2023ರಲ್ಲಿ ಇವರಿಗೆ ಬಡ್ತಿ ನೀಡಿ ಪೊಲೀಸ್ ವಸತಿ, ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ ವರ್ಗಾವಣೆ ಮಾಡಲಾಗಿತ್ತು' ಎಂದು ಮೂಲಗಳು ಹೇಳಿವೆ.

'ರಾಮಚಂದ್ರ ರಾವ್, 2014ರಲ್ಲಿ ದಕ್ಷಿಣ ವಲಯದ ಐಜಿಪಿ ಆಗಿದ್ದರು. ಆಗ ₹2.20 ಕೋಟಿ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದ ಆರೋಪ ಇವರ ಮೇಲಿತ್ತು. ನ್ಯಾಯಾಲಯದಲ್ಲಿ ಪ್ರಕರಣ ವಜಾಗೊಂಡಿತ್ತು' ಎಂದು ಮೂಲಗಳು ಹೇಳಿವೆ.

ಬಿಬಿಎಂಪಿ ಬದಲು ಗರಿಷ್ಠ 7 ನಗರ ಪಾಲಿಕೆ ಸಾಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಆಡಳಿತ ಪ್ರಾಧಿಕಾರ'ದಡಿ ಬಿಬಿಎಂಪಿ ಬದಲು ಗರಿಷ್ಠ ಏಳು ನಗರ ಪಾಲಿಕೆಗಳನ್ನು ರಚಿಸಬೇಕು, ಮೇಯರ್‌ಗೆ 30 ತಿಂಗಳ ಅಧಿಕಾರ ಅವಧಿ ಇರಬೇಕು ಎಂದು ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿ ಶಿಫಾರಸು ಮಾಡಿದೆ.

ಸಮಿತಿಯ ಅಧ್ಯಕ್ಷ ರಿಜ್ವಾನ್ ಅರ್ಷದ್ ಅವರು ವಿಧಾನಸಭೆಯಲ್ಲಿ ಬುಧವಾರ ವರದಿ ಮಂಡಿಸಿದರು.

'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024' ಅನ್ನು 2024ರ ಜುಲೈ 25ರಂದು ವಿಧಾನಸಭೆಯಲ್ಲಿ ಮಂಡಿಸಿದಾಗ, ಸದಸ್ಯರು ಆಕ್ಷೇಪಿಸಿದ್ದರು. ಸದನ ಸಮಿತಿಗೆ ವಹಿಸಲು ಒತ್ತಾಯಿಸಿದ್ದರಿಂದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಸೂದೆಯನ್ನು ಪರಿಶೀಲಿಸಲು, ಸದನ ಸಮಿತಿ ರಚಿಸುವ ಭರವಸೆ ನೀಡಿದ್ದರು. ಅದರಂತೆ, ವಿಧಾನ ಸಭಾಧ್ಯಕ್ಷರು 2024ರ ಆಗಸ್ಟ್ 22ರಂದು 'ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿ' ರಚಿಸಿ, ರಿಜ್ವಾನ್ ಅರ್ಷದ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದರು.

'ಸಮಿತಿಯು ನಗರಾಭಿವೃದ್ಧಿ ಇಲಾಖೆ, ಸಂಸದೀಯ ವ್ಯವಹಾರಗಳು, ಶಾಸನ ರಚನಾ ಇಲಾಖೆ, ಕಾನೂನು ಇಲಾಖೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದೆ. ಅಲ್ಲದೆ, ನಗರವನ್ನು ಪ್ರತಿನಿಧಿಸುವ ಶಾಸಕರಿಂದ ಸಲಹೆ ಪಡೆದುಕೊಳ್ಳಲಾಗಿದೆ. ನಾಗರಿಕರು, ಸಂಘ–ಸಂಸ್ಥೆಗಳಿಂದಲೂ ಅಭಿಪ್ರಾಯ ಸ್ವೀಕರಿಸಿ, ಹಲವು ಬದಲಾವಣೆಗೆ ಸಲಹೆ ನೀಡಿ, ವರದಿಯನ್ನು ಸಿದ್ಧಪಡಿಸಿ ಮಂಡಿಸಲಾಗಿದೆ' ಎಂದು ರಿಜ್ವಾನ್ ಮಾಹಿತಿ ನೀಡಿದ್ದಾರೆ.

ಆರ್ಥಿಕ ಅಧಿಕಾರ ಇಲ್ಲ: 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ಕ್ಕೆ (ಜಿಬಿಎ) ನಗರ ಪಾಲಿಕೆಗಳ ತೆರಿಗೆ, ಶುಲ್ಕ, ಉಪಕರ ಮತ್ತು ಬಳಕೆದಾರರ ಶುಲ್ಕಗಳ ದರಗಳಿಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರ ಇರುವಂತಿಲ್ಲ' ಎಂದು ವರದಿಯಲ್ಲಿ ತಿಳಿಸಲಾಗಿದೆ.

4A ಪುಟ ನೋಡಿ

ಸಹಕಾರ ಸಂಘ: ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಯಲಹಂಕ: ಬ್ಯಾಟರಾಯನಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಸರೋಜಮ್ಮ ಮುನಿರಾಜು ಹಾಗೂ ಉಪಾಧ್ಯಕ್ಷರಾಗಿ ಸಿ.ಭಾಸ್ಕರ್ ಆಯ್ಕೆಯಾಗಿದ್ದಾರೆ.

ಸಚಿವ ಕೃಷ್ಣಬೈರೇಗೌಡ, ಸಂಘದ ಮಾಜಿ ಅಧ್ಯಕ್ಷ ಎ.ಮುನಿರಾಜು, ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಕೆ.ಗೌರೀಶ್, ಹನುಮಂತು, ಗುರು, ಜೋಡಿದಾರ್ ಹರೀಶ್, ಬಿ.ಕೆ.ಮಂಜುನಾಥ್, ನಿರ್ದೇಶಕರಾದ ಶ್ರೀನಾಥ್, ಕೆ.ಅನುರಾಧ, ಅಶೋಕ್‌ಗೌಡ, ಮುನೇಗೌಡ, ಮಂಜುನಾಥರೆಡ್ಡಿ ಅವರು ಅಧ್ಯಕ್ಷರು, ಉಪಾಧ್ಯಕ್ಷರನ್ನು ಅಭಿನಂದಿಸಿದರು.

TENDER NOTICE

OFFICE OF THE DIGP GROUP CENTRE
CRPF, YELAHANKA, BENGALURU - 560064.

No. A.II-04/2024-25 GC BLR Bldg. dated 04/02/2025

Sealed tenders for plucking of fruit from plants inside the CRPF Camp premises at Yelahanka, Bengaluru.

1. Mango - 269 Trees, 2. Jack fruit - 76 Trees,
3. Tamarind - 50 Trees, 4. Chiku -181 Trees,
5. Jamun -181 Trees, 6. Coconut - 53 Trees

Grand Total:- 810 Trees.

2. Sealed tender will be opened on 18/03/2025 at 1100 Hrs. Willing Firm/ Contractor can participate in the tender by depositing an earnest money of Rs. 20,000/- only. After the opening of the tender, the responsibility of taking care of the above trees will be of contractor/firm. The DIGP-Cum-Estate officer has reserves the right to cancel the tender without giving any reason.
3 The Tender forms, details of earnest money with terms and conditions may be obtained from Group Centre CRPF Yelahanka, Bengaluru-560064 within 07 days from the date of advertisement.

Order By
DIGP, GC CRPF BENGALURU.

PM SHRI SCHOOL JAWAHAR NAVODAYA VIDYALAYA
Doddaballapur, Bangalore Rural

TENDER NOTIFICATION Date: 06.03.2025

Sealed Tenders are invited from the reputed firms/manufacturers/ suppliers / distributors/Services for the supply of items for the year **2025-26. 1. RICE 2. GROCERIES 3. VEGETABLES & FRUITS, 4. BAKERY ITEMS, 5. EGG AND CHICKEN, 6. BEDDING ITEMS (BED, BLANKET, BED SHEET, TOWEL, PILLOW COVER), 7. BELT, TIE, T-SHIRT, TRACKSUIT, SWEATERS, 8. WHITE & BLACK SCHOOL SHOES, HAWAI SLIPPERS, SOCKS, 09. SCHOOL BAG 10. UNIFORM WASHING & PRESSING, 11. HAIR CUTTING, 12. TOILETRY ITEMS, 13. LABOUR OUTSOURCING, 14. M&R ITEMS – (Electrical and Plumbing/ Painting/Cement/Tiles/Granite.) 15. SALE OF SCRAP ITEMS, 16. SALE OF CROPS (TAMARIND, MANGO & JACK FRUIT), 17. SALE OF OLD MILK COVERS/OLD OIL TINS/ MESS WASTE & OLD NEWS PAPERS, OUTDATED TEXT BOOKS AND WASTE IRON MATERIALS etc. 18. TUCK SHOP, 19. SPORTS ITEMS** The Tender documents/details may be obtained from the Office of the Principal, Jawahar Navodaya Vidyalaya, Doddaballapura between 9.00 A.M to 4.00 P.M on all working days from 06-03-2025 by paying an amount of Rs. 200/- (Two hundred only) by Cash or **Digital payment to Vidyalaya SB A/c. No.10532695378, SBI, Bashettihalli Branch** which is non-refundable and the tender schedule can be downloaded from the Vidyalaya website https://www.navodaya.gov.in/nvs/nvs-school/ BANGALORERURAL/ en/home. While submitting the Tender form, the payment slips of Rs. 200/- must be enclosed. The last date for sale of tender forms is 26-03-2025 by 4.00 PM and the submission of sealed tender is 27-03-2025 by **4.00 PM** by **BYHAND/SPEED/REGISTERED POST/COURIER.** The sealed tenders will be opened on 28-03-2025 at 11.00 am in the Office of the Principal, Jawahar Navodaya Vidyalaya, Doddaballapura, Bangalore Rural District. Contact number: 8116438494 (Principal)/ 7981061072 (SSA)

Sd/- PRINCIPAL

ಖಾಸಗಿ ಕಲಾ ಕೇಂದ್ರ ನಿರ್ಮಾಣಕ್ಕೆ ಉದ್ಯಮಿಗೆ ಐದು ಎಕರೆ ಜಮೀನು ನೀಡುವ ಪ್ರಸ್ತಾವ: ಸಾರ್ವಜನಿಕರ ವಿರೋಧ

ಕಬ್ಬನ್ ಉದ್ಯಾನ: ಪರಿಸರಕ್ಕೆ ಧಕ್ಕೆಯಾಗದಿರಲಿ

• ಖಲೀಲಅಹ್ಮದ ಶೇಖ

ಬೆಂಗಳೂರು: ಅಭಿವೃದ್ಧಿ ಹೆಸರಿನಲ್ಲಿ ಕಬ್ಬನ್ ಉದ್ಯಾನದಲ್ಲಿ ಆಗಾಗ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಹಾಗೂ ಖಾಸಗಿಯವರಿಗೆ ಜಾಗ ನೀಡುವ ಪ್ರಸ್ತಾವಗಳಿಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುತ್ತಿರುವುದಕ್ಕೆ ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿದ್ದಾರೆ.

ನಗರದ ಹೃದಯ ಭಾಗದಲ್ಲಿರುವ ಈ ಉದ್ಯಾನದ ಐದು ಎಕರೆ ಜಾಗವನ್ನು ಖಾಸಗಿ ಕಲಾ ಕೇಂದ್ರ ನಿರ್ಮಿಸಲು ಉದ್ಯಮಿಯೊಬ್ಬರಿಗೆ ಅವಕಾಶ ನೀಡುವ ಕುರಿತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಚರ್ಚಿಸಲಾಗಿದೆ. ಇದು ವಾಯು ವಿಹಾರಿಗಳು ಹಾಗೂ ಪರಿಸರ ಪ್ರೇಮಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಕಬ್ಬನ್ ಉದ್ಯಾನ 300 ಎಕರೆ ವ್ಯಾಪ್ತಿಯಲ್ಲಿ ಹರಡಿಕೊಂಡಿತ್ತು. ಸರ್ಕಾರ ಅಭಿವೃದ್ಧಿ ಹೆಸರಿನಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಸ್ಥಳಾವಕಾಶ ನೀಡಿದ್ದರಿಂದ ಈಗ 197 ಎಕರೆಗೆ ಕುಗ್ಗಿದೆ. ಉದ್ಯಾನದಲ್ಲಿ ವಿವಿಧ ಜಾತಿಯ 8,837 ಮರಗಳಿದ್ದು, 197ಕ್ಕೂ ಹೆಚ್ಚು ಪಾರಂಪರಿಕ ಪ್ರಭೇದಗಳಿವೆ. ಕಬ್ಬನ್ ಉದ್ಯಾನದಲ್ಲಿ ನೂರಾರು ವರ್ಷಗಳಷ್ಟು ಹಳೆಯದಾದ ಸಾವಿರಾರು ಮರಗಳಿವೆ. ಪ್ರತಿ ಮರವೂ ವಿಭಿನ್ನವಾದ ಗುಣಲಕ್ಷಣಗಳನ್ನು ಒಳಗೊಂಡಿದೆ.

ಕಬ್ಬನ್ ಉದ್ಯಾನದಲ್ಲಿ ಈಗಾಗಲೇ ಕರ್ನಾಟಕ ಸರ್ಕಾರಿ ನೌಕರರ ಸಂಘ, ಕರ್ನಾಟಕ ರಾಜ್ಯ ಲಾನ್ ಟೆನಿಸ್ ಕ್ರೀಡಾಂಗಣ, ಸೆಂಚುರಿ ಕ್ಲಬ್, ಒಂಬತ್ತು ಎಕರೆ ಪ್ರದೇಶದಲ್ಲಿರುವ ಬಾಲಭವನ, ಹೈಕೋರ್ಟ್, ಲೋಕೋಪಯೋಗಿ ಇಲಾಖೆ, ಪೊಲೀಸ್ ಕಚೇರಿ, ಮತ್ಸ್ಯಾಲಯ, ವೆಂಕಟಪ್ಪ ಕಲಾ ಕೇಂದ್ರ, ವಿಶ್ವೇಶ್ವರಯ್ಯ ಮ್ಯೂಸಿಯಂ, ಬೆಂಗಳೂರು ಜಲಮಂಡಳಿಗೆ ಸಂಬಂಧಿಸಿದ ಕಟ್ಟಡಗಳಿವೆ. ಈಗ ಮತ್ತೊಂದು ಖಾಸಗಿ ಕಲಾ ಕೇಂದ್ರ ಪ್ರಾರಂಭಿಸಿದರೆ ಪರಿಸರ ಹಾಗೂ ಇಲ್ಲಿನ ಜೀವಸಂಕುಲಕ್ಕೆ ಹಾನಿಯಾಗಲಿದೆ.

'ಕಬ್ಬನ್ ಉದ್ಯಾನದಲ್ಲಿ ಒಂದು ವರ್ಷದ ಹಿಂದೆ 10 ಅಂತಸ್ತಿನ ಕಟ್ಟಡ ನಿರ್ಮಿಸಲು ಸರ್ಕಾರ ಅನುಮತಿ ನೀಡಿತ್ತು. ಇದಕ್ಕೆ ನಡಿಗೆದಾರರ ಸಂಘವು ವಿರೋಧ ವ್ಯಕ್ತಪಡಿಸಿ, ಪ್ರತಿಭಟನೆ ನಡೆಸಿದ್ದರಿಂದ ಈ ಪ್ರಸ್ತಾವ ಕೈಬಿಟ್ಟಿತ್ತು. ಉದ್ಯಾನದಲ್ಲಿ ಯಾವುದೇ ರೀತಿಯ ಕಟ್ಟಡಗಳ ನಿರ್ಮಾಣಕ್ಕೆ ತೋಟಗಾರಿಕೆ ಇಲಾಖೆ ಅನುಮತಿ ನೀಡಬಾರದು' ಎಂದು ನಡಿಗೆದಾರರ ಸಂಘದ ಅಧ್ಯಕ್ಷ ಎಸ್. ಉಮೇಶ್ ಒತ್ತಾಯಿಸಿದರು.


'ಇಡೀ ಬೆಂಗಳೂರು ನಗರಕ್ಕೆ ರಮಣೀಯವಾದ ಸ್ಥಳಗಳೆಂದರೆ ಲಾಲ್‌ಬಾಗ್ ಮತ್ತು ಕಬ್ಬನ್ ಉದ್ಯಾನಗಳು. ಇಲ್ಲಿರುವ ಮರಗಳು ಇಡೀ ನಗರಕ್ಕೆ ಆಮ್ಲಜನಕವನ್ನು ಪೂರೈಸುತ್ತವೆ. ನಗರದ ಈ ಎರಡು ಉದ್ಯಾನಗಳನ್ನು ಸಂರಕ್ಷಿಸುವುದು ಸರ್ಕಾರ ಮತ್ತು ಸಾರ್ವಜನಿಕರ ಜವಾಬ್ದಾರಿ ಆಗಿದೆ' ಎಂದರು.

ಅಂಕಿ–ಅಂಶಗಳು

197 ಎಕರೆ 30 ಗುಂಟೆ
ಕಬ್ಬನ್ ಉದ್ಯಾನದ ವಿಸ್ತೀರ್ಣ

8,837
ಉದ್ಯಾನದಲ್ಲಿರುವ ಮರಗಳು

197
ಪಾರಂಪರಿಕ ಪ್ರಭೇದದ ಮರಗಳು



'ಖಾಸಗಿಯವರಿಗೆ ಅವಕಾಶ ಬೇಡ'

ಕಬ್ಬನ್ ಉದ್ಯಾನದಲ್ಲಿ ಖಾಸಗಿ ಕಲಾ ಕೇಂದ್ರ ನಿರ್ಮಿಸಲು ಸರ್ಕಾರ ಅವಕಾಶ ನೀಡಬಾರದು ಎಂದು ಸಂಸದ ಪಿ.ಸಿ. ಮೋಹನ್ ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ಕಬ್ಬನ್ ಉದ್ಯಾನದಲ್ಲಿ ಕಟ್ಟಡ ನಿರ್ಮಾಣ ಮಾಡುವುದು ಕರ್ನಾಟಕ ಸರ್ಕಾರದ ಉದ್ಯಾನ ಸಂರಕ್ಷಣೆ ಕಾಯ್ದೆ 1975ರ ಉಲ್ಲಂಘನೆ ಆಗುತ್ತದೆ. ಆದ್ದರಿಂದ ಬೆಂಗಳೂರಿನ ಸಾಂಸ್ಕೃತಿಕ ಕೇಂದ್ರವಾಗಿರುವ ಕಬ್ಬನ್ ಉದ್ಯಾನ ಸಂರಕ್ಷಿಸಬೇಕು ಎಂದು ತಿಳಿಸಿದ್ದಾರೆ.

ಅಭಿಪ್ರಾಯ ಕಳುಹಿಸಿ

ಕಬ್ಬನ್ ಉದ್ಯಾನದಲ್ಲಿ ಖಾಸಗಿ ಕೇಂದ್ರ ನಿರ್ಮಿಸುವ ಕುರಿತು ಚರ್ಚೆ ನಡೆಯುತ್ತಿದೆ. ಈ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ.

ವಾಟ್ಸ್‌ಆ್ಯಪ್ ಸಂಖ್ಯೆ: 96060 38256

ಕೆಪಿಎಸ್‌ಸಿ: ಮರುಪರೀಕ್ಷೆ ನಡೆಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳಲ್ಲಿ ಲೋಪದೋಷಗಳು ಕಂಡು ಬಂದ ಕಾರಣ ಮರುಪರೀಕ್ಷೆ ನಡೆಸಬೇಕು ಎಂದು ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ಸರ್ಕಾರಕ್ಕೆ ಆಗ್ರಹಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಯೋಗದ ರಾಜ್ಯಾಧ್ಯಕ್ಷ ಬಿ.ಟಿ. ಚಂದ್ರಶೇಖರ್, 'ಕೆಪಿಎಸ್‌ಸಿ ನಡೆಸುವ ಪರೀಕ್ಷೆಗಳು ಅನೇಕ ಆಕಾಂಕ್ಷಿಗಳ ಭವಿಷ್ಯವನ್ನು ನಿರ್ಧರಿಸುತ್ತವೆ. ಇದಕ್ಕಾಗಿ ಹಗಲು–ರಾತ್ರಿ ಅಭ್ಯರ್ಥಿಗಳು ಶ್ರಮಿಸುತ್ತಾರೆ. ಆಯೋಗ ನಡೆಸಿದ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿ ತಪ್ಪುಗಳು ಪುನರಾವರ್ತನೆ ಆಗಿರುವುದರಿಂದ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಕನ್ನಡಕ್ಕೆ ಭಾಷಾಂತರಿಸುವಾಗ ಆಗಿರುವ ಲೋಪಕ್ಕೆ ಸಂಬಂಧಿಸಿದಂತೆ ಕನ್ನಡ ಪರ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು. ಈ ವೇಳೆ ಸರ್ಕಾರವು ಎರಡು ದಿನಗಳ ಕಾಲಾವಕಾಶವನ್ನು ಪಡೆದುಕೊಂಡಿತ್ತು. ಈವರೆಗೂ ಸರ್ಕಾರ ಕ್ರಮವಹಿಸದೆ, ಜಾಣ ಮೌನವಹಿಸಿದೆ. ಸಮಸ್ಯೆ ಸರಿಪಡಿಸದಿದ್ದರೆ ಸರ್ಕಾರದ ವಿರುದ್ಧ ದಂಗೆ ಏಳಬೇಕಾಗುತ್ತದೆ' ಎಂದು ಎಚ್ಚರಿಸಿದರು.

'ಕಳೆದ ಡಿಸೆಂಬರ್‌ನಲ್ಲಿ ನಡೆಸಿದ ಪರೀಕ್ಷೆಗಳನ್ನು ರದ್ದುಗೊಳಿಸಿ, ಮರುಪರೀಕ್ಷೆ ನಡೆಸಬೇಕು. ಈ ಬಗ್ಗೆ ಶೀಘ್ರವೇ ಸೂಕ್ತ ಕ್ರಮಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಅನ್ಯಾಯ ಸರಿಪಡಿಸಿ'

ಬೆಂಗಳೂರು: 'ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ನಡೆದ ಮರು ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮ ಹಾಗೂ ಗ್ರಾಮೀಣ ಭಾಗದ ಅಭ್ಯರ್ಥಿಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು' ಎಂದು ಕರುನಾಡ ವಿಜಯಸೇನೆ ರಾಜ್ಯ ಘಟಕದ ಅಧ್ಯಕ್ಷ ಎಚ್.ಎನ್. ದೀಪಕ್ ಆಗ್ರಹಿಸಿದ್ದಾರೆ.

'ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುವ ಪರೀಕ್ಷೆಗಳಲ್ಲಿ ಹಲವಾರು ಲೋಪಗಳು ಆಗುತ್ತಿವೆ. ಆದರೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪರೀಕ್ಷೆಯ ಕನ್ನಡ ಪ್ರಶ್ನೆ ಪತ್ರಿಕೆಯಲ್ಲಿ ತಪ್ಪುಗಳು ನುಸುಳಿವೆ. ಪರೀಕ್ಷಾ ನಿಯಂತ್ರಕರು ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ನೀಡದೇ ಅಕ್ರಮಕ್ಕೆ ದಾರಿ ಮಾಡಿಕೊಟ್ಟಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ಅನ್ಯಾಯವನ್ನು ಸರಿಪಡಿಸಿ, ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಯುಪಡೆ ಸ್ವಾಧೀನದ ಅರಣ್ಯಭೂಮಿ ಮರು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೀಣ್ಯ ಪ್ಲಾಂಟೇಷನ್ ಮತ್ತು ಜಾರಕಬಂಡೆ ಕಾವಲು ಪ್ರದೇಶದಲ್ಲಿ ಭಾರತೀಯ ವಾಯುಪಡೆಯ ವಶದಲ್ಲಿರುವ 444.12 ಎಕರೆ ಅರಣ್ಯ ಭೂಮಿಯನ್ನು ನಿಯಮಾನುಸಾರ ಮತ್ತೆ ವಶಪಡಿಸಿಕೊಳ್ಳಬೇಕು' ಎಂದು ಇಲಾಖೆಯ ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ.



ಈಶ್ವರ ಖಂಡ್ರೆ

1987ರಲ್ಲಿ ವಾಯುಪಡೆಗೆ ಮಂಜೂರು ಮಾಡಿದ್ದ 570 ಎಕರೆ ಭೂಮಿಯಲ್ಲಿ ಅರಣ್ಯ ಎಂದು ಅಧಿಸೂಚನೆ ಹೊರಡಿಸಿರುವ 452 ಎಕರೆ ಭೂಮಿ ಮಂಜೂರಾತಿಯನ್ನು ರದ್ದುಪಡಿಸಿ 2017ರಲ್ಲಿಯೇ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆದರೂ ವಾಯುಪಡೆಯ ಅಧಿಕಾರಿಗಳು ಅರಣ್ಯ ತೀರುವಳಿ (ಎಫ್‌ಸಿ) ಅನುಮತಿ ಪಡೆಯದೆ ಮಾರ್ಚ್ 1ರಂದು ಅಕ್ರಮವಾಗಿ ನಿರ್ಮಾಣ ಕಾಮಗಾರಿ ಆರಂಭಿಸಿದ್ದರು. ಕಾಮಗಾರಿ ನಡೆಸದಂತೆ ತಡೆಯಲಾಗಿದೆ ಎಂದು ಅಧಿಕಾರಿಗಳು ಗಮನಕ್ಕೆ ತಂದ ಬೆನ್ನಲ್ಲೆ ಸಚಿವರು ಈ ನಿರ್ದೇಶನ ನೀಡಿದ್ದಾರೆ.

'ಸರ್ಕಾರದ 2017ರ ಆದೇಶದ ಅನ್ವಯ ಮ್ಯುಟೇಷನ್ ಆಗಿದ್ದು, ವಾಯುಪಡೆ ಅಧಿಕಾರಿಗಳ ಗಮನಕ್ಕೆ ತಂದ ಬಳಿಕ ಈ ಜಮೀನು 'ಮೀಸಲು ಅರಣ್ಯ' ಎಂದು ಫಲಕ ಹಾಕಲಾಗಿದೆ. ಈ ಅರಣ್ಯ ಭೂಮಿಯನ್ನು ತೆರವು ಮಾಡುವಂತೆ ರಕ್ಷಣಾ ಸಚಿವಾಲಯಕ್ಕೆ ಪತ್ರ ಬರೆಯಲಾಗಿದೆ. ಪ್ರಸ್ತುತ 444.12 ಎಕರೆ ಜಮೀನಿನ ಪೈಕಿ, ಸುಮಾರು 15 ಎಕರೆ ಪ್ರದೇಶದಲ್ಲಿ ವಾಯುಪಡೆ ಶೂಟಿಂಗ್ ರೇಂಜ್ ನಿರ್ಮಿಸಿಕೊಂಡು ತರಬೇತಿ ನೀಡುತ್ತಿದೆ. ಸ್ವಲ್ಪ ಜಮೀನಿನಲ್ಲಿ ವಾಯು ಪಡೆಯ ಕಚೇರಿ ಇದೆ. ಉಳಿದ ಭೂಮಿಯು ಅರಣ್ಯ ಸ್ವರೂಪದಲ್ಲಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾಗಿ ಖಂಡ್ರೆ ಹೇಳಿದ್ದಾರೆ.

'ಅರಣ್ಯ ಸ್ವರೂಪದಲ್ಲಿರುವ ಜಮೀನು ವಶಕ್ಕೆ ಪಡೆಯಲು ಕಾನೂನು ಕ್ರಮ ಕೈಗೊಳ್ಳಬೇಕು. ತಾನು ಉಪಯೋಗಿಸುತ್ತಿರುವ ಜಮೀನಿಗೆಸಂಬಂಧಿಸಿದಂತೆಪರ್ವೇಶ್‌ಪೋರ್ಟಲ್‌ನಲ್ಲಿನಿಯಮಾನುಸಾರ ಅರ್ಜಿ ಹಾಕಿ, ಎಫ್‌ಸಿ ಪಡೆಯುವಂತೆ ವಾಯುಪಡೆಗೆ ಪತ್ರ ಬರೆಯಬೇಕು' ಎಂದೂ ಅಧಿಕಾರಿಗಳಿಗೆ ಖಂಡ್ರೆ ಆದೇಶಿಸಿದ್ದಾರೆ.

ಸಾಹಿತ್ಯ ಯುಗಾದಿ 23ಕ್ಕೆ

ಬೆಂಗಳೂರು: ವೀರಲೋಕ ಪ್ರಕಾಶನವು ಇದೇ 23ರಂದು ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್) ಸಾಹಿತ್ಯ ಯುಗಾದಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಹತ್ತು ಪುಸ್ತಕಗಳು ಬಿಡುಗಡೆಯಾಗಲಿವೆ.

'ಈ ಸಾಹಿತ್ಯ ಯುಗಾದಿ ಕಾರ್ಯಕ್ರಮದಲ್ಲಿ ಸುಮಾರು ಒಂದು ಸಾವಿರ ಓದುಗರು ಪಾಲ್ಗೊಳ್ಳಲಿದ್ದಾರೆ. ಐದು ನೂರಕ್ಕೂ ಹೆಚ್ಚು ಹೊಸ ಓದುಗರು ಭಾಗವಹಿಸಲಿದ್ದಾರೆ. ಬೆಂಗಳೂರು ನಗರ ವ್ಯಾಪ್ತಿಯ ಎಲ್ಲ ಕಾಲೇಜುಗಳಿಗೂ ಭೇಟಿ ಮಾಡಿ, ಸಾಹಿತ್ಯಾಸಕ್ತಿ ಇರುವ ಹತ್ತು ವಿದ್ಯಾರ್ಥಿಗಳನ್ನು ಪ್ರತಿ ಕಾಲೇಜಿನಿಂದಲೂ ಆಹ್ವಾನಿಸುತ್ತಿದ್ದೇವೆ. ಈ ವಿದ್ಯಾರ್ಥಿಗಳ ಜತೆಗೆ ಸಾಹಿತ್ಯಲೋಕದ ನೂರಾರು ಸಾಧಕರೂ ಅಂದು ಭಾಗವಹಿಸಲಿದ್ದಾರೆ' ಎಂದು ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ ತಿಳಿಸಿದ್ದಾರೆ.

'ವಿದ್ಯಾರ್ಥಿಗಳು ಕನ್ನಡ ಪುಸ್ತಕಗಳೆಡೆಗೆ ಒಲವು ಬೆಳೆಸಿಕೊಳ್ಳಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ. ಲೇಖಕರಾದ ಎಸ್. ದಿವಾಕರ್, ಜಯಶ್ರೀ ಕಾಸರವಳ್ಳಿ, ಎಂ.ವೆಂಕಟಸ್ವಾಮಿ, ಚೇತನ್ ಬಡಿಗೇರ್, ಅರ್ಜುನ್ ದೇವಾಲದಕೆರೆ, ರಾಜಶೇಖರ್ ಎಂ., ನಡಹಳ್ಳಿ ವಸಂತ್, ನಟರಾಜ ಅರಳಸುರಳಿ, ಪ್ರಸಾದ್ ನಾಯ್ಕ್ ಹಾಗೂ ಪ್ರಸಾದ್ ಶೆಣೈ ಅವರ ಕೃತಿಗಳು ಬಿಡುಗಡೆಯಾಗಲಿವೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸೀಮಾ ರಾಣಿಗೆ ದತ್ತಿ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಡಾ. ಎಚ್.ಕೆ.ಮರಿಯಪ್ಪ ದತ್ತಿ ಪ್ರಶಸ್ತಿ'ಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಸೀಮಾ ರಾಣಿ ಆಯ್ಕೆಯಾಗಿದ್ದಾರೆ.



ಡಾ.ಸೀಮಾ ರಾಣಿ

ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಪರಿಗಣಿಸಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ವೈದ್ಯಕೀಯ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ ಡಾ.ಎಚ್.ಕೆ. ಮರಿಯಪ್ಪ ಅವರು ಪರಿಷತ್ತಿನಲ್ಲಿ ಈ ದತ್ತಿ ಸ್ಥಾಪಿಸಿದ್ದಾರೆ.

ಡಾ.ಸೀಮಾ ರಾಣಿ ಅವರು ಕೋವಿಡ್ ಸಂದರ್ಭದಲ್ಲಿ ಸಲ್ಲಿಸಿದ ಸೇವೆಯನ್ನು ಈ ಆಯ್ಕೆಗೆ ಪರಿಗಣಿಸಲಾಗಿದೆ. ಇದೇ 13 ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆರೋಗ್ಯ ಅಧಿಕಾರಿ (ಕ್ಲಿನಿಕಲ್)ರವರ ಕಛೇರಿ, 2ನೇ ಮಹಡಿ, ಅನೆಕ್ಸ್–2 ಕಟ್ಟಡ, ಎನ್. ಆರ್. ಚೌಕ, ಬೆಂಗಳೂರು – 560 002.

ಸಂ: ಬಿಬಿಎಂಪಿ/2024–25/ಎಸ್‌ಇ1362 ದಿನಾಂಕ: 05.03.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು, **"ಬಿಬಿಎಂಪಿ ಹೆರಿಗೆ ಆಸ್ಪತ್ರೆಗಳು, ರೆಫರಲ್ ಆಸ್ಪತ್ರೆಗಳು ಹಾಗೂ ಡಯಾಲಿಸಿಸ್ ಕೇಂದ್ರಗಳಲ್ಲಿ ಸಾಮಾನ್ಯ ಜೈವಿಕ ವೈದ್ಯಕೀಯ ತ್ಯಾಜ್ಯ ಸಂಸ್ಕರಣಾ ಸೌಲಭ್ಯಗಳಿಂದ ಉತ್ಪತ್ತಿಯಾಗುವ ಜೈವಿಕ ವೈದ್ಯಕೀಯ ತ್ಯಾಜ್ಯದ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಗಾಗಿ" ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ನೋಂದಾಯಿತರಾಗಿರುವ** ಅರ್ಹ ಬಿಡ್ಡುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಉಲ್ಲೇಖ ಸಂಖ್ಯೆ	ಬಿಬಿಎಂಪಿ/2024–25/ಎಸ್‌ಇ1362
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಕ ದಿನಾಂಕ:	05.03.2025 ರಿಂದ
ಪೂರ್ವಭಾವಿ ಸಭೆ ದಿನಾಂಕ ಮತ್ತು ಸ್ಥಳ	10.03.2025 ರ 11.00 ಗಂಟೆಗೆ. ಮುಖ್ಯ ಆರೋಗ್ಯ ಅಧಿಕಾರಿ (ಕ್ಲಿನಿಕಲ್)ರವರ ಕಛೇರಿ, 2ನೇ ಮಹಡಿ, ಅನೆಕ್ಸ್–3 ಕಟ್ಟಡ, ಎನ್.ಆರ್.ಚೌಕ, ಬೆಂಗಳೂರು–560002.
ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:	19.03.2025 ರ ಸಂಜೆ 5.00 ಗಂಟೆಯವರೆಗೆ
ಕೆಪಿಪಿ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	20.03.2025 ರ ಸಂಜೆ 5.10 ಗಂಟೆಗೆ

ಹೆಚ್ಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ https://kppp.karnataka.gov.in ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ಆರೋಗ್ಯ ಅಧಿಕಾರಿ(ಕ್ಲಿನಿಕಲ್).

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್ : ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ.

I. ಸಂಖ್ಯೆ: ಅ.ಇಂ(ವಿ)/ಪ್ರ(ಕಾ)/ದಕ್ಷಿಣ/ಕಾ.ಇಂ(ಕ)/ಸ.ಕಾ.ಇಂ–1/ಕ–321–01/24–25/9392–93 ದಿನಾಂಕ: 04.03.2025

ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಟಿಆರ್(ಎಂ)/ಬಿಎಂಎಝಡ್(ಎಸ್)/ಇಇ(ಓ)/ಎಇಇ–1/ಇ.ಪಿ.ಆರ್–56 ಕರೆ–9 ದಿನಾಂಕ: 31.12.2022 ರಂತೆ ಕಾರ್ಯಾಚರಣೆ ವೃತ್ತ–ದಕ್ಷಿಣ, ಕವಿಪ್ರನಿನಿ ವ್ಯಾಪ್ತಿಗೆ ಬರುವ 220ಕೆವಿ Sir.M.V (EDC) ಸ್ವೀಕರಣಾ ಕೇಂದ್ರಕ್ಕೆ ಹೆಚ್ಚುವರಿಯಾಗಿ 04 ಸಂಖ್ಯೆ 31.5kA, 11kV MEI ಮಾದರಿ ಸ್ವಿಚ್‌ಗೇರ್ ಪ್ಯಾನೆಲ್‌ಗಳು (SCADA & SAS/DAS ಹೊಂದಾಣಿಕೆಯಾಗುವ), C&R ಪ್ಯಾನೆಲ್‌ಗಳು, ಕಂಟ್ರೋಲ್ ಕೇಬಲ್‌ಗಳು ಮತ್ತು ಹೊಂದಾಣಿಕೆ ಸಾಮಗ್ರಿಗಳನ್ನು ಒಳಗೊಂಡಂತೆ ಸ್ಥಾಪನೆ, ಏಕೀಕರಣ ಮತ್ತು ಕಾರ್ಯಾರಂಭಕ್ಕೆ ಸಂಬಂಧಿಸಿದಂತೆ ಬಿಡ್‌ಗಳನ್ನು ಆಹ್ವಾನಿಸಿದೆ.

II. ಸಂಖ್ಯೆ: ಅ.ಇಂ(ವಿ)/ಪ್ರ(ಕಾ)/ವೃತ್ತ ದಕ್ಷಿಣ/ಕಾ.ಇಂ(ಕ)/ಸ.ಕಾ.ಇಂ–4/ಇಪಿಆರ್–25/24–25/9389–91 ದಿನಾಂಕ: 04.03.2025

ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ(ದ)/ಕಾನಿಇಂ(ಕ)/ ಸಕಾಇಂ–4/2023–24/ಇಪಿಆರ್–25 ದಿನಾಂಕ: 24.11.2023ರ ಮೂಲಕ ಸಂಪೂರ್ಣ ಟರ್ನ್‌ಕೀ ಟೆಂಡರ್ ಆಧಾರದ ಮೇಲೆ ಕಾರ್ಯಾಚರಣೆ ವೃತ್ತ–ದಕ್ಷಿಣ, ಸೋಮನಹಳ್ಳಿ ವಿಭಾಗದ 220/66/11ಕೆವಿ ಸೋಮನಹಳ್ಳಿ ವಿದ್ಯುತ್ ಕೇಂದ್ರಕ್ಕೆ 1 ಸಂಖ್ಯೆ 2x220V, 300AH ಜೊತೆಗೆ 2 ಸಂಖ್ಯೆ ಫ್ಲೋಟ್ ಕನಿಷ್ಠ 30 ಆಂಪ್ಸ್ 2 ಸಂಖ್ಯೆ ಬೂಸ್ಟ್, ಕಂಟ್ರೋಲ್ ಪ್ಯಾನಲ್, ಬದಲಿ ವ್ಯವಸ್ಥೆ, ಇತ್ಯಾದಿ ಜೊತೆಗೆ 2 ಪ್ರತ್ಯೇಕ ಡಿಸ್ಟ್ರಿಬ್ಯೂಷನ್ ಪ್ಯಾನಲ್ (ಇನ್‌ಡೋರ್) 1I/C+2OOG SFU 60A+2OOG SFU 30A ವಿನ್ಯಾಸ, ತಯಾರಿಕೆ, ಪರೀಕ್ಷೆ, ಪೂರೈಕೆ ಮತ್ತು ಸ್ಥಾಪಿಸಲು ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ, ಮೇಲ್ಕಂಡ ಟೆಂಡರ್‌ನ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್ https://kptcl.karnataka.gov.in ಗೆ ಹೈಪರ್‌ಲಿಂಕ್ "E Procurement KPTCL" ಅಥವಾ https://kppp.karnataka.gov.in ನಲ್ಲಿ ಲಾಗಿನ್ ಮಾಡುವ ಮೂಲಕ 06.03.2025 ಅಥವಾ ನಂತರ ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾರ್ಯಾಚರಣೆ) ವೃತ್ತ–ದಕ್ಷಿಣ, ಕ.ವಿ.ಪ್ರ.ನಿ.ನಿ., ಕಛೇರಿ ಸಂಕೀರ್ಣ, ನೆಲ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು–560009. ದೂರವಾಣಿ: 22386686–85

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/112/2024–25/3209 ದಿನಾಂಕ : 04.03.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಾಣಿಜ್ಯ ಭೂಉಪಯೋಗ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಬಿ.ಇ. ಕೆಂಪಣ್ಣ @ ಗಣೇಶಪ್ಪ ಬಿನ್ ಲೇ॥ ಈರಪ್ಪ	ಯಲಹಂಕ	ಜಾಲ	ಅರೇಬಿನ್ನ ಮಂಗಲ	21/2	1–19	ವ್ಯವಸಾಯ	ವಾಣಿಜ್ಯ
2.		ಯಲಹಂಕ	ಜಾಲ	ಅರೇಬಿನ್ನ ಮಂಗಲ	22/2	0–22	ವ್ಯವಸಾಯ	ವಾಣಿಜ್ಯ
3.	ಶ್ರೀಮತಿ ಜಯಮ್ಮ ಕೋಂ ಲೇ॥ ಮಾರಪ್ಪ, ಶ್ರೀಮತಿ ಬಿ.ಎಂ. ಲಾವಣ್ಯ ಬಿನ್ ಲೇ॥ ಮಾರಪ್ಪ, ಶ್ರೀಮತಿ ವೇದ ಜೆ. ಕೋಂ ಲೇ॥ ಸುನೀಲ್ ಬಿ.ಎಂ. & ಶ್ರೀ ಮೋನಿಷ್ ಎಸ್. ಬಿನ್ ಲೇ॥ ಸುನೀಲ್ ಬಿ.ಎಂ.	ಯಲಹಂಕ	ಜಾಲ	ಅರೇಬಿನ್ನ ಮಂಗಲ	22/1	1–33	ವ್ಯವಸಾಯ	ವಾಣಿಜ್ಯ
4.	ಶ್ರೀ ಈರಣ್ಣ ಬಿ.ಕೆ ಬಿನ್ ಲೇ॥ ಎಂ. ಕೃಷ್ಣಪ್ಪ & ಶ್ರೀ ಮೋಹನ್ ಕುಮಾರ್ ಬಿ.ಕೆ ಬಿನ್ ಲೇ॥ ಎಂ. ಕೃಷ್ಣಪ್ಪ	ಯಲಹಂಕ	ಜಾಲ	ಗೊಲ್ಲಹಳ್ಳಿ	37	3–28	ವ್ಯವಸಾಯ	ವಾಣಿಜ್ಯ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು, ಸದರಿ ಜಮೀನುಗಳ ಪರಿಸರದಲ್ಲಿ ವಸತಿ / ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನುಗಳ ಪರಿಸರದಲ್ಲಿ ವಾಣಿಜ್ಯ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ ಅಲ್ಲದೇ, ಪ್ರಸ್ತಾಪಿತ ಜಮೀನುಗಳು ವಾಣಿಜ್ಯ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನುಗಳನ್ನು ವ್ಯವಸಾಯ ಭೂಉಪಯೋಗ ವಲಯ ದಿಂದ ವಾಣಿಜ್ಯ ಭೂಉಪಯೋಗ ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/5477/ಆಕಾರ್/2024–25

ಮಾನಹಾನಿ ಮಾಡುವ ಉದ್ದೇಶದಿಂದ ಸುಳ್ಳು ಆರೋಪ; ಶಿಸ್ತು ಕ್ರಮಕ್ಕೆ ಡಿ.ರೂಪಾ ಮನವಿ

ವರ್ತಿಕಾ ಕಟಿಯಾರ್ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಆಂತರಿಕ ಭದ್ರತಾ ವಿಭಾಗದ(ಐಎಸ್‌ಡಿ) ಡಿಐಜಿಯಾಗಿದ್ದ ವರ್ತಿಕಾ ಕಟಿಯಾರ್ ವಿರುದ್ಧ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ ವ್ಯವಸ್ಥಾಪಕ ನಿರ್ದೇಶಕಿಯಾಗಿ ವರ್ಗಾವಣೆಗೊಂಡಿರುವ ಡಿ.ರೂಪಾ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ದೂರು ನೀಡಿದ್ದಾರೆ.



ವರ್ತಿಕಾ ಕಟಿಯಾರ್

‘ರೂಪಾ ಅವರು ಕೆಳಹಂತದ ಸಿಬ್ಬಂದಿ ಬಳಸಿಕೊಂಡು ತಮ್ಮ ಕೊಠಡಿಯನ್ನು ಅನಧಿಕೃತವಾಗಿ ಪ್ರವೇಶಿಸಿ, ಕೆಲವು ದಾಖಲೆಗಳನ್ನು ಇರಿಸಿದ್ದಾರೆ’ ಎಂದು ಆರೋಪಿಸಿ ವರ್ತಿಕಾ ಅವರು ಶಾಲಿನಿ ರಜನೀಶ್ ಅವರಿಗೆ ದೂರು ನೀಡಿದ್ದರು. ಇದೀಗ ರೂಪಾ ಸಹ ದೂರು ನೀಡಿದ್ದಾರೆ.

‘ರೂಪಾ ಅವರ ಆದೇಶದಂತೆ, 2024ರ ಸೆ. 6ರಂದು ಹೆಡ್‌ಕಾನ್‌ಸ್ಟೆಬಲ್ ಟಿ.ಎಸ್.ಮಂಜುನಾಥ್, ಗೃಹರಕ್ಷಕ ದಳದ ಸಿಬ್ಬಂದಿ ಮಲ್ಲಿಕಾರ್ಜುನ್ ಅವರು ನಿಯಂತ್ರಣ ಕೊಠಡಿಯಿಂದ ಕೀಯನ್ನು ತೆಗೆದುಕೊಂಡು ಬಂದು, ನನ್ನ ಅನುಮತಿ ಇಲ್ಲದೆ, ಕಚೇರಿಯ ಬಾಗಿಲು ತೆರೆದಿದ್ದರು. ಅಲ್ಲದೆ, ಮಲ್ಲಿಕಾರ್ಜುನ್ ಕೆಲವೊಂದು ಕಡತಗಳನ್ನು ನನ್ನ ಕಚೇರಿಯಲ್ಲಿ ಇರಿಸಿ, ಕಚೇರಿಯ ಫೋಟೊಗಳನ್ನು ತೆಗೆದು ರೂಪಾ ಅವರಿಗೆ ವಾಟ್ಸ್‌ಆ್ಯಪ್ ಮೂಲಕ ಕಳುಹಿಸಿದ್ದರು’ ಎಂದು ವರ್ತಿಕಾ ದೂರಿನಲ್ಲಿ ವಿವರಿಸಿದ್ದರು. ಅದಾದ ಮೇಲೆ ವರ್ತಿಕಾ ಕಟಿಯಾರ್ ಅವರನ್ನು ಐಎಸ್‌ಡಿಯಿಂದ ಗೃಹರಕ್ಷಕ ದಳ ಹಾಗೂ ನಾಗರಿಕ ರಕ್ಷಣಾ ವಿಭಾಗದ ಡಿಐಜಿಯಾಗಿ ಸೋಮವಾರ ವರ್ಗಾವಣೆ ಮಾಡಲಾಗಿತ್ತು.

ರೂಪಾ ಪತ್ರದಲ್ಲಿ ಏನಿದೆ?: ‘ವರ್ತಿಕಾ ಕಟಿಯಾರ್ ಅವರು ಕೆಲವು ಸುಳ್ಳು ಮತ್ತು ಆಧಾರ ರಹಿತ ಆರೋಪ ಮಾಡಿ ದೂರು ನೀಡಿದ್ದಾರೆ. ದೂರಿನ ಪ್ರತಿಯನ್ನು ಮಾಧ್ಯಮಗಳಿಗೂ ಸೋರಿಕೆ ಮಾಡಿದ್ದಾರೆ. ಈ ಮೂಲಕ ಅವರು ಶಿಸ್ತಿನ ಇಲಾಖೆಯಲ್ಲಿ ನಿಯಮ ಉಲ್ಲಂಘಿಸಿದ್ದಾರೆ. ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು’ ಎಂದು ಪತ್ರದ ಮೂಲಕ ರೂಪಾ ಆಗ್ರಹಿಸಿದ್ದಾರೆ.

‘ಕಾನ್‌ಸ್ಟೆಬಲ್‌ಗಳು ಕಡತವನ್ನು ತಮ್ಮ ಕೊಠಡಿಯಿಂದ ತೆಗೆದುಕೊಂಡು ಹೋಗಿದ್ದಾರೆ ಎಂದು ವರ್ತಿಕಾ ದೂರಿದ್ದಾರೆ. ಅವರ ಆರೋಪಕ್ಕೆ ಯಾವುದೇ ಪುರಾವೆ ಇಲ್ಲ. ಅವರ ಕೊಠಡಿ ಮತ್ತು ನನ್ನ ಕೊಠಡಿಯ ಮುಂದಿನ ಕಾರಿಡಾರ್‌ನಲ್ಲಿ ಕನಿಷ್ಠ 5 ಸಿ.ಸಿ.ಟಿ.ವಿ ಕ್ಯಾಮೆರಾಗಳಿವೆ. ಅವರು ಯಾವುದೇ ದೃಶ್ಯಾವಳಿಗಳನ್ನು ಲಗತ್ತಿಸಿಲ್ಲ’ ಎಂದು ರೂಪಾ ಅವರು ತಮ್ಮ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

‘ಒಂದು ವೇಳೆ ಅಂತಹ ಘಟನೆ ನಡೆದಿದ್ದರೆ ಐಎಸ್‌ಡಿಯ ಹಿರಿಯ ಅಧಿಕಾರಿಗಳ ಗಮನಕ್ಕೆ ಏಕೆ ತರಲಿಲ್ಲ? ಮಾನಹಾನಿ ಮಾಡುವ ಉದ್ದೇಶದಿಂದ ಸುಳ್ಳು ಆರೋಪ ಮಾಡಿದ್ದಾರೆ. ವರ್ತಿಕಾ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು’ ಎಂದು ಕೋರಿದ್ದಾರೆ.

‘ಅವರು 2010ರ ಐಪಿಎಸ್ ಬ್ಯಾಚ್‌ಗೆ ಸೇರಿದವರು. ಹೈದರಾಬಾದ್‌ನ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾಗ ಅಧಿಕಾರಿಯೊಬ್ಬರ ವಿರುದ್ಧ ಕಿರುಕುಳದ ಬಗ್ಗೆ ಸುಳ್ಳು ಆರೋಪ ಮಾಡಿದ್ದರು’ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಐಜಿಪಿ ಡಿ.ರೂಪಾ ವರ್ಗಾವಣೆ



ಡಿ.ರೂಪಾ

ಬೆಂಗಳೂರು: ರಾಜ್ಯ ಆಂತರಿಕ ಭದ್ರತಾ ಐಜಿಪಿ ಡಿ.ರೂಪಾ ಅವರನ್ನು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ವರ್ಗಾಯಿಸಲಾಗಿದೆ.

ರೂಪಾ ಅವರು ಕೆಳ ಹಂತದ ಸಿಬ್ಬಂದಿ ಮೂಲಕವಾಗಿ ಅಕ್ರಮವಾಗಿ ಕೆಲವು ದಾಖಲೆಗಳನ್ನು ತೆಗೆದು, ಕೆಲವು ದಾಖಲೆಗಳನ್ನು ಇರಿಸಿದ್ದಾರೆ. ಈ ಸಿಬ್ಬಂದಿ ಅಕ್ರಮವಾಗಿ ಕೊಠಡಿ ಪ್ರವೇಶಿಸಿದ್ದರು ಎಂದು ಆಂತರಿಕ ಭದ್ರತಾ ವಿಭಾಗದ ಡಿಐಜಿ ಆಗಿದ್ದ ವರ್ತಿಕಾ ಕಟಿಯಾರ್ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ದೂರು ನೀಡಿದ್ದರು. ಇದರ ಬೆನ್ನಲ್ಲೇ ವರ್ತಿಕಾ ಅವರನ್ನು ವರ್ಗಾವಣೆ ಮಾಡಲಾಗಿತ್ತು. ಈಗ ರೂಪಾ ಅವರನ್ನೂ ವರ್ಗಾವಣೆ ಮಾಡಲಾಗಿದೆ.



ನಗರದ ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ 45ನೇ ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳೆಯರ (55 ವರ್ಷ ವಯೋಮಿತಿ) 800 ಮೀಟರ್ ಓಟದಲ್ಲಿ ಕರ್ನಾಟಕದ ಅರ್ಚನಾ ಸಿಂಗ್ ಪ್ರಥಮ ಸ್ಥಾನ ಗಳಿಸಿದರು (ಎಡ ಚಿತ್ರ). ಪುರುಷರ (55 ವರ್ಷ ವಯೋಮಿತಿ) 800 ಮೀಟರ್ ಓಟದಲ್ಲಿ ತಮಿಳುನಾಡಿನ ಕೆ.ಷಣ್ಮುಗಂ ಪ್ರಥಮ ಸ್ಥಾನ ಗಳಿಸಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

₹1 ಕೋಟಿ ವಂಚನೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹1 ಕೋಟಿ ಹಣ ಪಡೆದು ವಂಚಿಸಿದ್ದ ಆರೋಪದ ಅಡಿ ಮೂವರನ್ನು ವಿದ್ಯಾರಣ್ಯಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಟಿ.ದಾಸರಹಳ್ಳಿಯ ಶಾಂತಿ ಲೇಔಟ್‌ನ ಅಂಬರೀಶ್ (33), ಸಾಯಿ ಲೇಟ್‌ನ ಜೆ. ಮಾರ್ಟಿನ್ (35), ಸದಾನಂದ ನಗರದ ಶ್ರೀನಿವಾಸ್ ವರ್ಮಾ(55) ಬಂಧಿತರು.

ಬಂಧಿತರಿಂದ ₹97.50 ಲಕ್ಷವನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಜಯಚಂದ್ರ ಎಂಬುವರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಿ, ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

‘ಜಯಚಂದ್ರ ಸಂಬಂಧಿಯಾದ ಅಶ್ವಿನಿಗೆ ಆರೋಪಿ ಶ್ರೀನಿವಾಸ್ ಪರಿಚಯವಾಗಿದ್ದ. ₹1 ಕೋಟಿ ಹಣವನ್ನು ನೀಡಿದರೆ, ಅದನ್ನು ನನಗೆ ಪರಿಚಯಸ್ಥರಾದ ಸಚಿನ್ ಹಾಗೂ ಅಗರ್‌ವಾಲ್‌ಗೆ ಕೊಟ್ಟು ಒಂದೇ ತಾಸಿನಲ್ಲಿ ₹1 ಕೋಟಿಗೆ ₹20 ಲಕ್ಷ ಸೇರಿಸಿ ಆರ್‌ಟಿಜಿಎಸ್ ಮೂಲಕ ತಮ್ಮ ಖಾತೆಗೆ ವರ್ಗಾವಣೆ ಮಾಡಲಾಗುವುದು ಎಂದು ಶ್ರೀನಿವಾಸ್ ನಂಬಿಸಿದ್ದ. ಶ್ರೀನಿವಾಸ್ ಮಾತು ನಂಬಿದ್ದ ಜಯಚಂದ್ರ ಅವರು ತಮ್ಮ ಸಂಬಂಧಿಯ ಜತೆಗೆ ಮಾರ್ಟಿನ್ ಕಚೇರಿಗೆ ತೆರಳಿ ಹಣ ನೀಡಿದ್ದರು. ಹಣವನ್ನು ಬೇರೆ ಸ್ಥಳದಲ್ಲಿ ಎಣಿಕೆ ಮಾಡಿ ಸಚಿನ್‌ಗೆ ತಲುಪಿಸಲಾಗುವುದು. ಅದಾದ ಮೇಲೆ ಬ್ಯಾಂಕ್‌ಗೆ ಹಣ ಜಮೆಯಾಗಲಿದೆ ಎಂದು ಹೇಳಿ ವಂಚಿಸಿದ್ದರು’ ಎಂದು ಪೊಲೀಸರು ಹೇಳಿದರು.

ಸರಣಿ ಅಪಘಾತ ಮಾಡಿ ಪರಾರಿಯಾದ ಆರೋಪಿ

ಉಡುಪಿ: ಗರುಡ ಗ್ಯಾಂಗ್‌ನ ಸದಸ್ಯ ಇಸಾಕ್ ಎಂಬಾತನನ್ನು ಮಂಗಳವಾರ ತಡರಾತ್ರಿ ಮಣಿಪಾಲದಲ್ಲಿ ಪೊಲೀಸರು ವಶಕ್ಕೆ ಪಡೆಯಲು ಯತ್ನಿಸಿದಾಗ ಆತ ಕಾರನ್ನು ಅತಿ ವೇಗದಿಂದ ಚಲಾಯಿಸಿ, ಹಲವು ವಾಹನಗಳಿಗೆ ಡಿಕ್ಕಿ ಹೊಡೆದು ಪರಾರಿಯಾಗಿದ್ದಾನೆ.

ಕಾರಿನ ಟಯರ್ ಪಂಕ್ಚರ್ ಆದ ಕಾರಣ ಮಣ್ಣಪಳ್ಳದ ಬಳಿ ಆತ ಕಾರನ್ನು ಬಿಟ್ಟು ಪರಾರಿಯಾಗಿದ್ದಾನೆ. ಕಾರಿನಲ್ಲಿದ್ದ ಆತನ ಗೆಳತಿ ಸುಜೈನ್ ಎಂಬಾಕೆಯನ್ನು ಪೊಲೀಸರು ಬಂಧಿಸಿದ್ದಾರೆ.

ಮಣಿಪಾಲದ ವಿ.ಎಸ್. ಆಚಾರ್ಯ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್ ಒಂದರಲ್ಲಿ ಆರೋಪಿಯ ಗೆಳತಿ ಸುಜೈನ್ ಇದ್ದು ಆರೋಪಿ ಅಲ್ಲಿಗೆ ಬರುವುದಾಗಿ ಮಾಹಿತಿ ಬಂದ ಮೇರೆಗೆ ಬೆಂಗಳೂರಿನ ಮಾದನಾಯಕನ ಹಳ್ಳಿ ಪೊಲೀಸ್ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು.

ಪೊಲೀಸರು ಅಡ್ಡಗಟ್ಟಲು ಪ್ರಯತ್ನಿಸಿದಾಗ ಪೊಲೀಸರು ಎಂದು ತಿಳಿದಿದ್ದರು ಸಹ ಕೊಲೆ ಮಾಡುವ ಉದ್ದೇಶದಿಂದ ಇಸಾಕ್ ಸಿಬ್ಬಂದಿಯಾದ ವಿಶ್ವನಾಥ ಅವರಿಗೆ ನಂಬರ್ ಪ್ಲೇಟ್ ಇಲ್ಲದ ಥಾರ್ ಕಾರಿನಿಂದ ಗುದ್ದಿದ ರಭಸಕ್ಕೆ ಅವರು ಹಾರಿ ಫುಟ್‌ಪಾತ್‌ನಲ್ಲಿ ಬಿದ್ದಿದ್ದು ಅವರಿಗೆ ತೀವ್ರ ಸ್ವರೂಪದ ಗಾಯಗಳಾಗಿದೆ. ಪೊಲೀಸರಾದ ನರೇಂದ್ರ ಬಾಬು, ಕೇಶವನಂದ, ಬಾಲಾಜಿ ಸಿಂಗ್ ಮತ್ತು ರಾಯಗೊಂಡ ಎಂಬುವವರಿಗೆ ಗಾಯಗಳಾಗಿವೆ.

ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಪ್ರಕರಣವೊಂದರಲ್ಲಿ ಇಸಾಕ್ ಆರೋಪಿಯಾಗಿದ್ದಾನೆ. ಆತ ಮಣಿಪಾಲದಲ್ಲಿರುವ ಮಾಹಿತಿ ಪಡೆದ ನೆಲಮಂಗಲ ಪೊಲೀಸರು ಆತನನ್ನು ವಶಕ್ಕೆ ಪಡೆಯಲು ಮಣಿಪಾಲದಲ್ಲಿ ಕಾರ್ಯಾಚರಣೆ ನಡೆಸಿದ್ದರು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕುಮಾರ್ ಕೆ. ತಿಳಿಸಿದ್ದಾರೆ.

ಗೆಳತಿಯೊಂದಿಗೆ ಕಾರಿನಲ್ಲಿದ್ದ ಇಸಾಕ್‌ನನ್ನು ನೆಲಮಂಗಲ ಪೊಲೀಸರು ಬೆನ್ನಟ್ಟಿದ್ದರು. ಈ ವೇಳೆ ಆತ ಸಾರ್ವಜನಿಕರ ಎರಡು ವಾಹನಗಳಿಗೆ ಮತ್ತು ಒಂದು ಪೊಲೀಸ್ ವಾಹನಕ್ಕೆ ಡಿಕ್ಕಿ ಹೊಡೆದಿದ್ದಾನೆ. ಬಳಿಕ ಆತ ಅಲ್ಪ ದೂರ ಸಾಗಿ ಕಾರನ್ನು ಬಿಟ್ಟು ಪರಾರಿಯಾಗಿದ್ದಾನೆ ಎಂದು ವಿವರಿಸಿದ್ದಾರೆ.

ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ದರೋಡೆ ಪ್ರಕರಣವೊಂದರಲ್ಲಿ ಇಸಾಕ್ ಆರೋಪಿಯಾಗಿದ್ದ ಎಂದು ಮೂಲಗಳು ಹೇಳಿವೆ.

ಈ ಕುರಿತು ಮಣಿಪಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಯ ಪತ್ತೆಗಾಗಿ ವಿಶೇಷ ತಂಡ ರಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಹಾಥರಸ್ ಕಾಲ್ತುಳಿತಕ್ಕೆ ನಿರ್ಲಕ್ಷ್ಯ ಕಾರಣ

ಲಖನೌ (ಪಿಟಿಐ): ಉತ್ತರ ಪ್ರದೇಶದ ಹಾಥರಸ್‌ನಲ್ಲಿ ಕಳೆದ ಜುಲೈನಲ್ಲಿ ನಡೆದ ಕಾಲ್ತುಳಿತ ದುರಂತಕ್ಕೆ ಭಾರಿ ಜನದಟ್ಟಣೆ, ಸಂಘಟಕರ ಅಸಮರ್ಪಕ ನಿರ್ವಹಣೆ ಮತ್ತು ಅನುಮತಿ ನೀಡುವಲ್ಲಿ ಅಧಿಕಾರಿಗಳು ತೋರಿರುವ ನಿರ್ಲಕ್ಷ್ಯ ಪ್ರಮುಖ ಕಾರಣ ಎಂದು ಈ ಪ್ರಕರಣದ ತನಿಖೆ ನಡೆಸಿದ ನ್ಯಾಯಾಂಗ ಆಯೋಗ ಹೇಳಿದೆ.

ಉತ್ತರ ಪ್ರದೇಶ ಸರ್ಕಾರಕ್ಕೆ ಸಲ್ಲಿಸಿರುವ ಈ ವರದಿಯನ್ನು ಬುಧವಾರ ರಾಜ್ಯ ವಿಧಾನಸಭೆಯಲ್ಲಿ ಮಂಡಿಸಲಾಗಿದೆ. ಕಾರ್ಯಕ್ರಮಕ್ಕೆ ಕಲ್ಪಿಸಿದ್ದ ಮೂಲಸೌಕರ್ಯಗಳಲ್ಲಿನ ಹಲವು ಸುರಕ್ಷತಾ ಲೋಪಗಳನ್ನು ಎತ್ತಿ ತೋರಿಸಲಾಗಿದೆ. ಅಲ್ಲದೆ, ಕಾರ್ಯಕ್ರಮಕ್ಕೆ ಸೇರಿದ್ದ ಜನರ ನಿರ್ಗಮನಕ್ಕೆ ಸರಿಯಾದ ವ್ಯವಸ್ಥೆ ಮಾಡಿರಲಿಲ್ಲ ಎನ್ನುವ ಬಗ್ಗೆಯೂ ಬೊಟ್ಟು ಮಾಡಲಾಗಿದೆ.

ಕ್ರಿಮಿನಲ್ ಪಿತೂರಿಯ ಸಾಧ್ಯತೆಯನ್ನು ವರದಿಯಲ್ಲಿ ತಳ್ಳಿಹಾಕಿಲ್ಲ. ವಿಶೇಷ ತನಿಖಾ ತಂಡ (ಎಸ್‌ಐಟಿ) ಆಳವಾದ ತನಿಖೆ ನಡೆಸಬೇಕೆಂದೂ ಶಿಫಾರಸು ಮಾಡಿದೆ.

ಕಾರ್ಯಕ್ರಮಕ್ಕೆ 80,000 ಜನರು ಸೇರುವ ನಿರೀಕ್ಷೆಯಿತ್ತು. ಆದರೆ, ವಾಸ್ತವವಾಗಿ ಸೇರಿದವರ ಸಂಖ್ಯೆ 2.5 ಲಕ್ಷದಿಂದ 3 ಲಕ್ಷದಷ್ಟಿತ್ತು. ಧಾರ್ಮಿಕ ಪ್ರವಚನ ಮುಗಿದಾಗ ಇಡೀ ಜನಸಮೂಹಕ್ಕೆ ಏಕಕಾಲದಲ್ಲಿ ನಿರ್ಗಮಿಸಲು ಅನುವು ಮಾಡಿಕೊಡಲಾಗಿದೆ. ಈ ಅವ್ಯವಸ್ಥೆ ಕಾಲ್ತುಳಿತಕ್ಕೆ ಪ್ರಮುಖ ಕಾರಣವಾಗಿದೆ. ಕಾರ್ಯಕ್ರಮ ಆಯೋಜಿಸಿದ್ದ ಸ್ಥಳವನ್ನು ಅಧಿಕಾರಿಗಳು ಖುದ್ದು ಪರಿಶೀಲಿಸಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕಾರ್ಯಕ್ರಮದ ಮುಖ್ಯ ಸಂಘಟಕ ದೇವ್ ಪ್ರಕಾಶ್ ಮಧುಕರ್ ಅವರು ಕಾರ್ಯಕ್ರಮಕ್ಕೆ 80,000 ಜನರನ್ನು ಸೇರಿಸಲು ಅನುಮತಿ ಕೋರಿ, 2024ರ ಜೂನ್ 18ರಂದು ಸಿಕಂದರಾವ್ ಉಪ-ವಿಭಾಗೀಯ ಮ್ಯಾಜಿಸ್ಟ್ರೇಟ್‌ಗೆ ಅರ್ಜಿ ಸಲ್ಲಿಸಿದ್ದರು. ಸಿಕಂದರಾವ್ ಕ್ಷೇತ್ರದ ಶಾಸಕ ವೀರೇಂದ್ರ ಸಿಂಗ್ ರಾಣಾ ಸೇರಿ ಸ್ಥಳೀಯ ಪ್ರತಿನಿಧಿಗಳ ಬೆಂಬಲ ಪತ್ರಗಳನ್ನು ಇದರ ಜತೆಗೆ ಲಗತ್ತಿಸಿರುವುದು ತನಿಖೆಯಲ್ಲಿ ಪತ್ತೆಯಾಗಿದೆ.

ಸಿಕಂದರಾವ್ ಅವರ ಫುಲ್ರೈ ಗ್ರಾಮದಲ್ಲಿ ನಡೆದ ಕಾಲ್ತುಳಿತದ ನಂತರ ಸ್ಥಳೀಯ ಪೊಲೀಸರು ದಾಖಲಿಸಿದ ಎಫ್‌ಐಆರ್‌ನಲ್ಲಿ ಧರ್ಮಪ್ರವಚಕ ಸೂರಜ್‌ಪಾಲ್ (ನಿಜವಾದ ಹೆಸರು) ಅವರನ್ನು ಆರೋಪಿಯಾಗಿ ಉಲ್ಲೇಖಿಸಿಲ್ಲ.

ಸ್ವಯಂ ಘೋಷಿತ ದೇವಮಾನವ ಭೋಲೆ ಬಾಬಾ ಎಂದೇ ಗುರುತಿಸಿಕೊಂಡಿರುವ ನಾರಾಯಣ ಸರ್ಕಾರ್ ಹರಿ ಅವರ ಧರ್ಮಪ್ರವಚನಕ್ಕಾಗಿ ಕಳೆದ ವರ್ಷ ಜುಲೈ 2ರಂದು ಏರ್ಪಡಿಸಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ಕಾಲ್ತುಳಿತ ಸಂಭವಿಸಿ, 121 ಜನ ಮೃತಪಟ್ಟಿದ್ದರು.

ಪ್ರಕರಣದ ತನಿಖೆಗಾಗಿ ನಿವೃತ್ತ ನ್ಯಾಯಮೂರ್ತಿ ಬ್ರಿಜೇಶ್ ಕುಮಾರ್ ಶ್ರೀವಾತ್ಸವ ಅವರ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರ ನ್ಯಾಯಾಂಗ ಆಯೋಗವನ್ನು ರಚಿಸಿತ್ತು. ಐಎಎಸ್ ಅಧಿಕಾರಿ ಹೇಮಂತ್ ರಾವ್, ಮಾಜಿ ಐಪಿಎಸ್ ಅಧಿಕಾರಿ ಭವೇಶ್ ಕುಮಾರ್ ಇದರ ಸದಸ್ಯರಾಗಿದ್ದರು.

ಇಬ್ಬರು ನಕ್ಸಲರ ಬಂಧನ

ಗಡ್ಚಿರೋಲಿ(ಪಿಟಿಐ): ಸಿ-60 ಕಮಾಂಡೊ ಹತ್ಯೆಯಲ್ಲಿ ಭಾಗಿಯಾಗಿದ್ದ ಇಬ್ಬರು ನಕ್ಸಲರನ್ನು ಬುಧವಾರ ಮಹಾರಾಷ್ಟ್ರದ ಗಡ್ಚಿರೋಲಿ ಜಿಲ್ಲೆಯಲ್ಲಿ ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಲು ಮಡ್ಕಮ್ ಅಲಿಯಾಸ್ ಡೋಲವಾ (26) ಮತ್ತು ರಾಮ ಕೊರ್ಚಾ ಅಲಿಯಾಸ್ ಡುಮ್ಮಿ (32) ಬಂಧಿತರು.

ಛತ್ತೀಸಗಢದ ನಿವಾಸಿ ಡೋಲವಾ ಬಗ್ಗೆ ಸುಳಿವು ನೀಡಿದರೆ ₹6 ಲಕ್ಷ ಮತ್ತು-ಗಡ್ಚಿರೋಲಿಯ ಡುಮ್ಮಿ ಬಗ್ಗೆ ಮಾಹಿತಿ ನೀಡಿದವರಿಗೆ ₹2 ಲಕ್ಷ ಬಹುಮಾನವನ್ನು ಮಹಾರಾಷ್ಟ್ರ ಸರ್ಕಾರ ಘೋಷಿಸಿತ್ತು.

ಗಡ್ಚಿರೋಲಿ ಪೊಲೀಸರು ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಸಿಬ್ಬಂದಿ ಅರೆವಾಡಾ ಬಳಿಯ ಅರಣ್ಯ ಪ್ರದೇಶದಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ನಡೆಸುವ ವೇಳೆ ಈ ಇಬ್ಬರು ನಕ್ಸಲರು ಸೆರೆ ಸಿಕ್ಕಿದ್ದಾರೆ. ನಕ್ಸಲ್ ದಾಳಿಯ ಯೋಜನೆಯ ಭಾಗವಾಗಿ ವಿಚಕ್ಷಣ ಕೆಲಸಕ್ಕೆ ಈ ಇಬ್ಬರು ಅರೆವಾಡ ಅರಣ್ಯವನ್ನು ಪ್ರವೇಶಿಸಿದ್ದರು.

ಕಳೆದ ತಿಂಗಳು ಜಿಲ್ಲೆಯ ದಿರಂಗಿ-ಫುಲ್ನಾರ್‌ನಲ್ಲಿ ನಡೆದ ಗುಂಡಿನ ಚಕಮಕಿ ವೇಳೆ ಸಿ-60 ಘಟಕದ ಕಮಾಂಡೊ ಸಾವಿಗೆ ಈ ಇಬ್ಬರು ಕಾರಣರಾಗಿದ್ದರು ಎಂದು ಗಡ್ಚಿರೋಲಿ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

₹23 ಲಕ್ಷ ಮೌಲ್ಯದ 34 ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ರಸ್ತೆ ಬದಿ ಹಾಗೂ ಮನೆಗಳ ಎದುರು ನಿಲುಗಡೆ ಮಾಡುತ್ತಿದ್ದ ಬೈಕ್‌ಗಳನ್ನು ನಕಲಿ ಕೀ ಬಳಸಿ ಕಳ್ಳತನ ಮಾಡುತ್ತಿದ್ದ ಅಂತರ ರಾಜ್ಯ ಕಳ್ಳನನ್ನು ಸೋಲದೇವನಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಆರೋಪಿಯಿಂದ ₹23.5 ಲಕ್ಷ ಮೌಲ್ಯದ 34 ದ್ವಿಚಕ್ರ ವಾಹನಗಳನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ.

ಠಾಣಾ ವ್ಯಾಪ್ತಿಯ ಚಿಕ್ಕಬಾಣಾವರದ ಸೋಮಶೆಟ್ಟಿಹಳ್ಳಿಯ ಗ್ರಾಮದ ವ್ಯಕ್ತಿಯೊಬ್ಬರು ಸಪ್ತಗಿರಿ ಆಸ್ಪತ್ರೆ ಎದುರು ಬೈಕ್ ನಿಲುಗಡೆ ಮಾಡಿ ತೆರಳಿದ್ದರು. ವಾಪಸ್ ಬಂದು ನೋಡುವಷ್ಟರಲ್ಲಿ ಸ್ಥಳದಲ್ಲಿ ಬೈಕ್ ಇರಲಿಲ್ಲ. ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಬಾಲಕಿಗೆ ಲೈಂಗಿಕ ದೌರ್ಜನ್ಯ: ಇಬ್ಬರ ವಶ

ಆನೇಕಲ್: ವಿದ್ಯಾರ್ಥಿನಿಯೊಬ್ಬಳ ಮೇಲೆ ಬೇರೆ ಶಾಲೆಯ ವಿದ್ಯಾರ್ಥಿಗಳಿಬ್ಬರು ಲೈಂಗಿಕ ದೌರ್ಜನ್ಯ ಎಸಗಿರುವ ಘಟನೆ ಮಂಗಳವಾರ ತಾಲ್ಲೂಕಿನಲ್ಲಿ ನಡೆದಿದೆ.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಕಾನೂನು ಸಂಘರ್ಷಕ್ಕೆ ಒಳಪಟ್ಟ ಇಬ್ಬರು ವಿದ್ಯಾರ್ಥಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮಂಗಳವಾರ ಮಧ್ಯಾಹ್ನ ಊಟದ ಸಮಯದಲ್ಲಿ ಶಾಲೆಯಿಂದ ಹೊರ ಹೋಗಿದ್ದ ಬಾಲಕಿ ಸಂಜೆ ಶಾಲೆಯ ಅವಧಿ ಮುಗಿದರೂ ಮರಳಿರಲಿಲ್ಲ. ಬಾಲಕಿಯ ಪೋಷಕರಿಗೆ ಮಾಹಿತಿ ನೀಡಲಾಯಿತು. ಶಿಕ್ಷಕರು, ಪೋಷಕರು ಹುಡುಕಾಡಿದರೂ ಬಾಲಕಿಯ ಸುಳಿವು ಸಿಗಲಿಲ್ಲ.

ಸಂಜೆ ಮನೆಗೆ ಹಿಂದಿರುಗಿದ ಬಾಲಕಿಯನ್ನು ಪೋಷಕರು ವಿಚಾರಿಸಿದಾಗ ಬೇರೊಂದು ಶಾಲೆ ವಿದ್ಯಾರ್ಥಿಗಳಿಬ್ಬರು ಲೈಂಗಿಕ ದೌರ್ಜನ್ಯ ಎಸಗಿದ ವಿಷಯವನ್ನು ತಿಳಿಸಿದಳು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗೂಂಡಾ ಕಾಯ್ದೆ: ವ್ಯಕ್ತಿಯ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಚಟುವಟಿಕೆಯಲ್ಲಿ ತೊಡಗಿದ್ದ ಎಂ.ಬಾಬು(48) ಎಂಬಾತನನ್ನು ಸಿಸಿಬಿ ಪೊಲೀಸರು, ಗೂಂಡಾ ಕಾಯ್ದೆಯ ಅಡಿ ಬಂಧಿಸಿದ್ದಾರೆ.

ಮನೆ, ಸಾರ್ವಜನಿಕ ಸ್ಥಳಗಳಲ್ಲಿ ಜೂಜಾಟ ಸೇರಿದಂತೆ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಬಾಬು ತೊಡಗಿದ್ದ. ಪ್ರತಿಬಂಧಕ ಕಾಯ್ದೆಯಡಿ ಈತನನ್ನು ಬಂಧಿಸಲು ಅನುಮತಿ ನೀಡುವಂತೆ ಸಿಸಿಬಿ ಅಧಿಕಾರಿಗಳು ಪ್ರಸ್ತಾವ ಸಲ್ಲಿಸಿದ್ದರು. ಆ ಪ್ರಸ್ತಾವಕ್ಕೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಒಪ್ಪಿದ್ದರು. ಜತೆಗೆ ಆರೋಪಿಯನ್ನು ಬಂಧಿಸಿ ಶಿವಮೊಗ್ಗದ ಕಾರಾಗೃಹದಲ್ಲಿ ಇಡುವಂತೆ ಆದೇಶ ಹೊರಡಿಸಿದ್ದರು.

‘ಆರೋಪಿಯನ್ನು ಬಂಧಿಸಿ ಶಿವಮೊಗ್ಗ ಕಾರಾಗೃಹಕ್ಕೆ ಕಳುಹಿಸಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.



ವ್ಹೀಲಿ ನಡೆಸಿದ್ದ ಆಟೊವನ್ನು ಕೆ.ಆರ್‌.ಪುರ ಸಂಚಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ

ವ್ಹೀಲಿ: ಆಟೊ ಚಾಲಕನ ವಿರುದ್ಧ ಎಫ್‌ಐಆರ್

ಬೆಂಗಳೂರು: ಕೆ.ಆರ್ ಪುರದ ಸೇತುವೆ ಮೇಲೆ ಆಟೊದಲ್ಲಿ ವ್ಹೀಲಿ ನಡೆಸಿದ್ದ ಚಾಲಕನ ವಿರುದ್ಧ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಜತೆಗೆ, ಆಟೊವನ್ನೂ ಜಪ್ತಿ ಮಾಡಿದ್ದಾರೆ.

ಆಟೊದಲ್ಲಿ ಚಾಲಕ ವ್ಹೀಲಿ ನಡೆಸಿದ್ದ, ಆ ದೃಶ್ಯವನ್ನು ತನ್ನ ಸ್ನೇಹಿತರು ಚಿತ್ರೀಕರಿಸಿದ್ದರು. ಅದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಚಾಲಕನೇ ಹರಿಯಬಿಟ್ಟಿದ್ದ. ಅದನ್ನು ಗಮನಿಸಿದ್ದ ಕೆ.ಆರ್.ಪುರ ಸಂಚಾರ ಪೊಲೀಸರು ಚಾಲಕನನ್ನು ಪತ್ತೆಹಚ್ಚಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಬೈಕ್ ಹಾಗೂ ಆಟೊಗಳಲ್ಲಿ ವ್ಹೀಲಿ ನಡೆಸುತ್ತಾ ಪುಂಡಾಟ ನಡೆಸುವವರ ವಿರುದ್ಧ ಕಾರ್ಯಾಚರಣೆ ಮುಂದುವರಿಸಲಾಗಿದೆ’ ಎಂದು ಸಂಚಾರ ಪೂರ್ವ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ತಿಳಿಸಿದ್ದಾರೆ.

ಬೇಡಿಕೆ ಈಡೇರಿಸದಿದ್ದರೆ ಖಾಸಗಿ ಸಾರಿಗೆ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ಟ್ಯಾಕ್ಸಿ ನಿಷೇಧಿಸುವುದೂ ಸೇರಿದಂತೆ ಪ್ರಮುಖ ನಾಲ್ಕು ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದೇ ಇದ್ದರೆ ಖಾಸಗಿ ಸಾರಿಗೆ ಬಂದ್ ಮಾಡಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ಎಚ್ಚರಿಕೆ ನೀಡಿದೆ.

30 ಬೇಡಿಕೆಗಳನ್ನು ಈಡೇರಿಸಬೇಕು ಎಂದು 2023ರ ನವೆಂಬರ್‌ನಲ್ಲಿ ಬೆಂಗಳೂರು ಬಂದ್ ನಡೆಸಿದಾಗ, ಎಲ್ಲ ಬೇಡಿಕೆ ಈಡೇರಿಸುವುದಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭರವಸೆ ನೀಡಿದ್ದರು. ಸಾರಿಗೆ ಸಚಿವರ ವ್ಯಾಪ್ತಿಗೆ ಬರುವ 24 ಬೇಡಿಕೆ ಈಡೇರಿಸಿದ್ದರು. ಪ್ರಮುಖ ಬೇಡಿಕೆಗಳು ಮುಖ್ಯಮಂತ್ರಿ ಸಚಿವಾಲಯಕ್ಕೆ ಸಂಬಂಧಿಸಿರುವುದರಿಂದ ಮುಖ್ಯಮಂತ್ರಿಯೊಂದಿಗೆ ಚರ್ಚಿಸಿ ಈಡೇರಿಸುವುದಾಗಿ ಹೇಳಿದ್ದರು. ಆದರೆ, ಈಡೇರಿಕೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ ಶರ್ಮ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೈಕ್ ಟ್ಯಾಕ್ಸಿ ನಿಷೇಧಿಸಲು ಸುಗ್ರೀವಾಜ್ಞೆ ಹೊರಡಿಸಬೇಕು. ಖಾಸಗಿ ಬಸ್‌ಗಳಿಗೆ ರಸ್ತೆ ತೆರಿಗೆ ಕಡಿಮೆ ಮಾಡಿ, ಬೇರೆ ರಾಜ್ಯಗಳಿಗೆ ವಲಸೆ ಹೋಗುವುದನ್ನು ತಪ್ಪಿಸಬೇಕು. ಅಗ್ರಿಗೇಟರ್ ಕಂಪನಿಗಳ ಮೇಲೆ ಕಠಿಣ ಕ್ರಮ ಜರುಗಿಸಬೇಕು. ಒಂದು ನಗರ ಒಂದು ದರ ಯೋಜನೆಯನ್ನು ಅನುಷ್ಠಾನ ಮಾಡಬೇಕು. ಪೋರ್ಟರ್, ಅಂಕಲ್ ಇನ್ನಿತರ ಗೂಡ್ಸ್ ವಾಹನ ಸೇವೆ ನೀಡುತ್ತಿರುವ ಕಂಪನಿಗಳನ್ನು ರಾಜ್ಯ ಸರ್ಕಾರದ ಅಡಿಯಲ್ಲಿ ತಂದು ಪರವಾನಗಿ ನೀಡುವ ವ್ಯವಸ್ಥೆ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು.

ಮಾರ್ಚ್ 22ರ ಒಳಗೆ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದೇ ಇದ್ದರೆ ಈ ಬಗ್ಗೆ ಸಭೆ ನಡೆಸಿ ಖಾಸಗಿ ಸಾರಿಗೆ ಬಂದ್ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

ಮೇಲ್ಸೇತುವೆಯಲ್ಲಿ ರಾತ್ರಿ ಸಂಚಾರ ಬಂದ್

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆಯಲ್ಲಿ (ಹೊಸೂರು ಮುಖ್ಯರಸ್ತೆ) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ನಿರ್ವಹಣೆ ಕಾಮಗಾರಿ ಹಮ್ಮಿಕೊಳ್ಳಲಾಗಿದ್ದು, ರಾತ್ರಿ ವೇಳೆ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಮೇಲ್ಸೇತುವೆಯ ಎರಡೂ ಬದಿಯಿಂದ (ಎಲೆಕ್ಟ್ರಾನಿಕ್ ಸಿಟಿ–ಸಿಲ್ಕ್‌ಬೋರ್ಡ್) ನಿತ್ಯ ರಾತ್ರಿ 11ರಿಂದ ಬೆಳಿಗ್ಗೆ 6ರವರೆಗೆ ಎಲ್ಲ ವಾಹನಗಳ ಸಂಚಾರ ನಿಷೇಧಿಸಲಾಗಿದೆ. ಬುಧವಾರ ರಾತ್ರಿಯಿಂದಲೇ ಈ ಆದೇಶ ಜಾರಿಗೆ ಬಂದಿದೆ ಎಂದು ಸಂಚಾರ ದಕ್ಷಿಣ ವಿಭಾಗದ ಡಿಸಿಪಿ ಶಿವಪ್ರಕಾಶ್ ದೇವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಟೊ ಪ್ರಯಾಣ ದರ ಏರಿಕೆಗೆ ಪ್ರಸ್ತಾವ

ಸಂಘಟನೆಗಳಲ್ಲಿ ಭಿನ್ನ ಧ್ವನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ ಪ್ರಯಾಣ ದರ ಏರಿಸುವ ಬಗ್ಗೆ ಆಟೊ ಚಾಲಕರ ಸಂಘಟನೆಗಳಲ್ಲಿ ಪರ, ವಿರೋಧದ ಚರ್ಚೆಗಳ ನಡುವೆ ಮಾರ್ಚ್ 12ರಂದು ನಗರ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಭೆ ನಡೆಯಲಿದೆ.

ಸದ್ಯ ಮೊದಲ ಎರಡು ಕಿ.ಮೀ.ಗೆ ಕನಿಷ್ಠ ದರ ₹30 ಹಾಗೂ ಆ ನಂತರದ ಪ್ರತಿ ಕಿ.ಮೀ.ಗೆ ₹15 ದರವಿದೆ. ಕಳೆದ ಮೂರು ವರ್ಷಗಳಿಂದ ಈ ದರ ಚಾಲ್ತಿಯಲ್ಲಿದೆ. ಅದನ್ನು ಮೊದಲ ಎರಡು ಕಿ.ಮೀ.ಗೆ ಕನಿಷ್ಠ ದರ ₹40 ಹಾಗೂ ಆ ನಂತರದ ಪ್ರತಿ ಕಿ.ಮೀ.ಗೆ ₹20ಕ್ಕೆ ಏರಿಸಬೇಕು ಎಂದು ಆಟೊ ರಿಕ್ಷಾ ಡ್ರೈವರ್ಸ್ ಯೂನಿಯನ್, ಆದರ್ಶ ಆಟೊ ಯೂನಿಯನ್‌ಗಳು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ವರ್ಷದ ಹಿಂದೆಯೇ ಮನವಿ ಮಾಡಿದ್ದವು.

ತೈಲ ಬೆಲೆ ಏರಿಕೆಯಲ್ಲದೇ, ಆಟೊ ಬಿಡಿಭಾಗಗಳ ದರವೂ ಹೆಚ್ಚಾಗಿದೆ. ಜೀವನ ನಿರ್ವಹಣಾ ವೆಚ್ಚ ಹೆಚ್ಚಿದೆ. ಆದರೆ, 2021ರ ಡಿಸೆಂಬರ್‌ನಲ್ಲಿ ನಿಗದಿಯಾದ ಆಟೊ ದರವೇ ಈಗಲೂ ಇದೆ. ಆಗ ಆಟೊ ಚಾಸಿಗೆ ₹ 1.5 ಲಕ್ಷ ಇದ್ದಿದ್ದು, ಈಗ ₹ 2.70 ಲಕ್ಷ ಆಗಿದೆ. ಯಾರೂ ನಿಗದಿತ ದರದಲ್ಲಿ ಪ್ರಯಾಣಿಕರನ್ನು ಕರೆದೊಯ್ಯುತ್ತಿಲ್ಲ. ಅನಧಿಕೃತ ದರವನ್ನೇ ಅಧಿಕೃತವನ್ನಾಗಿ ಮಾಡಲಿ ಎಂದು ಮನವಿಯಲ್ಲಿ ತಿಳಿಸಲಾಗಿತ್ತು.

ಮನವಿ ಸಲ್ಲಿಸಿ ವರ್ಷ ಆಗಿತ್ತು. ಇದಕ್ಕೆ ಸಂಬಂಧಿಸಿದಂತೆ ಸಭೆ ಕರೆದಿರಲಿಲ್ಲ. ಇದೀಗ ಸಭೆ ನಡೆಸುವಂತೆ ಸಂಚಾರ ವಿಭಾಗದ ಡಿಸಿಪಿಗೆ ಜಿಲ್ಲಾಧಿಕಾರಿ ಸೂಚನೆ ನೀಡಿದ್ದಾರೆ ಎಂದು ಆದರ್ಶ ಆಟೊ ಮತ್ತು ಟ್ಯಾಕ್ಸಿ ಯೂನಿಯನ್ ಅಧ್ಯಕ್ಷ ಮಂಜುನಾಥ್ ತಿಳಿಸಿದ್ದಾರೆ.

ಏರಿಕೆಗೆ ವಿರೋಧ: ‘ಈಗಿರುವ ದರವೇ ಸಾಕು. ಆದರೆ, ಆ್ಯಪ್ ಆಧಾರಿತ ಬೈಕ್, ಆಟೊ, ಟ್ಯಾಕ್ಸಿಗಳಿಗೆ ಕಡಿವಾಣ ಹಾಕುವ ಮೂಲಕ ನಮಗೆ ದುಡಿಮೆ ಹೆಚ್ಚು ಸಿಗುವಂತೆ ಮಾಡಬೇಕು. ದರ ಹೆಚ್ಚಳ ಮಾಡಿದರೆ ಈಗಿರುವ ಗ್ರಾಹಕರು ಕೂಡ ನಮ್ಮ ಕೈ ತಪ್ಪಲಿದ್ದಾರೆ’ ಎಂದು ಬೆಂಗಳೂರು ಸಾರಥಿ ಸೇನೆ, ಸ್ನೇಹಜೀವಿ ಆಟೊ ಚಾಲಕರ ಟ್ರೇಡ್ ಯೂನಿಯನ್, ಕರುನಾಡ ಸಾರಥಿ ಸೇನೆ ಟ್ರೇಡ್ ಯೂನಿಯನ್, ಬೆಂಗಳೂರು ಆಟೊ ಸೇನೆಯ ಪದಾಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ದರ ಏರಿಕೆ ಮಾಡಿದರೆ ಆಟೊಗಿಂತ ಕ್ಯಾಬ್‌ಗಳೇ ಕಡಿಮೆ ಮೊತ್ತಕ್ಕೆ ಸಂಚರಿಸಲಿವೆ. ದರ ಹೆಚ್ಚಿಸಿದರೆ ನಾವು ಪ್ರಯಾಣಿಕರನ್ನು ಕಳೆದುಕೊಳ್ಳಲಿದ್ದೇವೆ. ಅದರ ಬದಲು ರ‍್ಯಾಪಿಡೊ ಬೈಕ್‌ಗಳನ್ನು ಹೆಸರಿಗಷ್ಟೇ ನಿಷೇಧ ಮಾಡುವ ಬದಲು ನಿಯಂತ್ರಿಸಿದರೆ ಆಟೊಗಳನ್ನು ಬಳಸುವ ಗ್ರಾಹಕರ ಪ್ರಮಾಣ ಹೆಚ್ಚಲಿದೆ’ ಎಂದು ಬೆಂಗಳೂರು ಸಾರಥಿ ಸೇನೆ ಅಧ್ಯಕ್ಷ ಬಿ. ರಾಮೇಗೌಡ, ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ಅಧ್ಯಕ್ಷ ಸಂತೋಷ್ ಕುಮಾರ್ ತಿಳಿಸಿದ್ದಾರೆ.

ಕರಿದ ಹಸಿರು ಬಟಾಣಿ ಅಸುರಕ್ಷಿತ

ಬೆಂಗಳೂರು: ಕೃತಕ ಬಣ್ಣ ಪತ್ತೆಗೆ ಸಂಬಂಧಿಸಿದಂತೆ ಆಹಾರ ಸುರಕ್ಷತೆ ಮತ್ತು ಔಷಧ ಗುಣಮಟ್ಟ ಇಲಾಖೆ ಅಧಿಕಾರಿಗಳು ಕರಿದ ಹಸಿರು ಬಟಾಣಿಗಳ 96 ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದು, ಅವುಗಳಲ್ಲಿ 64 ಮಾದರಿಗಳು ಅಸುರಕ್ಷಿತ ಎನ್ನುವುದು ದೃಢಪಟ್ಟಿದೆ.

ಈವರೆಗೆ ಕರಿದ ಹಸಿರು ಬಟಾಣಿಗಳ 114 ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಅವುಗಳಲ್ಲಿ 96 ಮಾದರಿಗಳ ವಿಶ್ಲೇಷಣೆ ಪೂರ್ಣಗೊಂಡಿದೆ. ಉಳಿದ ಮಾದರಿಗಳ ವಿಶ್ಲೇಷಣಾ ಪ್ರಕ್ರಿಯೆ ಪ್ರಗತಿಯಲ್ಲಿದೆ. ಪ್ರಯೋಗಾಲಯದ ವರದಿಗಳ ಆಧಾರ ಮುಂದಿನ ಕಾನೂನು ಕ್ರಮಗಳನ್ನು ಜರುಗಿಸಲಾಗುತ್ತದೆ ಎಂದು ಇಲಾಖೆ ಆಯುಕ್ತರು ತಿಳಿಸಿದ್ದಾರೆ.

‘ಬ್ರ್ಯಾಂಡ್ ಬೆಂಗಳೂರು’: ಸುಗಮವಾಗದ ಸಂಚಾರ • ಆಕರ್ಷಕವಾಗದ ನಗರ

ಡಿಪಿಆರ್‌ನಿಂದ ಮೇಲೇಳದ ‘ಸುರಂಗ ರಸ್ತೆ’

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ಬಜೆಟ್‌ಗೂ ಮುನ್ನವೇ ರಾಜ್ಯ ಬಜೆಟ್‌ನಲ್ಲೂ ಪ್ರಕಟವಾಗಿದ್ದ, ಸುಗಮ ಸಂಚಾರಕ್ಕೆ ಪರ್ಯಾಯ ಮಾರ್ಗವಾದ ಸಾವಿರಾರು ಕೋಟಿ ವೆಚ್ಚದ ‘ಸುರಂಗ ರಸ್ತೆ’ ಯೋಜನೆ, ವಿಸ್ತೃತ ಯೋಜನಾ ವರದಿಯಿಂದಲೇ (ಡಿಪಿಆರ್) ಇನ್ನೂ ಮೇಲೆದ್ದಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಆರಂಭದ ತಿಂಗಳಲ್ಲೇ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ‘ನಗರದಲ್ಲಿ ಸುಗಮ ಸಂಚಾರ ಸಾಧ್ಯವಾಗಬೇಕಾದರೆ ಅದಕ್ಕೆ ‘ಸುರಂಗ ರಸ್ತೆ’ಯೊಂದೇ ಪರಿಹಾರ, ಅದನ್ನು ಮಾಡಿಯೇ ಸಿದ್ಧ’ ಎಂದು ಹೇಳಿದ್ದರು. ಆದರೆ, ಹೀಗೆ ಹೇಳಿ ಒಂದೂವರೆ ವರ್ಷವಾದರೂ ಯೋಜನೆ ಡಿಪಿಆರ್‌ನಿಂದಲೇ ಹೊರಬಂದಿಲ್ಲ.


ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಶಿವಕುಮಾರ್ ಅವರು, ಹೆಬ್ಬಾಳದಿಂದ ರೇಷ್ಮೆ ಮಂಡಳಿಯವರೆಗಿನ ‘ಸುರಂಗ ರಸ್ತೆ’ ಯೋಜನೆಗೆ 2024ರ ಸೆಪ್ಟೆಂಬರ್, ಡಿಸೆಂಬರ್ ಹಾಗೂ 2025ರ ಫೆಬ್ರುವರಿ ಅಂತ್ಯದೊಳಗೆ ಟೆಂಡರ್ ಕರೆಯಲಾಗುತ್ತದೆ ಎಂದು ಗಡುವುಗಳನ್ನು ನೀಡಿದ್ದರು. ಆದರೆ, ಯೋಜನೆ ನೇತೃತ್ವ ವಹಿಸಿಕೊಂಡಿರುವ ಬಿಬಿಎಂಪಿಯ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರು ಡಿಪಿಆರ್ ಅನ್ನೇ ಇನ್ನೂ ಅಂತಿಮಗೊಳಿಸಿಲ್ಲ. ಡಿಪಿಆರ್ ಸಿದ್ಧಪಡಿಸಿದ್ದ ಸಂಸ್ಥೆಯೊಂದು ಮುಂಬೈ ಯೋಜನೆಯೊಂದಕ್ಕೆ ಸಿದ್ಧಪಡಿಸಿದ್ದ ಹಾಳೆಗಳನ್ನೂ ಸೇರಿಸಿ, ಪಾಲಿಕೆಗೆ ನೀಡಿತ್ತು. ಅದು ‘ಒಂದು ಹಾಳೆ ಅಷ್ಟೆ’ ಎಂದು ಎಂಜಿನಿಯರ್‌ಗಳು ಸಮಜಾಯಿಷಿಯನ್ನೂ ನೀಡಿದ್ದರು.

‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯಡಿಯ ಬಿಬಿಎಂಪಿ ಬಜೆಟ್‌ನಲ್ಲಿ ‘ಸುಗಮ ಸಂಚಾರ ಬೆಂಗಳೂರು’ಗೆ ಪ್ರಥಮ ಆದ್ಯತೆ ನೀಡಲಾಗಿತ್ತು. ₹800 ಕೋಟಿ ಮೀಸಲಿಟ್ಟು, ಸಂಚಾರ ಸುಗಮಗೊಳಿಸಲು ಮಾರ್ಗೋಪಾಯಗಳನ್ನು ಪಡೆದು ಕೊಳ್ಳಲು ನಿರ್ಧರಿಸಲಾಗಿತ್ತು. ‘ಬೆಂಗಳೂರು ಸಮಗ್ರ ಸಂಚಾರ ನಿರ್ವಹಣೆ ಯೋಜನೆ’ಯಡಿ ಸುರಂಗ ರಸ್ತೆಗಳೂ ಸೇರಿದಂತೆ 16 ಮೇಲ್ಸೇತುವೆಗಳನ್ನು ನಿರ್ಮಿಸುವ ₹54 ಸಾವಿರ ಕೋಟಿಗಳ ವೆಚ್ಚದ ಕಾರ್ಯಸಾಧ್ಯತಾ ವರದಿಯನ್ನು ಬಿಬಿಎಂಪಿ ಪಡೆದುಕೊಂಡಿದ್ದಷ್ಟೇ ಈವರೆಗಿನ ಸಾಧನೆ. ವಿವರವಾದ ವರದಿ ನೀಡಲಾಗಿದ್ದರೂ, ಮತ್ತೆ ಡಿಪಿಆರ್ ಎಂದು ಹಣವೆಚ್ಚದ ಜೊತೆಗೆ ಸಮಯವನ್ನೂ ಬಿಬಿಎಂಪಿ ಎಂಜಿನಿಯರ್‌ಗಳು ವ್ಯರ್ಥ ಮಾಡುತ್ತಿದ್ದಾರೆ ಎಂಬ ಆರೋಪವೂ ಇದೆ.

ಗುಲಾಬಿ ಕೊಠಡಿ: ‘ಆಕರ್ಷಕ ಬೆಂಗಳೂರು’ ಪರಿಕಲ್ಪನೆಯಡಿ ಮಹಿಳೆಯರಿಗೆ ಮಾಲ್, ಬಸ್ ನಿಲ್ದಾಣಗಳಲ್ಲಿ ‘ಗುಲಾಬಿ ಕೊಠಡಿ’ ನಿರ್ಮಿಸಿ, ನ್ಯಾಪ್‌ಕಿನ್ ಹಾಗೂ ವಿಶ್ರಾಂತಿ ಪಡೆಯಲು ಅನುಕೂಲ ಮಾಡಿಕೊಡುವುದಾಗಿ ಬಿಬಿಎಂಪಿ ಬಜೆಟ್‌ನಲ್ಲಿ ಹೇಳಲಾಗಿತ್ತು. ಬಣ್ಣಬಣ್ಣದಲ್ಲಿ ಮುದ್ರಿಸಲಾಗಿದ್ದ ಬಜೆಟ್ ಪುಸ್ತಕದಲ್ಲೇ ಗುಲಾಬಿ ಬಣ್ಣದ ಕೊಠಡಿಗಳು ಉಳಿದುಕೊಂಡಿವೆ.

ಮೇಲ್ಸೇತುವೆ, ಕೆಳಸೇತುವೆ, ರಸ್ತೆ ಜಂಕ್ಷನ್‌ಗಳಲ್ಲಿ ವಿದ್ಯುತ್ ದೀಪ ಅಳವಡಿಸಿ, ಆಕರ್ಷಕಗೊಳಿಸುವುದಾಗಿ ಹೇಳಲಾಗಿತ್ತು. ‘ಇನ್ವೆಸ್ಟ್ ಕರ್ನಾಟಕ’, ‘ಏರೊ–ಇಂಡಿಯಾ ವೈಮಾನಿಕ ಪ್ರದರ್ಶನ’ದ ಸಂದರ್ಭದಲ್ಲಿ ಹಡ್ಸನ್ ವೃತ್ತದಲ್ಲಿ ಮಾತ್ರ ಎಲ್‌ಇಡಿ ದೀಪಗಳು ಬೆಳಗಿದವು. ನಂತರ ಅವೂ ಕಾಣೆಯಾದವು.

ಕಳೆದ ಸಾಲಿನ ಬಜೆಟ್‌ನಲ್ಲಿ ಪ್ರಕಟಿಸಿದ್ದ ‘ಬ್ರ್ಯಾಂಡ್ ಬೆಂಗಳೂರು’ ಯೋಜನೆಗಳು




ಸುರಂಗ ರಸ್ತೆಯ ಮಾದರಿ

₹880 ಕೋಟಿ– ಸುಗಮ ಸಂಚಾರ ಬೆಂಗಳೂರು

₹300 ಕೋಟಿ	ರಸ್ತೆ ವೈಟ್ ಟಾಪಿಂಗ್
₹100 ಕೋಟಿ	ರಾಜಕಾಲುವೆ ಬಫರ್ ವಲಯ ಅಭಿವೃದ್ಧಿ
₹50 ಕೋಟಿ	ಆರ್‌ಎಂಪಿಯಂತೆ ರಸ್ತೆ ವಿಸ್ತರಣೆ
₹50 ಕೋಟಿ	ಆರ್‌ಎಂಪಿಯಂತೆ ರಸ್ತೆ ನಿರ್ಮಾಣ
₹200 ಕೋಟಿ	ಸುರಂಗ ರಸ್ತೆ ಯೋಜನೆ ಡಿಪಿಆರ್
₹30 ಕೋಟಿ	ಪಾದರಾಯನಪುರ ರಸ್ತೆ ವಿಸ್ತರಣೆ
₹100 ಕೋಟಿ	ಸಂಯುಕ್ತ ಮೆಟ್ರೊ– ರಸ್ತೆ ಮೇಲ್ಸೇತುವೆ ಮಾರ್ಗ (ಡಬಲ್ ಡೆಕರ್ ರಸ್ತೆ)
₹50 ಕೋಟಿ	ಬನಶಂಕರಿ ವೃತ್ತದಲ್ಲಿ ವೃತ್ತಾಕಾರದ ಪಾದಚಾರಿ ಮೇಲ್ಸೇತುವೆ

₹225 ಕೋಟಿ ಆಕರ್ಷಕ ಬೆಂಗಳೂರು



‘ಸ್ಕೈಡೆಕ್’ಗೆ ಸ್ಥಳ ಗುರುತು ಸಾಧ್ಯವಾಗಿಲ್ಲ



ಬೆಂಗಳೂರು ನಗರಕ್ಕೆ ಆಕರ್ಷಕ ತಾಣವಾಗುವ, ವಿಶ್ವದರ್ಜೆಯ 250 ಮೀಟರ್ ಎತ್ತರದ ‘ಸ್ಕೈಡೆಕ್’ ಅನ್ನು ನಿರ್ಮಿಸುವುದಾಗಿ ಬಿಬಿಎಂಪಿ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಬಜೆಟ್‌ಗೂ ಮುನ್ನವೇ ಇದರ ಪ್ರಸ್ತಾಪವಿದ್ದರೂ, ‘ಸ್ಕೈಡೆಕ್’ ನಿರ್ಮಿಸಲು ಸ್ಥಳವನ್ನೇ ಎಂಜಿನಿಯರ್‌ಗಳು ಗುರುತಿಸಲು ಸಾಧ್ಯವಾಗಿಲ್ಲ.

ಬೆಂಗಳೂರಿನಲ್ಲಿ ಎರಡನೇ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸ್ಥಳ ನಿಗದಿಯಾಗುವುದು ವಿಳಂಬವಾಗಿರುವುದರಿಂದ ‘ಸ್ಕೈಡೆಕ್’ಗೆ ದಕ್ಷಿಣ ಹಾಗೂ ಉತ್ತರದಲ್ಲಿ ಗುರುತಿಸಲಾಗಿದ್ದ ಸ್ಥಳವನ್ನು ಅಂತಿಮಗೊಳಿಸಲು ಸಾಧ್ಯವಾಗಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುತ್ತಿದ್ದಾರೆ. ಪ್ರತಿಯೊಂದು ಯೋಜನೆಯ ವಿಳಂಬಕ್ಕೂ ‘ಸಿದ್ಧ ಸಬೂಬು’ ತಯಾರಿಸಿಟ್ಟುಕೊಂಡಿರುವ ಬಿಬಿಎಂಪಿ ಅಧಿಕಾರಿಗಳು, ಹಲವು ವರ್ಷಗಳಿಂದ ನಡೆಯುತ್ತಿರುವ ಮೇಲ್ಸೇತುವೆ ಕಾಮಗಾರಿಗಳ ವಿಳಂಬಕ್ಕೂ ಕಾರಣರಾಗಿದ್ದಾರೆ ಎಂದು ನಾಗರಿಕರು ದೂರುತ್ತಲೇ ಇದ್ದಾರೆ.



ಬಜೆಟ್ ನಿರಂತರ ಪ್ರಕ್ರಿಯೆ: ಹರೀಶ್

‘ಬಜೆಟ್ ಅನ್ನುವುದು ಒಂದು ವರ್ಷದಲ್ಲಿ ನಾವು ಕೈಗೊಳ್ಳುವ ಯೋಜನೆಗಳ ಕೈಪಿಡಿ. ಮೆಗಾ ಯೋಜನೆಗಳು ಒಂದೇ ವರ್ಷದಲ್ಲಿ ಪೂರ್ಣಗೊಳ್ಳುವುದಿಲ್ಲ. ಆರಂಭಿಕ ವೆಚ್ಚವನ್ನು ಮೊದಲ ವರ್ಷದಲ್ಲಿ ತೋರಿಸಿದರೆ, ಮುಂದಿನ ಬಜೆಟ್‌ಗಳಲ್ಲಿ ಅವುಗಳಿಗೆ ವಿನಿಯೋಗಿಸುವ ಹಣವನ್ನು ಪ್ರಕಟಿಸಲಾಗುತ್ತದೆ. ಸುಮಾರು ಐದು ವರ್ಷಗಳು ನಡೆಯುವ ಬೃಹತ್ ಯೋಜನೆಗಳು ಈ ವರ್ಷವೇ ಮುಗಿಯಬೇಕು ಎಂದರೆ ಸಾಧ್ಯವಾಗುವುದಿಲ್ಲ’ ಎಂದು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಹರೀಶ್ ಕುಮಾರ್ ಅವರು ತಿಳಿಸಿದರು

ಕೆಪಿಎಂಇ ಕಾಯ್ದೆ: ಆಸ್ಪತ್ರೆಗಳಿಗೆ ₹ 7.35 ಲಕ್ಷ ದಂಡ

2 ಚಿಕಿತ್ಸಾಲಯಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ಬೆಂಗಳೂರು ನಗರ ಜಿಲ್ಲಾಧಿಕಾರಿ ಆದೇಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆಸ್ಪತ್ರೆಗಳಿಂದ ನಿಯಮ ಉಲ್ಲಂಘನೆ
- ಪ್ರಾಧಿಕಾರದ ಸಭೆಯಲ್ಲಿ ಆದೇಶ
- 39 ಪ್ರಕರಣಗಳ ವಿವರ ಸಲ್ಲಿಕೆ, 15 ಪ್ರಕರಣ ಮುಂದಿನ ಸಭೆಗೆ

ಬೆಂಗಳೂರು: ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆಯ (ಕೆಪಿಎಂಇ) ನಿಯಮಗಳ ಉಲ್ಲಂಘನೆ ಕಾರಣ ಆಸ್ಪತ್ರೆಗಳು ಸೇರಿ 16 ಸಂಸ್ಥೆಗಳಿಗೆ ₹ 7.35 ಲಕ್ಷ ದಂಡ ಹಾಗೂ ಎರಡು ಚಿಕಿತ್ಸಾಲಯಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಕೆಪಿಎಂಇ ನೋಂದಣಿ ಮತ್ತು ಕುಂದು ಕೊರತೆ ಪ್ರಾಧಿಕಾರದ ಸಭೆಯಲ್ಲಿ ಆದೇಶಿಸಲಾಗಿದೆ. ಬುಧವಾರ ನಡೆದ ಸಭೆಯಲ್ಲಿ ಕೆಪಿಎಂಇ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಆರೋಗ್ಯಾಧಿಕಾರಿಗಳು 39 ಪ್ರಕರಣಗಳ ಬಗ್ಗೆ ವಿವರ ಸಲ್ಲಿಸಿದ್ದರು. ಇವುಗಳಲ್ಲಿ ಯಲಹಂಕದ ಅಟ್ಟೂರು ಲೇಔಟ್‌ನ ರಾಯ್ ಪೈಲ್ಸ್ ಕ್ಲಿನಿಕ್ ಹಾಗೂ ಕೆ.ಆರ್. ಪುರದ ದೇವಸಂದ್ರದ ವೆಂಕಟೇಶ್ವರ ಚಿತ್ರಮಂದಿರ ರಸ್ತೆ ಬಳಿಯಿರುವ ಕಾಮಧೇನು ಪಂಚಗವ್ಯ ಚಿಕಿತ್ಸಾಲಯದ ವಿರುದ್ಧ ಎಫ್‌ಐಆರ್ ದಾಖಲಿಸಲು ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

ಚರ್ಮ ಸಂಬಂಧಿ ಸಮಸ್ಯೆಗೆ ಚಿಕಿತ್ಸೆ ಒದಗಿಸುತ್ತಿದ್ದ ‘ಸ್ಕಿನ್ ಡಿಸೈರ್ಸ್ ಡರ್ಮಾಕೊ’ ಕೇಂದ್ರವನ್ನು ಮುಚ್ಚಲು ಸೂಚಿಸಿದ್ದಾರೆ. ಒಂದು ಪ್ರಕರಣವನ್ನು ಕರ್ನಾಟಕ ವೈದ್ಯಕೀಯ ಪರಿಷತ್ತಿಗೆ ವರ್ಗಾಯಿಸಲಾಗಿದೆ. ಮೂರು ಸಂಸ್ಥೆಗಳ ಪ್ರತಿನಿಧಿಗಳು ಸಭೆಗೆ ಗೈರಾಗಿದ್ದರು. 15 ಪ್ರಕರಣಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಆದೇಶಿಸಿದ್ದಾರೆ.

ದಂಡ ವಿಧಿಸಲ್ಪಟ್ಟ ಸಂಸ್ಥೆಗಳು: ಅಂದ್ರಹಳ್ಳಿಯ ತಿಗಳರಪಾಳ್ಯದ ‘ಲಕ್ಷ್ಮೀ ಪಾಲಿ ಕ್ಲಿನಿಕ್’, ಮಾಚೋಹಳ್ಳಿ ಗೇಟ್ ಬಳಿಯಿರುವ ಪಾನ ಮತ್ತು ಮಾದಕ ಚಟ ಬಿಡಿಸುವ ‘ನವಜೀವನ ಟ್ರಸ್ಟ್’ ಹಾಗೂ ‘ನವೋದಯ ಮದ್ಯಪಾನ ಮತ್ತು ಮಾದಕ ಚಟ ಬಿಡಿಸುವ ಕೇಂದ್ರ’ಕ್ಕೆ ತಲಾ ₹ 1 ಲಕ್ಷ ದಂಡ ವಿಧಿಸಲಾಗಿದೆ.

ಸುಂಕದಕಟ್ಟೆಯಲ್ಲಿರುವ ಕೀರ್ತನ ಫೌಂಡೇಷನ್, ಗಿಡದಕೋನೇನಹಳ್ಳಿಯ 8ನೇ ಬ್ಲಾಕ್‌ನಲ್ಲಿರುವ ಅನನ್ಯಾ ಆಸ್ಪತ್ರೆ, ನೆಲಗದರಹಳ್ಳಿಯ 1ನೇ ಮುಖ್ಯರಸ್ತೆಯಲ್ಲಿರುವ ಸಮೃದ್ಧಿ ಡಯಾಗ್ನಾಸ್ಟಿಕ್, ವೈಯಾಲಿಕಾವಲ್‌ನಲ್ಲಿರುವ ಮೆಡಲ್ ಡಯಾಗ್ನಾಸ್ಟಿಕ್ ಹಾಗೂ ಮಾಚೋಹಳ್ಳಿ ಗೇಟ್ ಬಳಿ ಇರುವ ಸಂತೃಪ್ತಿ ಫೌಂಡೇಷನ್‌ಗೆ ತಲಾ ₹ 50 ಸಾವಿರ ದಂಡ ಹಾಕಲಾಗಿದೆ.

ಎಚ್‌ಬಿಆರ್ ಬಡಾವಣೆಯ ಕೊಸ್ಮೆಡಿಕ್ಸ್ ಕ್ಲಿನಿಕ್, ಕುರುಬರಹಳ್ಳಿ ಮುಖ್ಯರಸ್ತೆಯಲ್ಲಿರುವ ಲೋಟಸ್ ಆಸ್ಪತ್ರೆ, ಉತ್ತರಹಳ್ಳಿಯ ಸಾನಿಯಾ ಪೈಲ್ಸ್ ಕ್ಲಿನಿಕ್, ಕಾಮಾಕ್ಷಿಪಾಳ್ಯದ ಪೈಲ್ಸ್ ಮತ್ತು ಫಿಸ್ತುಲಾ ಕ್ಲಿನಿಕ್, ಹೊಂಗಸಂದ್ರದ ಸೇವಾ ಹೆಲ್ತ್ ಕೇರ್, ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ವಾಸನ್ ಐ ಕೇರ್ ಹಾಗೂ ಯಲಹಂಕದಲ್ಲಿ ರಾಜಶೇಖರ್ ಎಂಬುವರು ಮನೆಯಲ್ಲಿ ನಡೆಸುತ್ತಿದ್ದ ಕ್ಲಿನಿಕ್ ಮತ್ತು ಫಿಸಿಯೋಥೆರಪಿ ಕೇಂದ್ರಕ್ಕೆ ತಲಾ ₹ 25 ಸಾವಿರ ದಂಡ ವಿಧಿಸಲಾಗಿದೆ.

ಅಂದ್ರಹಳ್ಳಿ ಮುಖ್ಯರಸ್ತೆಯಲ್ಲಿರುವ ಚಲುವ ನಾರಾಯಣಸ್ವಾಮಿ ಪಾಲಿ ಕ್ಲಿನಿಕ್ ಆ್ಯಂಡ್ ಮೆಡಿಕಲ್‌ಗೆ ₹ 10 ಸಾವಿರ ದಂಡ ಹಾಕಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲೆ ಆರೋಗ್ಯಾಧಿಕಾರಿ ತಿಳಿಸಿದ್ದಾರೆ.

ಕರಗ: ಹಾಲಿ ಸಮಿತಿ ಮುಂದುವರಿಕೆಗೆ ಆದೇಶ

ಬೆಂಗಳೂರು: ನಗರದ ಪ್ರಸಿದ್ಧ ಕರಗ ಮಹೋತ್ಸವ ಏಪ್ರಿಲ್ 4ರಿಂದ 14ರವರೆಗೆ ನಡೆಯಲಿರುವ ಹಿನ್ನೆಲೆಯಲ್ಲಿ ಅಲ್ಲಿಯವರೆಗೆ ಹಾಲಿ ಧರ್ಮರಾಯ ಸ್ವಾಮಿ ದೇವಸ್ಥಾನದ ನಿರ್ವಹಣಾ ಸಮಿತಿಯೇ ಮುಂದುವರಿಯಲು ಹೈಕೋರ್ಟ್ ಅನುಮತಿ ನೀಡಿ ಆದೇಶಿಸಿದೆ.

‘ಹೊಸ ಸಮಿತಿ ರಚಿಸುವವರೆಗೆ ಹಾಲಿ ಸಮಿತಿ ಮುಂದುವರಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ನಗರದ ತಿಗಳರಪೇಟೆಯ ‘ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನ ನಿರ್ವಹಣಾ ಸಮಿತಿ’ ಅಧ್ಯಕ್ಷ ಕೆ.ಸತೀಶ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಜಯಕುಮಾರ್ ಎಸ್.ಪಾಟೀಲ್, ‘ಧರ್ಮರಾಯ ಸ್ವಾಮಿ ದೇವಸ್ಥಾನದ ಹಾಲಿ ನಿರ್ವಹಣಾ ಸಮಿತಿ ಅವಧಿಯು ಇದೇ 21ಕ್ಕೆ ಮುಗಿಯಲಿದೆ. ಆದರೆ, ಕರಗ ಸಿದ್ಧತೆ ಎರಡು ತಿಂಗಳ ಹಿಂದೆಯೇ ಆರಂಭವಾಗಿದೆ. ಏಪ್ರಿಲ್ 4ರಿಂದ 14ರವರೆಗೆ ಕರಗ ಮಹೋತ್ಸವ ನಡೆಯಲಿದೆ. ಒಂದೊಮ್ಮೆ ಹಾಲಿ ನಿರ್ವಹಣಾ ಸಮಿತಿ ಬದಲಿಸಿದರೆ ಕರಗ ಮಹೋತ್ಸವ ಸುಗಮವಾಗಿ ನಡೆಯಲು ಅಡಚಣೆ ಆಗಲಿದೆ. ಆದ್ದರಿಂದ ಕರಗ ಮಹೋತ್ಸವ ಮುಗಿಯುವವರೆಗೆ ಹಾಲಿ ಸಮಿತಿಯನ್ನೇ ಮುಂದುವರಿಸಲು ಸರ್ಕಾರಕ್ಕೆ ಆದೇಶಿಸಬೇಕು’ ಎಂದು ಕೋರಿದರು.

ಇದಕ್ಕೆ ರಾಜ್ಯ ಸರ್ಕಾರದ ಪರ ವಕೀಲರು ಯಾವುದೇ ಆಕ್ಷೇಪ ವ್ಯಕ್ತಪಡಿಸಲಿಲ್ಲವಾದ ಕಾರಣ ನ್ಯಾಯಪೀಠ, ‘ಧರ್ಮರಾಯ ಸ್ವಾಮಿ ದೇವಸ್ಥಾನ ಹಾಲಿ ನಿರ್ವಹಣಾ ಸಮಿತಿಯು ಕರಗ ಮಹೋತ್ಸವ ಮುಗಿಯುವವರೆಗೆ ಅಂದರೆ ಏಪ್ರಿಲ್ 15ರವರೆಗೆ ಅಸ್ತಿತ್ವದಲ್ಲಿರಲಿದೆ’ ಎಂದು ನಿರ್ದೇಶಿಸಿ ವಿಚಾರಣೆಯನ್ನು ಏಪ್ರಿಲ್ 15ಕ್ಕೆ ಮುಂದೂಡಿತು.

ಸರ್ಕಾರದ ವಿರುದ್ಧ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅಶೋಕ ಆರೋಪ

ಗ್ಯಾರಂಟಿಯಿಂದ ಬೊಕ್ಕಸ ಖಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸರ್ಕಾರ ತನ್ನ ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಹಾಗೂ ಪರಿಶಿಷ್ಟ ಪಂಗಡಗಳ ಉಪಯೋಜನೆಯ (ಟಿಎಸ್‌ಪಿ) ಅನುದಾನವನ್ನು ದುರ್ಬಳಕೆ ಮಾಡಿಕೊಂಡು ಸಮುದಾಯಕ್ಕೆ ಅನ್ಯಾಯ ಮಾಡಿದೆ ಎಂದು ಆರೋಪಿಸಿ ಬಿಜೆಪಿ ಮುಖಂಡರು ಬುಧವಾರ ಪ್ರತಿಭಟನೆ ನಡೆಸಿದರು.

‘ಕಮಿಷನ್ ಕುಮಾರ’, ‘ಲೂಟಿ ರಾಮಯ್ಯ’ ಎಂಬುದು ಸೇರಿದಂತೆ ವಿವಿಧ ಫಲಕಗಳನ್ನು ಪ್ರದರ್ಶಿಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು. ದಲಿತರ ಅನುದಾನ ಗ್ಯಾರಂಟಿಗೆ ಬಳಸುವುದಿಲ್ಲ ಎಂದು ಘೋಷಣೆ ಮಾಡುವವರೆಗೆ ಪ್ರತಿಭಟನೆ ಮುಂದುವರಿಸಲಾಗವುದು ಎಂದು ಪ್ರತಿಭಟನಕಾರರು ತಿಳಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ‘ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ರಾಜ್ಯದ ಬೊಕ್ಕಸ ಖಾಲಿಯಾಗಿದೆ. ಅಭಿವೃದ್ಧಿ ಶೂನ್ಯವಾಗಿದೆ. ಈ ನಡುವೆ ದಲಿತರಿಗೆ ಮೀಸಲಿಟ್ಟಿರುವ ಹಣವನ್ನು ಗ್ಯಾರಂಟಿಗೆ ದುರ್ಬಳಕೆ ಮಾಡಿ ಅನ್ಯಾಯವೆಸಗಿದೆ. ನಾನು ಸಿದ್ದಣ್ಣ, ಲೂಟಿ ಗ್ಯಾರಂಟಿಯಣ್ಣ ಎಂಬಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವರ್ತಿಸುತ್ತಿದ್ದಾರೆ. ರಾಜ್ಯವನ್ನು ಭಿಕ್ಷೆ ಬೇಡುವ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ’ ಎಂದು ಟೀಕಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಮಾತನಾಡಿ, ‘ದಲಿತರ ಹೆಸರಿನಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಆದರೆ, ದಲಿತರ ಅಭಿವೃದ್ಧಿ ಮಾಡದೇ ಕೇವಲ ವೋಟ್ ಬ್ಯಾಂಕ್ ಮಾಡಿಕೊಂಡಿದೆ. ಕಾಂಗ್ರೆಸ್ ಅಧಿಕಾರ ಹಿಡಿದು 20 ತಿಂಗಳು ಆದರೂ ಯಾವುದೇ ಹೊಸ ಯೋಜನೆ, ಕಾರ್ಯಕ್ರಮಗಳು ಘೋಷಣೆ ಮಾಡಿಲ್ಲ. ಬಿಜೆಪಿ ಅವಧಿಯಲ್ಲಿದ್ದ ಯೋಜನೆಗಳನ್ನು ರದ್ದುಪಡಿಸಿದೆ’ ಎಂದು ಟೀಕಿಸಿದರು. ದಲಿತರ ಹಣ ದುರ್ಬಳಕೆ ಖಂಡಿಸಿ ಪಕ್ಷದಿಂದ 14 ತಂಡಗಳನ್ನು ರಚಿಸಿ ರಾಜ್ಯವ್ಯಾಪಿ ಆಂದೋಲನ ಕೈಗೊಳ್ಳಲಾಗಿದೆ ಎಂದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ‘ಭ್ರಷ್ಟಾಚಾರ, ಕಮಿಷನ್ ಹಗರಣದಲ್ಲಿ ಮುಳುಗಿರುವ ಕಾಂಗ್ರೆಸ್ ಗ್ಯಾರಂಟಿ ಯೋಜನೆಗೆ ದಲಿತರ ಹಣ ಲೂಟಿ ಮಾಡಲು ಮುಂದಾಗಿದೆ. ಇದಕ್ಕೆ ಪಕ್ಷ ಯಾವುದೇ ಆಸ್ಪದ ನೀಡುವುದಿಲ್ಲ ಹೋರಾಟ ತೀವ್ರಗೊಳಿಸಲಾಗುವುದು’ ಎಂದು ಎಚ್ಚರಿಸಿದರು.

ಪ್ರತಿಭಟನೆ ವೇಳೆ ಶಾಸಕರಾದ ಡಾ. ಅಶ್ವತ್ಥನಾರಾಯಣ, ಎಸ್.ಆರ್. ವಿಶ್ವನಾಥ್, ಬೈರತಿ ಬಸವರಾಜ್, ಮಾನಪ್ಪ ಡಿ. ವಜ್ಜಲ್, ಉದಯ ಗರುಡಾಚಾರ್, ಸಿಮೆಂಟ್ ಮಂಜು, ರಘು, ಭಾಗೀರಥಿ ಮುರುಳ್ಯ, ಮಾಜಿ ಶಾಸಕ ಹಾಲಪ್ಪ, ಪ್ರಕೋಷ್ಠಗಳ ಸಂಯೋಜಕ ದತ್ತಾತ್ರಿ, ಮುಖಂಡರಾದ ತಮ್ಮೇಶ್ ಗೌಡ, ಹರೀಶ್, ರಾಮಮೂರ್ತಿ, ಸಪ್ತಗಿರಿ ಗೌಡ, ಉಮೇಶ್ ಶೆಟ್ಟಿ, ರವೀಂದ್ರ ಭಾಗವಹಿಸಿದ್ದರು.



ದಲಿತರಿಗೆ ಮೀಸಲಾಗಿರುವ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯ ಹಣವನ್ನು ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನಗೆ ದುರ್ಬಳಕೆ ಮಾಡುತ್ತಿದೆ ಎಂದು ಆರೋಪಿಸಿ ಬಿಜೆಪಿ ಮುಖಂಡರು, ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಹಿರಿಯ ನಾಗರಿಕರೊಬ್ಬರಿಗೆ ನಿವೇಶನ ಹಸ್ತಾಂತರ ವಿಳಂಬ: 'ಕೆ–ರೇರಾ' ಕ್ರಮ

ಬಿಡಿಎಗೆ ₹12.43 ಲಕ್ಷ ದಂಡ

• ಕೆ.ಎಸ್.ಸುನಿಲ್

ಮುಖ್ಯಾಂಶಗಳು

- 60X40 ಅಳತೆಯ ನಿವೇಶನ ಖರೀದಿ
- 2017ರಲ್ಲಿ ಕ್ರಯ ಪತ್ರ ನೋಂದಣಿ
- 7 ವರ್ಷವಾದರೂ ನಿವೇಶನ ಹಸ್ತಾಂತರವಿಲ್ಲ

ಬೆಂಗಳೂರು: ಹಿರಿಯ ನಾಗರಿಕರೊಬ್ಬರಿಗೆ ನಿವೇಶನ ಹಸ್ತಾಂತರ ವಿಳಂಬ ಮಾಡಿದ ಕಾರಣಕ್ಕೆ ₹12.43 ಲಕ್ಷ ದಂಡ ಪಾವತಿಸುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ–ರೇರಾ) ಆದೇಶಿಸಿದೆ.

ಅರ್ಕಾವತಿ ಬಡಾವಣೆ ಯೋಜನೆಯನ್ನು 'ರೇರಾ' ಕಾಯ್ದೆಯಡಿ 2023ರ ನವೆಂಬರ್‌ನಲ್ಲಿಯೇ ನೋಂದಣಿ ಮಾಡಬೇಕೆಂದು ಸೂಚಿಸಿದ್ದರೂ ನೋಂದಣಿ ಮಾಡಿಲ್ಲ. ಹಾಗಾಗಿ ಕೂಡಲೇ ನೋಂದಣಿ ಮಾಡುವಂತೆ ಪ್ರಾಧಿಕಾರಕ್ಕೆ ನಿರ್ದೇಶನ ನೀಡಿದೆ.

ಫೆಬ್ರುವರಿ 13ರಂದು ರೇರಾ ಅಧ್ಯಕ್ಷ ರಾಕೇಶ್ ಸಿಂಗ್ ಮತ್ತು ಸದಸ್ಯ ಜಿ. ರವೀಂದ್ರನಾಥ ರೆಡ್ಡಿ ಅವರು ಈ ಆದೇಶ ಹೊರಡಿಸಿದ್ದಾರೆ.

ರೇರಾ ಕಾಯ್ದೆ ಸೆಕ್ಷನ್ 31ರ ಅಡಿ ಬಿಡಿಎ ಆಯುಕ್ತರ ವಿರುದ್ಧ ವಿದ್ಯಾರಣ್ಯಪುರ ನಿವಾಸಿ, ನಿವೃತ್ತ ಲೆಕ್ಕಪರಿಶೋಧಕ ಸುತಂತಿರಾಜ್ ಅವರು ಕೆ–ರೇರಾಕ್ಕೆ ದೂರು ಸಲ್ಲಿಸಿದ್ದರು.

2006ರಲ್ಲಿ ಸುತಂತಿರಾಜ್ ಅವರು ಬೆಂಗಳೂರು ಪೂರ್ವದ ಅರ್ಕಾವತಿ ಬಡಾವಣೆಯ ಅಮಾನಿ ಬೈರತಿಖಾನೆಯ 18ನೇ ಬ್ಲಾಕ್ ನಲ್ಲಿ 60 ಅಡಿ x 40 ಅಡಿ ನಿವೇಶನವನ್ನು ₹7,50,100ಕ್ಕೆ ಖರೀದಿಸಿದ್ದರು. ನಿವೇಶನ ಸಂಖ್ಯೆ 358ಕ್ಕೆ ಸಂಬಂಧಿಸಿದ ಕ್ರಯಪತ್ರ 2017ರ ಜನವರಿ 2ರಂದು ನೋಂದಣಿ ಆಗಿತ್ತು. ಕ್ರಯಪತ್ರ ನೋಂದಣಿಯಾಗಿ ಏಳು ವರ್ಷವಾದರೂ ಅರ್ಕಾವತಿ ಬಡಾವಣೆ ಅಭಿವೃದ್ಧಿಪಡಿಸುವಲ್ಲಿ ಬಿಡಿಎ ವಿಫಲವಾಗಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ನಿವೇಶನ ಹಸ್ತಾಂತರ ವಿಳಂಬ ಮಾಡಿದ್ದಕ್ಕೆ ಬಡ್ಡಿ ಸಮೇತ ₹12,43,792 ನೀಡಬೇಕು ಎಂದು ದೂರುದಾರರು ಬಿಡಿಎಗೆ ಸಲ್ಲಿಸಿದ್ದ ಜ್ಞಾಪನಾ ಪತ್ರವನ್ನು ಸಹ ರೇರಾಕ್ಕೆ ಹಾಜರುಪಡಿಸಿದ್ದರು. ಈ ದೂರಿಗೆ ಸಂಬಂಧಿಸಿದಂತೆ ರೇರಾ ಹಲವು ಬಾರಿ ಬಿಡಿಎಗೆ ನೋಟಿಸ್ ನೀಡಿತ್ತು.

ನೋಟಿಸ್‌ಗೆ ವಿವರಣೆ ಸಹ ನೀಡಲಿಲ್ಲ ಹಾಗೂ ಹನ್ನೊಂದು ಬಾರಿ ನಡೆದ ವಿಚಾರಣೆಗೂ ಆಯುಕ್ತರು ಹಾಜರಾಗಿರಲಿಲ್ಲ.

'ಸಾಕಷ್ಟು ಕಾಲಾವಕಾಶ ನೀಡಿದರೂ ಆದೇಶಪಾಲನೆ ಮಾಡುವಲ್ಲಿ ಬಿಡಿಎ ವಿಫಲವಾಗಿದೆ. ಬಿಡಿಎ ತಾನು ಕೊಟ್ಟ ಭರವಸೆ ಈಡೇರಿಸುವಲ್ಲಿ ವಿಫಲವಾಗಿರುವುದರಿಂದ ದೂರುದಾರರಿಗೆ ಬಡ್ಡಿಸಹಿತ ₹12,43,792 ಹಣ ಪಾವತಿಸಬೇಕು. ಆದೇಶ ಹೊರಡಿಸಿದ ದಿನಾಂಕದಿಂದ 60 ದಿನದೊಳಗೆ ದೂರುದಾರರಿಗೆ ದಂಡ ಪಾವತಿಸಬೇಕು' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'ನಾನು ಖರೀದಿಸಿದ ನಿವೇಶನಕ್ಕೆ ಭೇಟಿ ನೀಡಲು ಮಾಡಿದ ಪ್ರಯತ್ನಗಳು ವ್ಯರ್ಥವಾಯಿತು. ಏಕೆಂದರೆ ಜಮೀನು ಕಳೆದುಕೊಂಡವರಿಗೆ ಪರಿಹಾರ ಪಾವತಿ ಮಾಡಿಲ್ಲ ಎಂಬ ಕಾರಣಕ್ಕೆ ನಿವೇಶನಕ್ಕೆ ಕಾಲಿಡಲು ಅವಕಾಶ ನೀಡಲಿಲ್ಲ. 2024ರ ಮಾರ್ಚ್‌ನಲ್ಲಿ ಸಮಸ್ಯೆ ಇತ್ಯರ್ಥ ಪಡಿಸಲಾಯಿತು. ಈಗ ನಿವೇಶನಕ್ಕೆ ಮುಕ್ತವಾಗಿ ಭೇಟಿ ನೀಡಬಹುದಾಗಿದೆ' ಎಂದು ದೂರುದಾರ ಸುತಂತಿರಾಜ್ ತಿಳಿಸಿದರು.

'ಅರ್ಕಾವತಿ ಬಡಾವಣೆಯ ಎಲ್ಲಾ 22 ಬ್ಲಾಕ್‌ಗಳು ಮೂಲಸೌಲಭ್ಯ ಕೊರತೆ ಎದುರಿಸುತ್ತಿವೆ. ಅದರಲ್ಲಿ 18ನೇ ಬ್ಲಾಕ್ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ನೀರು ಅಥವಾ ವಿದ್ಯುತ್ ಸರಬರಾಜು ಪೂರೈಕೆ ಇಲ್ಲ. ಸರಿಯಾದ ಸಂಪರ್ಕ ರಸ್ತೆಗಳು ಇಲ್ಲ, ಡಾಂಬರು ಸಹ ಕಂಡಿಲ್ಲ' ಎಂದು ಹೇಳಿದರು.

2003-2004 ರಲ್ಲಿ ಬೆಂಗಳೂರು ಪೂರ್ವ ಮತ್ತು ಯಲಹಂಕದ 16 ಗ್ರಾಮಗಳಲ್ಲಿ ಸಾವಿರಾರು ಎಕರೆ ಜಮೀನು ಸ್ವಾಧೀನಪಡಿಸಿಕೊಂಡು ಅರ್ಕಾವತಿ ಬಡಾವಣೆ ನಿರ್ಮಿಸಿ, ಅದರಲ್ಲಿ 8,813 ನಿವೇಶನಗಳನ್ನು ರಚಿಸಲು ಉದ್ದೇಶಿಸಿತ್ತು.



ನೀರಿಗಾಗಿ...

ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉಂಟಾದಾಗ ಟ್ಯಾಂಕರ್ ಮೂಲಕ ನೀರು ತರಿಸಿ ತುಂಬಿಸಿಡುವ ಡ್ರಮ್‌ಗಳನ್ನು ತಳ್ಳುವ ಗಾಡಿಯಲ್ಲಿ ಕಟ್ಟಿಕೊಂಡು ಹೋಗುತ್ತಿರುವ ದೃಶ್ಯ ಬುಧವಾರ ಬಿವಿಕೆ ಅಯ್ಯಂಗಾರ್ ರಸ್ತೆ ಬಳಿ ಕಂಡು ಬಂತು

ಚಿತ್ರ: ಎಂ.ಎಸ್.ಮಂಜುನಾಥ್

ಸಂಕ್ಷಿಪ್ತ ಸುದ್ದಿ

'ಎಚ್‌ಆರ್' ಸಮ್ಮೇಳನ ಮಾ. 8ಕ್ಕೆ

ಬೆಂಗಳೂರು: ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ ವತಿಯಿಂದ ಮಾರ್ಚ್ 8ರಂದು ಯಲಹಂಕ ನ್ಯೂಟೌನ್‌ನಲ್ಲಿರುವ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾನವ ಸಂಪನ್ಮೂಲ (ಎಚ್‌ಆರ್) ಸಮ್ಮೇಳನ ಆಯೋಜಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಅವರು, 'ಈ ಸಮ್ಮೇಳನದಲ್ಲಿ ಕೈಗಾರಿಕಾ ಉದ್ಯಮಿಗಳು, ಮಾನವ ಸಂಪನ್ಮೂಲ ಅಧಿಕಾರಿಗಳು, ಉದ್ಯೋಗಾವಕಾಶಗಳ ಬಗ್ಗೆ ಚರ್ಚೆಗಳು ನಡೆಯಲಿವೆ' ಎಂದು ತಿಳಿಸಿದರು.

ಸತ್ಯನಾರಾಯಣ ಪೂಜೆ ಮಾ. 9ಕ್ಕೆ

ಬೆಂಗಳೂರು: ಬಿಲ್ಲವ ಅಸೋಸಿಯೇಶನ್ ವತಿಯಿಂದ ಮಾರ್ಚ್ 9ರಂದು ಹುಳಿಮಾವುನಲ್ಲಿರುವ ಬಿಲ್ಲವ ಭವನದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದಲ್ಲಿ ಸಚಿವ ದಿನೇಶ್ ಗುಂಡೂರಾವ್, ಮಾಜಿ ಸಚಿವರಾದ ಎಚ್.ಎಂ. ರೇವಣ್ಣ, ಜಯಮಾಲಾ, ಬಿಬಿಎಂಪಿ ಮಾಜಿ ಸದಸ್ಯೆ ಭಾಗ್ಯಲಕ್ಷ್ಮಿ ಮುರಳಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ, ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ.ಬಿ.ಎಲ್. ಸುಜಾತಾ ರಾಥೋಡ್ ಭಾಗವಹಿಸಲಿದ್ದಾರೆ ಎಂದು ಅಸೋಸಿಯೇಶನ್ ಅಧ್ಯಕ್ಷ ಎಂ. ವೇದಕುಮಾರ್ ತಿಳಿಸಿದ್ದಾರೆ.

ಕ್ರ್ಯಾಷ್ ಕೋರ್ಸ್ ಆರಂಭ

ಬೆಂಗಳೂರು: ಯಲಹಂಕ ಉಪ ನಗರದಲ್ಲಿರುವ ಎಕ್ಸೆಲ್ ಅಕಾಡೆಮಿಕ್ಸ್ ಸಂಸ್ಥೆಯಿಂದ ನೀಟ್, ಸಿಇಟಿ, ಜೆಇಇ ಪ್ರವೇಶ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಕೋರ್ಸ್ ಪ್ರಾರಂಭವಾಗಿದೆ. ಆಸಕ್ತ ವಿದ್ಯಾರ್ಥಿಗಳು ಕ್ರ್ಯಾಷ್ ಕೋರ್ಸ್‌ಗೆ ಪ್ರವೇಶ ಪಡೆದುಕೊಳ್ಳಬಹುದು.

ಮಾಹಿತಿಗೆ: 95136 57041.

ಬಿಬಿಎಂಪಿ ಬದಲು ಗರಿಷ್ಠ 7 ನಗರ ಪಾಲಿಕೆ ಸಾಕು

ಒಂದನೇ ಪುಟದಿಂದ...

ಪ್ರಮುಖ ಸಲಹೆಗಳು

- ಮಹಾಪೌರ, ಉಪ ಮಹಾಪೌರರ ಅಧಿಕಾರ ಅವಧಿ 30 ತಿಂಗಳು
- ಪ್ರತಿ ನಗರ ಪಾಲಿಕೆಯಲ್ಲಿ ವಾರ್ಡ್‌ಗಳ ಸಂಖ್ಯೆ 100ಕ್ಕಿಂತ ಕಡಿಮೆ ಇರುವಂತಿಲ್ಲ
- ಹೊಸದಾಗಿ ಸೃಷ್ಟಿಯಾಗುವ ನಗರ ಪಾಲಿಕೆಗಳಲ್ಲಿ ವಾರ್ಡ್‌ಗಳ ಒಟ್ಟು ಸಂಖ್ಯೆ ಆಸುಪಾಸಿನಲ್ಲೇ ಇರಬೇಕು.
- ಪ್ರತಿ ನಗರ ಪಾಲಿಕೆಯಲ್ಲಿ ಮೊದಲು 'ಬೆಂಗಳೂರು' ಎಂದಿರಬೇಕು. ಉದಾಹರಣೆಗೆ: ಬೆಂಗಳೂರು ಪೂರ್ವ ನಗರ ಪಾಲಿಕೆ, ಬೆಂಗಳೂರು ಪಶ್ಚಿಮ ನಗರ ಪಾಲಿಕೆ, ಬೆಂಗಳೂರು ದಕ್ಷಿಣ ನಗರ ಪಾಲಿಕೆ
- ನಗರ ಪಾಲಿಕೆ ವ್ಯಾಪ್ತಿಯ ನಿವಾಸಿ ಯಾವುದಾದರೂ ಒಂದು ವಾರ್ಡ್‌ನಲ್ಲಿ ಮಾತ್ರ ಸ್ಪರ್ಧಿಸಲು ಅವಕಾಶ ಇರಬೇಕು
- ನಗರ ಪಾಲಿಕೆ ಸದಸ್ಯನಾಗಿ ಆಯ್ಕೆಯಾದ ನಂತರ, ಬೇರೆ ನಗರ ಪಾಲಿಕೆಯ ವಾರ್ಡ್‌ನ ಮತದಾರರ ಪಟ್ಟಿಗೆ ಬದಲಾವಣೆ ಮಾಡಿಕೊಳ್ಳುವಂತಿಲ್ಲ. ಹಾಗೆ ಮಾಡಿಕೊಂಡರೆ, ಸದಸ್ಯತ್ವ ರದ್ದಾಗುತ್ತದೆ
- ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿನ ಪ್ರಾದೇಶಿಕ ಆಯುಕ್ತರನ್ನು ಮುಖ್ಯ ಆಯುಕ್ತರೆಂದು ಹೆಸರಿಸಬೇಕು
- ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿಗಳು ಸದಸ್ಯರಾಗಿರಬೇಕು
- ಮತದಾನದ ಹಕ್ಕು ಸಂದರ್ಭದಲ್ಲಿ ಸಂಸದರನ್ನು ಪ್ರಾಧಿಕಾರದ ಸದಸ್ಯರೆಂದು ಪರಿಗಣಿಸಬೇಕು
- ಬಿಬಿಎಂಪಿ ಕಾಯ್ದೆ –2020ಯನ್ನು ಮಸೂದೆಯಲ್ಲಿ ಸೇರ್ಪಡಿಸಬೇಕು
- ಪ್ರತಿ ಸ್ಥಾಯಿ ಸಮಿತಿಯಲ್ಲಿ ಕನಿಷ್ಠ ಐದು, ಗರಿಷ್ಠ 11 ಪಾಲಿಕೆ ಸದಸ್ಯರಿರಬೇಕು.
- ವಾರ್ಡ್ ಸಮಿತಿಯ ಪದಾವಧಿಯನ್ನು 20 ತಿಂಗಳಿಗೆ ಮಿತಿಗೊಳಿಸಬೇಕು
- 'ಕ್ಷೇತ್ರ ಸಮಾಲೋಚನೆ ಮತ್ತು ಸಮನ್ವಯ ಸಮಿತಿ'ಯಲ್ಲಿ ಶಾಸಕರು ಅಧ್ಯಕ್ಷರಾಗಿದ್ದು, ಪಾಲಿಕೆ ಸದಸ್ಯರು ಸದಸ್ಯರಾಗಿರಬೇಕು. ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮತ ಹೊಂದಿರುವ ವಿಧಾನ ಪರಿಷತ್ ಸದಸ್ಯರೂ ಸದಸ್ಯರಾಗಿರಬೇಕು
- ಮನರಂಜನೆ ಕಾರ್ಯಕ್ರಮಗಳ ಮೇಲೆ ತೆರಿಗೆ ವಿಧಿಸಬೇಕು
- ಆಸ್ತಿ ತೆರಿಗೆ ಬಾಕಿ ಪಾವತಿ ಮಾಡದ ಎರಡು ವರ್ಷಗಳ ಬಳಿಕ ಜಪ್ತಿ ಮಾಡಬೇಕು, ನಂತರದ ಒಂದು ವರ್ಷದ ಬಳಿಕ ಹರಾಜು ಮಾಡಲು ಕ್ರಮ ಕೈಗೊಳ್ಳಬೇಕು
- ಖಾಸಗಿ ಬೀದಿಗಳ ರಚನೆ ಅಧಿಕಾರವನ್ನು ವಾರ್ಡ್ ಸಮಿತಿಯಿಂದ ಆಯುಕ್ತರಿಗೆ ನೀಡಬೇಕು
- ಕೆರೆಗಳು, ಮೀನುಗಾರಿಕೆ, ತೋಟಗಾರಿಕೆಗೆ ಪ್ರತ್ಯೇಕ ಸಮಿತಿಗಳನ್ನು ರಚಿಸಬೇಕು

ಕಾಗುಣಿತ, ವ್ಯಾಕರಣ ದೋಷ: ಆಕ್ಷೇಪ

'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024'ರ ಕನ್ನಡ ಆವೃತ್ತಿಯಲ್ಲಿ ಸಾಕಷ್ಟು ಕಾಗುಣಿತ ಹಾಗೂ ವ್ಯಾಕರಣ ದೋಷಗಳನ್ನು ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿ ಕಂಡುಹಿಡಿದಿದೆ.

ಇಂಗ್ಲಿಷ್‌ನಲ್ಲಿ ರಚನೆಯಾಗಿರುವ ಮಸೂದೆಯನ್ನು ಕನ್ನಡಕ್ಕೆ ತರ್ಜುಮೆ ಮಾಡುವಲ್ಲಿ ವ್ಯತ್ಯಾಸಗಳಾಗಿವೆ. ಖಂಡಖಂಡಗಳಲ್ಲಿರುವ ದೋಷಗಳನ್ನು ವರದಿಯಲ್ಲಿ ತೋರಿಸಲಾಗಿದ್ದು ಅವುಗಳನ್ನು ಸರಿಪಡಿಸಲು ಸೂಚಿಸಲಾಗಿದೆ.

ಹುದ್ದೆಗಳ ಹೆಸರನ್ನೂ ತಪ್ಪಾಗಿ ನಮೂದಿಸಲಾಗಿದೆ. ಪರಿಭಾಷೆಯಲ್ಲಿ ವ್ಯತ್ಯಾಸಗಳಿವೆ, ತಪ್ಪಾಗಿ ಭಾಷಾಂತರವಾಗಿರುವುದನ್ನು ಸರಿಪಡಿಸಿಕೊಳ್ಳಬೇಕು. ಹಲವು ಖಂಡಗಳಲ್ಲಿ ವ್ಯತ್ಯಾಸವಾಗಿರುವುದನ್ನು ಗಮನಿಸಿದ ಸಮಿತಿ, ಪ್ರತಿ ಅಧ್ಯಾಯಗಳನ್ನೂ ಹೊಸದಾಗಿ ತರ್ಜುಮೆ ಮಾಡಿ, ಕನ್ನಡ ಮತ್ತು ಇಂಗ್ಲಿಷ್ ಆವೃತ್ತಿಗಳನ್ನು ಅಕ್ಕಪಕ್ಕದಲ್ಲಿ ಬರುವಂತೆ ಸಿದ್ಧಪಡಿಸಿ ಒದಗಿಸಲೂ ಸೂಚಿಸಿತ್ತು.

ಇಷ್ಟೆಲ್ಲ ಸೂಚನೆಯ ನಂತರವೂ, ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿ ಸಲ್ಲಿಸಿರುವ ವರದಿಯಲ್ಲಿ ಕರಡು ಮಸೂದೆಯನ್ನು ಇಂಗ್ಲಿಷ್‌ನಲ್ಲೇ ಪ್ರಕಟಿಸಲಾಗಿದೆ.

ತಮಿಳಿನ ಖ್ಯಾತ ನಿರ್ದೇಶಕ ಗೌತಮ್ ವಾಸುದೇವ್ ಮೆನನ್ ಅಭಿಮತ

'ಜಾತಿ ತಾರತಮ್ಯ ಕಥೆಯ ಸಿನಿಮಾ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿಗಳ ನಡುವೆ ಇರುವ ಬಿರುಕನ್ನು ಮತ್ತೆ ಮತ್ತೆ ಬೊಟ್ಟು ಮಾಡುತ್ತಿದ್ದರೆ ಇದು ಜನರನ್ನು ಇಬ್ಭಾಗಗೊಳಿಸುತ್ತದೆ. ಈ ಬಿರುಕು ಹೆಚ್ಚುತ್ತಲೇ ಹೋಗುತ್ತದೆ' ಎಂದು ತಮಿಳಿನ ನಿರ್ದೇಶಕ, ನಟ ಗೌತಮ್ ವಾಸುದೇವ್ ಮೆನನ್ ಹೇಳಿದರು.

16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ 'ದಿ ಆರ್ಟ್ ಆಫ್ ಸಿನಿಮಾ' ಎಂಬ ವಿಷಯದ ಕುರಿತ ಮಾಸ್ಟರ್ ಕ್ಲಾಸ್‌ನಲ್ಲಿ ಗೌತಮ್ ಭಾಗವಹಿಸಿ ಮಾತನಾಡಿದರು.

'80–90ರ ದಶಕದಲ್ಲಿನ ಜಾತಿ ತಾರತಮ್ಯದ ವಿಷಯಗಳನ್ನು ಕಥೆಯಾಗಿರಿಸಿಕೊಂಡು ಸಿನಿಮಾಗಳು ಬರುತ್ತಿದ್ದು, ಇನ್ನುಮುಂದೆ ಈ ರೀತಿಯ ಕಥೆಗಳ ಅಗತ್ಯವಿಲ್ಲ' ಎಂದು ಇತ್ತೀಚೆಗೆ ಗೌತಮ್ ಸಂದರ್ಶನವೊಂದರಲ್ಲಿ ಹೇಳಿದ್ದು ಚರ್ಚೆಗೆ ಗ್ರಾಸವಾಗಿತ್ತು. ಇದೇ ಹಿನ್ನೆಲೆಯನ್ನು ಇಟ್ಟುಕೊಂಡು ಅವರು 'ಮಾಸ್ಟರ್ ಕ್ಲಾಸ್'ನಲ್ಲಿ ಪ್ರತಿಕ್ರಿಯಾತ್ಮಕವಾಗಿ ಮಾತನಾಡಿದರು.

ಗೌತಮ್ ಹೇಳಿಕೆಯನ್ನು ಸಮನ್ವಯಕಾರರಾದ ಚಿತ್ರವಿಮರ್ಶಕಿ ಶುಭ್ರ ಗುಪ್ತ ಪ್ರಸ್ತಾವ ಮಾಡಿದಾಗ, 'ಇತ್ತೀಚೆಗೆ ಜಾತಿ ತಾರತಮ್ಯದ ವಿಷಯವುಳ್ಳ ಸಿನಿಮಾಗಳು ಹೆಚ್ಚು ಬರುತ್ತಿವೆ. ಬೇರೆ ಬೇರೆ ಕಥೆಯುಳ್ಳ ಸಿನಿಮಾಗಳೂ ಬೇಕು ಎಂದು ನಾನು ಹೇಳಿದ್ದೆ. ಜಾತಿ ಹಾಗೂ ಅದರಿಂದ ಉದ್ಭವಿಸುವ ಸಮಸ್ಯೆ, ತಾರತಮ್ಯ ಸಮಾಜದಲ್ಲಿ ಇಲ್ಲ ಎಂದಿಲ್ಲ. ನನ್ನ ತಲೆಯಲ್ಲಿ ಇದಕ್ಕೆ ಜಾಗವಿಲ್ಲ. ಜಾತಿಯನ್ನು ನಾನು ನಂಬುವುದಿಲ್ಲ. ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ. 80–90ರ ಕಾಲಘಟ್ಟವನ್ನು ಇಟ್ಟುಕೊಂಡು ಜಾತಿ ತಾರತಮ್ಯದ ಕಥೆಯನ್ನು ಹೊತ್ತ ಸಿನಿಮಾಗಳು ಬರುತ್ತಿವೆ. ಇವತ್ತಿನ ಕಥೆಗಳನ್ನು ಹೇಳಿ, ಅಂತಹ ಸಿನಿಮಾಗಳನ್ನು ನಾನು ಇಷ್ಟಪಡುತ್ತೇನೆ' ಎಂದು ಗೌತಮ್ ಸ್ಪಷ್ಟನೆ ನೀಡಿದರು.

ನಾವೇ ಕೊಲ್ಲುತ್ತಿದ್ದೇವೆ: 'ಒಟಿಟಿಯವರು ವರ್ಷಕ್ಕೆ ನಾಲ್ಕೈದು ಸಿನಿಮಾಗಳನ್ನು ದೊಡ್ಡ ಮೊತ್ತಕ್ಕೆ ಖರೀದಿಸುತ್ತಾರೆ. ಹೀಗಾಗಿ ಉಳಿದ ಸಣ್ಣ ಸಿನಿಮಾಗಳನ್ನು ಖರೀದಿಸಲು ಅವರ ಬಳಿ ಹಣವಿಲ್ಲ. ಚಿತ್ರಮಂದಿರಗಳನ್ನು ನಾವೇ ಕೊಲ್ಲುತ್ತಿದ್ದೇವೆ ಎನ್ನಬಹುದು. ನಮಗೆ ಸಿನಿಮಾಗಳ ಡಿಜಿಟಲ್ ಮಾರಾಟ ಮೊದಲೇ ಆಗಬೇಕು. ಆ ಹಣದಿಂದಲೇ ಸಿನಿಮಾದ ಉಳಿದ ಚಿತ್ರೀಕರಣದ ಖರ್ಚು ಸಾಗುತ್ತದೆ. ಚಿತ್ರಮಂದಿರಗಳಲ್ಲಿ ಸಿಗುವ ಹಣವನ್ನು ಬೋನಸ್ ಎಂದು ಎಲ್ಲ ನಿರ್ಮಾಪಕರು ಅಂದುಕೊಂಡಿದ್ದಾರೆ. ಈ ಮೂಲಕ ತಮ್ಮ ಸಿನಿಮಾಗಳನ್ನು, ವಹಿವಾಟನ್ನು ಕೊಲ್ಲುತ್ತಿದ್ದಾರೆ. ಆರಂಭದಲ್ಲಿ ಒಟಿಟಿ ಎನ್ನುವುದು ಸಿನಿಮಾಗಳಿಗೆ ಅತ್ಯುತ್ತಮ ವೇದಿಕೆ ಎಂದುಕೊಂಡಿದ್ದೆ. ಡಿಜಿಟಲ್ ಐಡಿಯಾ ಎನ್ನುವುದು ಕ್ರಮೇಣ ಕ್ಷೀಣಿಸಿ, ಮತ್ತೆ ಚಿತ್ರಮಂದಿರಗಳ ವೈಭವ ಮರುಕಳಿಸಲಿದೆ' ಎಂದು ಗೌತಮ್ ವಿಶ್ವಾಸ ವ್ಯಕ್ತಪಡಿಸಿದರು.

'ನಾವು ಚಿತ್ರಮಂದಿರಗಳಲ್ಲೇ ಸಿನಿಮಾ ನೋಡಿದ್ದ ಕಾರಣ ಸಿನಿಮಾ ಮೇಲೆ ಪ್ರೀತಿ ಮೂಡಿತು. ಈಗ ಚಿತ್ರಮಂದಿರಗಳಿಗೆ ಬನ್ನಿ ಎಂದು ಬೇಡುವ ಸ್ಥಿತಿ ಬಂದಿದೆ. ಅತ್ಯುತ್ತಮ ಕಥೆಗಳನ್ನು ಬರೆಯುವ, ಪರದೆ ಮೇಲೆ ಉತ್ಕೃಷ್ಟವಾದ ಅನುಭವ ನೀಡುವ ಅವಶ್ಯಕತೆ ಇದೆ. ಪ್ರೇಕ್ಷಕರ ಅಭಿರುಚಿ ಅರ್ಥಮಾಡಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ನನ್ನದೇ ಒಂದು ಸಿನಿಮಾ ಹೌಸ್‌ಫುಲ್ ಆಗಿರುವುದನ್ನು, ಮತ್ತೊಂದು ಸಿನಿಮಾವನ್ನು ಐದಾರು ಪ್ರೇಕ್ಷಕರಷ್ಟೇ ನೋಡುತ್ತಿರುವುದನ್ನು ಕಂಡಿದ್ದೇನೆ.

ಜನರಿಗೆ ಯಾವ ಕಥೆ ಇಷ್ಟ ಎಂದು ಊಹಿಸುವುದೂ ಕಷ್ಟ. ಇದುವೇ ಮತ್ತಷ್ಟು ಸಿನಿಮಾಗಳನ್ನು ಮಾಡಲು ಸ್ಫೂರ್ತಿ' ಎಂದರು.

ಸಂವಾದದಲ್ಲಿ ವಿದ್ಯಾರ್ಥಿಗಳು, ಪ್ರತಿನಿಧಿಗಳು ಭಾಗವಹಿಸಿದ್ದರು.

ಹೀರೊಗಳು ಪ್ರೇಮಕಥೆ ಒಪ್ಪುತ್ತಿಲ್ಲ !



ಗೌತಮ್

'ಇತ್ತೀಚಿನ ದಿನಗಳಲ್ಲಿ ಪ್ರೇಮಕಥೆಯುಳ್ಳ ಸಿನಿಮಾಗಳನ್ನು ಮಾಡುವ ಸ್ಟಾರ್ ನಟರಿಲ್ಲ. ಇದೊಂದು ಪ್ರೇಮಕಥೆಯೆಂದರೆ ನಟರು ಕಥೆಯನ್ನೇ ಕೇಳುವುದಿಲ್ಲ. ಹಿಂದಿ, ತೆಲುಗು, ಕನ್ನಡ ಚಿತ್ರರಂಗದ ಖ್ಯಾತ ನಟರನ್ನು ಕೇಳಿದ್ದೇನೆ, ಯಾರೂ ನನ್ನ ಪ್ರೇಮಕಥೆಯೊಂದನ್ನು ಒಪ್ಪಿಕೊಂಡಿಲ್ಲ. ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ ಕರೆತರುವ ಸಾಮರ್ಥ್ಯ ಹೊಂದಿರುವ ಬಿಗ್ ಸ್ಟಾರ್ ಒಬ್ಬರಿಗೆ ಈ ಸಿನಿಮಾ ಮಾಡಿದರೆ ಪ್ರೇಕ್ಷಕರಿಗೆ ನನ್ನ ಪ್ರೇಮಕಥೆಯನ್ನು ತಲುಪಿಸುವುದು ಸುಲಭ ಎಂದುಕೊಂಡಿದ್ದೆ. ಇದೊಂದು ಸೂಪರ್ ಸ್ಟಾರ್ ನಟನ ಪ್ರೇಮಕಥೆಯಾಗಿತ್ತು. ಇತ್ತೀಚೆಗೆ ಯಾವುದೇ ಪ್ರೇಮಕಥೆಗಳು ಬರುತ್ತಿಲ್ಲ. ನಟರಿಗೂ ಪ್ರೇಮಕಥೆಗಳು ಬೇಕಿಲ್ಲ. ಯಾರಾದರೂ ಒಬ್ಬರು ಸಿಕ್ಕೇ ಸಿಗುತ್ತಾರೆ. ಸ್ಟಾರ್ ಅಲ್ಲದ ನಟನೊಬ್ಬನನ್ನು ಹಾಕಿಕೊಂಡು ಈ ಸಿನಿಮಾ ಮಾಡುವ ಯೋಚನೆಯಲ್ಲಿದ್ದೇನೆ. ಮಣಿರತ್ನಂ ಅವರು 'ಅಲೈಪಾಯುದೆ' ಮಾಡುವಾಗ ಮಾಧವನ್ ಸ್ಟಾರ್ ನಟ ಆಗಿರಲಿಲ್ಲ. ಮಣಿರತ್ನಂ ಅವರೇ ನನಗೆ ಸ್ಫೂರ್ತಿ' ಎಂದರು ಗೌತಮ್.

320 ಬಸ್‌ಗಳು ಸಂಚಾರಕ್ಕೆ ಸಿದ್ಧ ● ಪ್ರಾಯೋಗಿಕವಾಗಿ 20 ಬಸ್‌ಗಳ ಸಂಚಾರ

ಬಿಎಂಟಿಸಿ: ಚಾಲಕರಿಲ್ಲದೇ ರಸ್ತೆಗಿಳಿಯದ ಎಲೆಕ್ಟ್ರಿಕ್ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿಯಲ್ಲಿ ಮೊದಲ ಬಾರಿಗೆ 320 ಎಲೆಕ್ಟ್ರಿಕ್ ಹವಾನಿಯಂತ್ರಿತ ಬಸ್‌ಗಳು ಸಂಚಾರಕ್ಕೆ ಸಿದ್ಧವಾಗಿವೆ. ಆದರೆ, ಚಾಲಕರು ಸಿಗದೇ 300 ಬಸ್‌ಗಳು ರಸ್ತೆಗೆ ಇಳಿದಿಲ್ಲ. 20 ಬಸ್‌ಗಳು ಮಾತ್ರ ಪ್ರಯೋಗಾರ್ಥ ಸಂಚಾರ ಮಾಡುತ್ತಿವೆ.

ಸದ್ಯ ಸಂಚರಿಸುವ ಬಿಎಂಟಿಸಿ ಹವಾ ನಿಯಂತ್ರಿತ ಬಸ್‌ಗಳು ಡೀಸೆಲ್ ಎಂಜಿನ್ ಹೊಂದಿರುವ ವೋಲ್ವೊ ಬಸ್‌ಗಳಾಗಿವೆ. ಎಲೆಕ್ಟ್ರಿಕ್ ಬಸ್‌ಗಳು ಹವಾ ನಿಯಂತ್ರಣವನ್ನು ಹೊಂದಿರಲಿಲ್ಲ.

ಇವಿಗಳನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರದ ಭಾರಿ ಕೈಗಾರಿಕಾ ಸಚಿವಾಲಯವು 'ಫೇಮ್-2' ಯೋಜನೆಯ ಮೂಲಕ ರಿಯಾಯಿತಿಯನ್ನು ನೀಡುತ್ತಿದೆ. ಆದರೆ, ಈ ರಿಯಾಯಿತಿಯನ್ನು ಖಾಸಗಿ ಕಂಪನಿ ಗಳಿಗಷ್ಟೇ ಪಡೆಯುವ



ಪ್ರಾಯೋಗಿಕ ಸಂಚಾರ ನಡೆಸುತ್ತಿರುವ ಎಲೆಕ್ಟ್ರಿಕ್ ಹವಾನಿಯಂತ್ರಿತ ಬಸ್

ಅವಕಾಶವನ್ನು ನೀಡಿರುವುದರಿಂದ ಖಾಸಗಿ ಕಂಪನಿಗಳೇ ನಿಗಮಗಳಿಗೆ ಇವಿ ಬಸ್‌ಗಳನ್ನು ಒದಗಿಸಿ ನಿರ್ವಹಿಸುತ್ತಿವೆ. ಹವಾನಿಯಂತ್ರಿತ ಇವಿ ಬಸ್‌ಗಳನ್ನು ಬಿಎಂಟಿಸಿಗೆ ಒದಗಿಸುವ ಗುತ್ತಿಗೆಯನ್ನು ಅಶೋಕ್ ಲೇಲ್ಯಾಂಡ್ ಅಡಿಯಲ್ಲಿರುವ ಒಎಚ್‌ಎಂ (ಓಂ) ಸಂಸ್ಥೆ ಪಡೆದಿದೆ.

ಬಿಎಂಟಿಸಿಯು ಪ್ರತಿ ಕಿಲೋ ಮೀಟರ್‌ಗೆ ₹ 65.8 ಬಾಡಿಗೆ ನೀಡಲಿದೆ. ಸದ್ಯ ಐಟಿಪಿಎಲ್ ನಿಲ್ದಾಣದಿಂದ 20 ಬಸ್‌ಗಳು ಕಾರ್ಯಾಚರಣೆ ನಡೆಸುತ್ತಿವೆ. ಐಟಿಪಿಎಲ್, ಕೆಂಪೇಗೌಡ ಬಸ್ ನಿಲ್ದಾಣ, ಕತ್ರಿಗುಪ್ಪೆ ಮತ್ತು ಹೆಬ್ಬಾಳ ಡಿಪೊಗಳಿಂದ ಎಲ್ಲ 320 ಬಸ್‌ಗಳು ಸಂಚರಿಸಲಿವೆ.

ಇವಿ ಬಸ್‌ಗಳಲ್ಲಿ ನಿರ್ವಾಹಕರು ಬಿಎಂಟಿಸಿ ಸಂಸ್ಥೆಗೆ ಸೇರಿದವರಾಗಿರುತ್ತಾರೆ. ಚಾಲಕರು ಗುತ್ತಿಗೆ ಪಡೆದ ಕಂಪನಿಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್‌ಗಳಿಗೆ ನಿರ್ವಾಹಕರ ಕೊರತೆ ಇಲ್ಲ. ಆದರೆ, ಚಾಲಕರು ಸಿಗದೇ ಇರುವುದರಿಂದ ಬಸ್‌ಗಳ ಸಂಚಾರ ಆರಂಭವಾಗಿಲ್ಲ ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ದಿನಕ್ಕೆ 9 ಗಂಟೆ ಕೆಲಸ ಮತ್ತು ಹೆಚ್ಚಿನ ಅವಧಿ (ಒಟಿ) ಕೆಲಸಕ್ಕೆ ಹೆಚ್ಚುವರಿ ಸಂಭಾವನೆ ನೀಡಲಾಗುವುದು' ಎಂದು ಜಾಹೀರಾತು ನೀಡಲಾಗಿದೆ. ಆಸಕ್ತರು ಸಂಪರ್ಕಿಸುತ್ತಿದ್ದಾರೆ. ಸದ್ಯದಲ್ಲಿಯೇ ಎಲ್ಲ ಬಸ್‌ಗಳ ಸಂಚಾರ ಆರಂಭವಾಗಲಿದೆ' ಎಂದು ಗುತ್ತಿಗೆ ಕಂಪನಿಯ ಅಧಿಕಾರಿಗಳು ತಿಳಿಸಿದ್ದಾರೆ.

'ಚಾಲಕರಿಗೆ ₹ 27,600 ವೇತನ, ₹ 125 ಒಟಿ ನೀಡುತ್ತಾರೆ. ಈ ವೇತನಕ್ಕೆ ದುಡಿಯಲು ಯುವ ತಲೆಮಾರಿನ ಚಾಲಕರು ತಯಾರು ಇರುವುದಿಲ್ಲ' ಎಂದು ಬಿಎಂಟಿಸಿ ಚಾಲಕರೊಬ್ಬರು ಪ್ರತಿಕ್ರಿಯಿಸಿದರು.

ಅಂಕಿ ಅಂಶಗಳು

6,500 ಬಿಎಂಟಿಸಿಯಲ್ಲಿರುವ ಒಟ್ಟು ಬಸ್‌ಗಳು

1,000 ಎಲೆಕ್ಟ್ರಿಕ್ ಬಸ್‌ಗಳು

800 ಈ ವರ್ಷ ಸೇರ್ಪಡೆಗೊಳ್ಳಲಿರುವ ಇವಿ ಬಸ್‌ಗಳು



ಸನ್ಮಾನ ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಶಿಬಿರದಲ್ಲಿ ಪಾಲ್ಗೊಂಡಿದ್ದ ಎನ್‌ಸಿಸಿ ವಿದ್ಯಾರ್ಥಿಗಳಾದ ವಿಶ್ವಾಸ್ ಎನ್ ಮತ್ತು ಶ್ರುತಿ ಕೆ.ಎಂ ಅವರನ್ನು ಎಐಟಿ ಕಾಲೇಜು ವತಿಯಿಂದ ಸನ್ಮಾನಿಸಲಾಯಿತು. ಪಿವಿಪಿ ಟ್ರಸ್ಟ್ ಕಾರ್ಯದರ್ಶಿ ಎಸ್. ಶಿವಮಲ್ಲು, ಪ್ರಾಂಶುಪಾಲ ಡಾ. ಎಂ. ಎನ್. ತಿಪ್ಪೇಸ್ವಾಮಿ, ಉಪ ಪ್ರಾಂಶುಪಾಲ ಡಾ. ಸಿದ್ದರಾಜು, ಎನ್‌ಎನ್‌ಸಿ (ಸಿಟಿಒ) ಅಧಿಕಾರಿ ಪ್ರವೀಣ್ ಕೆ.ಬಿ ಉಪಸ್ಥಿತರಿದ್ದರು

'ಜೀವಿತ ಪ್ರಮಾಣಪತ್ರ'ಕ್ಕೆ ಸಹಿ ಹಾಕಲು ಅವಕಾಶ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ನಿವೃತ್ತ ನೌಕರರು (ಪಿಂಚಣಿದಾರರು) ಹಾಗೂ ಕುಟುಂಬ ಪಿಂಚಣಿದಾರರು ತಮ್ಮ 'ಜೀವಿತ ಪ್ರಮಾಣಪತ್ರ'ಕ್ಕೆ ಸಹಿ ಹಾಕಲು ಅವಕಾಶ ಮಾಡಿಕೊಡಲಾಗಿದೆ.

ಕಾವೇರಿ ಭವನದ ಕೇಂದ್ರ ಕಚೇರಿಯಲ್ಲಿರುವ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿವೃತ್ತ ನೌಕರರ ಸಂಘದ ಕಚೇರಿಯಲ್ಲಿ ಮಾ. 5ರಿಂದ 20ರವರೆಗೆ ಸಹಿ ಮಾಡಲು ಅವಕಾಶವಿದೆ ಎಂದು ಸಂಘದ ಕಾರ್ಯದರ್ಶಿ ರುದ್ರೇಗೌಡ ತಿಳಿಸಿದ್ದಾರೆ.

ಕಾಲಿನ್ಸ್ ಏರೋಸ್ಪೇಸ್ ಎಂಜಿನಿಯರಿಂಗ್ ಕಂಪನಿಯ ಕೇಂದ್ರ

ರಾಜ್ಯದಲ್ಲೂ ವಿಮಾನಗಳ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಲಿನ್ಸ್ ಏರೋಸ್ಪೇಸ್ ಎಂಜಿನಿಯರಿಂಗ್ ಕಂಪನಿಯ ಅತ್ಯಾಧುನಿಕ ಪರೀಕ್ಷಾ ಕೇಂದ್ರದಲ್ಲಿ ಆಧುನಿಕ ವಿಮಾನಗಳ ಪರೀಕ್ಷೆಯೂ ನಡೆಯಲಿದ್ದು, ಜಾಗತಿಕ ಪೂರೈಕೆಯಲ್ಲಿ ಕರ್ನಾಟಕ ಮಹತ್ವದ ಪಾತ್ರ ವಹಿಸಲಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ವೈಮಾಂತರಿಕ್ಷ ಮತ್ತು ರಕ್ಷಣಾ ವಲಯದ ಸಾಧನಗಳ ತಯಾರಿಕಾ ಕಂಪನಿ 'ಕಾಲಿನ್ಸ್'ನ ಪರೀಕ್ಷಾ ಕೇಂದ್ರವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಂಪನಿ 'ಪವರ್ಡ್ ಬೈ ಕಾಲಿನ್ಸ್' ತರಹದ ಉಪಕ್ರಮಗಳ ಮೂಲಕ ಸಣ್ಣ ಮತ್ತು ಮಧ್ಯಮ ಸ್ತರದ ಉದ್ಯಮಗಳ ಜತೆ ಸಹಭಾಗಿತ್ವಕ್ಕೆ ಮುಂದಾಗಿದೆ.


ಕಾಲಿನ್ಸ್ ಏರೋಸ್ಪೇಸ್ ಎಂಜಿನಿಯರಿಂಗ್ ಕಂಪನಿಯ ಅತ್ಯಾಧುನಿಕ ಪರೀಕ್ಷಾ ಕೇಂದ್ರವನ್ನು ಸಚಿವರಾದ ಎಂ.ಬಿ. ಪಾಟೀಲ, ಪ್ರಿಯಾಂಕ್ ಖರ್ಗೆ ಬುಧವಾರ ವೀಕ್ಷಿಸಿದರು

ಇದರಿಂದ ಸ್ಥಳೀಯವಾಗಿ ನಾವೀನ್ಯ ಮತ್ತು ಅತ್ಯಾಧುನಿಕ ತಂತ್ರಜ್ಞಾನಕ್ಕೆ ಉತ್ತೇಜನ ಸಿಗಲಿದೆ. ವಿಮಾನಗಳ ಕುರ್ಚಿ, ವಿಂಡ್‌ಶೀಲ್ಡ್ ಸೇರಿದಂತೆ ಹಲವು ಬಿಡಿಭಾಗಗಳನ್ನು ನಾನಾ ಪರೀಕ್ಷೆಗಳಿಗೆ ಒಳಪಡಿಸಿ, ನಂತರ ಬಳಕೆಗೆ ಅನುಮತಿ ಕೊಡಲಾಗುವುದು' ಎಂದರು.

ಭಾರತದ ವೈಮಾಂತರಿಕ್ಷ ವಲಯವು ಪರಿವರ್ತನೆಯ ಹಾದಿಯಲ್ಲಿದೆ. ಪ್ರತ್ಯೇಕ ಏರೋಸ್ಪೇಸ್ ಮತ್ತು ರಕ್ಷಣಾ ನೀತಿಯನ್ನು ಹೊಂದಿರುವ ಮೊಟ್ಟಮೊದಲ ರಾಜ್ಯ ಕರ್ನಾಟಕ. ರಫ್ತು ವಹಿವಾಟಿಗೆ ಶೇ 70ರಷ್ಟು ಕೊಡುಗೆ ನೀಡುತ್ತಿದೆ. ₹45 ಸಾವಿರ ಕೋಟಿ ಹೂಡಿಕೆ ಆಕರ್ಷಿಸುವ ಮತ್ತು 60 ಸಾವಿರ ಉದ್ಯೋಗಗಳನ್ನು ಸೃಷ್ಟಿಸುವ ಗುರಿ ಇದೆ ಎಂದು ಹೇಳಿದರು.

ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, 'ಯುವಜನರಿಗೆ ಕೌಶಲಾಭಿವೃದ್ಧಿ ತರಬೇತಿ ಕೊಡುವ ವ್ಯವಸ್ಥೆ ಮಾಡಬೇಕು. ಮಾನವ ಸಂಪನ್ಮೂಲವನ್ನು ಸನ್ನದ್ಧ ಸ್ಥಿತಿಯಲ್ಲಿ ಇಟ್ಟರೆ, ಮಾರುಕಟ್ಟೆ ಸೃಷ್ಟಿಯೂ ಸುಲಭವಾಗಲಿದೆ' ಎಂದರು.

ಕಂಪನಿಯ ಹಿರಿಯ ಉಪಾಧ್ಯಕ್ಷ ಕ್ಲೇ ಲಿಂಡ್ವಾಲ್, ಉಪಾಧ್ಯಕ್ಷ ಸ್ಟೀಫನ್ ಡಿಯಾನ್, ಬೆಂಗಳೂರು ಕಚೇರಿಯ ಉಪಾಧ್ಯಕ್ಷ ಸವ್ಯಸಾಚಿ ಶ್ರೀನಿವಾಸ ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿಗೆ ಕೇರಳ ನಿಯೋಗ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಹಾಗೂ ಅಧಿಕಾರಿಗಳ ನಿಯೋಗವು ಕೆಎಸ್‌ಆರ್‌ಟಿಸಿಗೆ ಭೇಟಿ ನೀಡಿ ಅಧ್ಯಯನ ನಡೆಸಿತು.

ನಿಗಮದಲ್ಲಿನ ಕಾರ್ಮಿಕ ಸ್ನೇಹಿ ಹಾಗೂ ಪ್ರಯಾಣಿಕ ಸ್ನೇಹಿ ಉಪಕ್ರಮಗಳು ಹಾಗೂ ಸಾರಿಗೆಯೇತರ ಆದಾಯದ ವಿಷಯಗಳ ಬಗ್ಗೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಅವರು ಮಾಹಿತಿ ನೀಡಿದರು. ಕೇರಳ ಸಾರಿಗೆಯ ವ್ಯವಸ್ಥಾಪಕ ನಿರ್ದೇಶಕ ಪಿ.ಎಸ್. ಪ್ರಮೋಜ್ ಸಂಕರ್ ಮಾಹಿತಿ ಪಡೆದುಕೊಂಡರು. ನಿಗಮದ ಘಟಕ, ಕಾರ್ಯಾಗಾರ ಹಾಗೂ ಕೇಂದ್ರ ಕಚೇರಿಗೆ ಭೇಟಿ ನೀಡಿದರು. ವಿವಿಧ ಮಾದರಿಯ ಬಸ್ ಬ್ರ್ಯಾಂಡಿಂಗ್ ಮತ್ತು ನಿರ್ವಹಣೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳ ನಿಯೋಗವು ಕೆಎಸ್‌ಆರ್‌ಟಿಸಿಗೆ ಭೇಟಿ ನೀಡಿತು

ಬಸ್ಸುಗಳ ಕಾರ್ಯ ನಿರ್ವಹಣೆ, ಪುನಶ್ಚೇತನ ಕಾರ್ಯ, ₹1 ಕೋಟಿ ಅಪಘಾತ ವಿಮಾ ಯೋಜನೆ, ಆರೋಗ್ಯ ಯೋಜನೆ, ವಿದ್ಯಾ ಚೇತನ ಯೋಜನೆ, ಮಾಹಿತಿ ತಂತ್ರಜ್ಞಾನಗಳ ಉಪಕ್ರಮಗಳಾದ ಎಚ್‌ಆರ್‌ಎಂಎಸ್, ಆನ್‌ಲೈನ್ ಜಿಯೋ ಟ್ಯಾಗ್ ಹಾಜರಾತಿ, ಬ್ಯುಸಿನೆಸ್ ಇಂಟೆಲಿಜೆಂಟ್ ಡ್ಯಾಶ್‌ಬೋರ್ಡ್, ಅವತಾರ್ 4.0, ಯುಪಿಐಗಳ ಕ್ರಮಗಳನ್ನು ಶ್ಲಾಘಿಸಿದರು.

ಕೆಎಸ್‌ಆರ್‌ಟಿಸಿ ನಿರ್ದೇಶಕಿ ನಂದಿನಿದೇವಿ, ಕೇರಳದ ನಿಗಮದ ಆರ್ಥಿಕ ಸಲಹೆಗಾರ ಎ. ಶಾಜಿ, ಪ್ರಧಾನ ವ್ಯವಸ್ಥಾಪಕ (ಎಸ್ಟೇಟ್) ಉಲ್ಲಾಸ್‌ಬಾಬು, ಉಪ ಪ್ರಧಾನ ವ್ಯವಸ್ಥಾಪಕ (ಐ.ಟಿ) ನಿಶಾಂತ್ ಎಸ್., ಸಮನ್ವಯ ಅಧಿಕಾರಿ (ಇಂಧನ ವಿಭಾಗ) ನವೀನ್ ಎನ್.ಐ., ಜರ್ಮನಿ ಸರ್ಕಾರದ ಪ್ರತಿನಿಧಿ ಶಿರೀಸ್ ಮಹೇಂದ್ರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

'ಸಾಮಾಜಿಕ ನ್ಯಾಯ-ಡಿ. ದೇವರಾಜ ಅರಸು ಅವರ ಕೊಡುಗೆ' ವಿಚಾರಗೋಷ್ಠಿ:


ದೇವರಾಜ ಅರಸು

ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಅತಿಥಿಗಳು: ರವಿ ಡಿ. ಚನ್ನಣ್ಣನವರ್, ಕಾಂತರಾಜು ಕೆ.ಜಿ. ಎಸ್., ಬಂಜಗೆರೆ ಜಯಪ್ರಕಾಶ್, ಟಿ.ಜವರೇಗೌಡ, ರಮೇಶ್.ಬಿ., ಎಂ.ವಿ. ವಿಜಯಲಕ್ಷ್ಮಿ, ನಿರ್ಮಲಾ ಎಂ., 'ಮಹಿಳಾ ಸಬಲೀಕರಣ ಮತ್ತು ದೇವರಾಜ ಅರಸು ಕೊಡುಗೆ' ಉಪನ್ಯಾಸ: ವಿ. ಅನುರಾಧ, ಅಧ್ಯಕ್ಷತೆ: ಡಿ.ಕೆ. ಚಿತ್ತಯ್ಯ, 'ಡಿ. ದೇವರಾಜ ಅರಸು ಮತ್ತು ಸಾಮಾಜಿಕ ನ್ಯಾಯ' ಉಪನ್ಯಾಸ: ಎಂ. ಗುರುಲಿಂಗಯ್ಯ, ಅಧ್ಯಕ್ಷತೆ: ಹೊನ್ನು ಸಿದ್ದಾರ್ಥ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯದ ಇತರೆ ಹಿಂದುಳಿದ ವರ್ಗಗಳ ಕೋಶ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30ರಿಂದ

ಗೆಜ್ಜಗಾರಗುಪ್ಪೆ ಕೆ. ಉಮೇಶ್ ಅವರ 'ಬೆರಗು' ಕವನ ಸಂಕಲನ ಬಿಡುಗಡೆ: ಕರಿಗೌಡ ಬೀಚನಹಳ್ಳಿ, ಉದ್ಘಾಟನೆ: ಎಚ್‌.ಸಿ. ಬಾಲಕೃಷ್ಣ, ಅಧ್ಯಕ್ಷತೆ: ಅಪ್ಪಗೆರೆ ತಿಮ್ಮರಾಜು, ಕೃತಿ ಬಗ್ಗೆ ಮಾತು: ಕಾ.ವೆಂ. ಶ್ರೀನಿವಾಸಮೂರ್ತಿ, ಮುಖ್ಯ ಅತಿಥಿ: ಡಿ. ಶಿವಶಂಕರ್, ಅಭಿನಂದಿತರು: ಶ್ರೀನಿವಾಸ ಪ್ರಭು ಎಂ., ಆಯೋಜನೆ: ಪ್ರೀತಮ್ ಪಟೇಲ್ ಪ್ರಕಾಶನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5

'ಲೀಗಲ್ ಲೈಮ್ ಲೈಟ್' ಸುದ್ದಿ ಪತ್ರ ಬಿಡುಗಡೆ: ರಾಮಚಂದ್ರ ಡಿ. ಹುದ್ದಾರ್, ಅಧ್ಯಕ್ಷತೆ: ಶಿವರಾಜ್ ವಿ. ಪಾಟೀಲ, ಮುಖ್ಯ ಅತಿಥಿಗಳು: ಎ.ವಿ. ಚಂದ್ರಶೇಖರ್, ಅಶೋಕ್ ಹಾರನಹಳ್ಳಿ, ವಿವೇಕ್ ಸುಬ್ಬಾರೆಡ್ಡಿ, ಎಂ.ಬಿ. ಜಯರಾಮ್. ಆಯೋಜನೆ: ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾ, ಸ್ಥಳ: ಹೋಟೆಲ್ ಮಯೂರ, ಆನಂದರಾವ್ ವೃತ್ತ, ಸಂಜೆ 5.30

ಪು.ತಿ. ನರಸಿಂಹಾಚಾರ್ ವಿರಚಿತ 'ಶ್ರೀಹರಿ ಚರಿತೆ' ವಾಚನ: ಎಂ.ಆರ್. ಸತ್ಯನಾರಾಯಣ, ವ್ಯಾಖ್ಯಾನ: ಬಿ.ಎ. ಅನ್ನದಾನೇಶ್, ಮುಖ್ಯ ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ್ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಎಚ್. ಸಿದ್ದಯ್ಯ ರಸ್ತೆ, ಹೊಂಬೇಗೌಡನಗರ, ಸಂಜೆ 6.30

ಎರಡನೇ ಮಹಾಯುದ್ಧದ ನಂತರದ ಬೆಳವಣಿಗೆಗಳ ಕುರಿತು ಉಪನ್ಯಾಸ: ದೀಪಕ್ ನಯ್ಯರ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30



ಹರಿನಾಮ ಸಂಕೀರ್ತನೆ: ಗಾಯನ: ಚಾಂದಿನಿ ಗರ್ತಿಕೆರೆ, ಪಿಟೀಲು: ಮೈಸೂರು ಸಂಜೀವ್ ಕುಮಾರ್, ಮೃದಂಗ: ಮುರಳಿ ನಾರಾಯಣರಾವ್, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ ಐದನೇ ಬಡಾವಣೆ, ಸಂಜೆ 5.30

ಹರಿದಾಸ ಮಂಜರಿ: ಸುಷ್ಮಾ ಶ್ರೇಯಸ್, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ: ಗುರು ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಪ್ರಕಾಶನಗರ, ಸಂಜೆ 6.45

ದಾಸರ ಪದಗಳ ಗಾಯನ: ರಶ್ಮಿ ಮಧುಸೂದನ್ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ ಬನಶಂಕರಿ ಆರನೇ ಹಂತ, ಸಂಜೆ 7

'ಶ್ರೀಕೃಷ್ಣ ಸಂಧಾನ' ನಾಟಕ ಪ್ರದರ್ಶನ: ತಂಡ: ಯುವರಾಜ್ ತಂಡ, ಆಯೋಜನೆ: ಮೀನಾಕ್ಷಿ ಕಲಾವೃಂದ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

'ಅಂಗವಿಲ್ಲದ ದೇಹದಲ್ಲಿ ಭಂಗಿ ಹುಳ' ನಾಟಕ ಪ್ರದರ್ಶನ: ತಂಡ: ಅನೇಕ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಒತ್ತುವರಿ ಆರೋಪ: ವರದಿ ಸಲ್ಲಿಕೆ

ಅರಣ್ಯ ಪ್ರದೇಶ ಒತ್ತುವರಿ: ಮಾಜಿ ಸ್ಪೀಕರ್ ರಮೇಶ್‌ಕುಮಾರ್ ವಿರುದ್ಧ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನ ಜಿನಗಲಕುಂಟೆ ಹೊಸ ಹುಡ್ಯ ವ್ಯಾಪ್ತಿಯಲ್ಲಿನ ಅರಣ್ಯ ಪ್ರದೇಶದ ಸರ್ವೆ ನಂಬರ್ 1 ಮತ್ತು 2ರಲ್ಲಿ 61.39 ಎಕರೆ ಒತ್ತುವರಿ ಆಗಿದೆ' ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ನಡೆಸಲಾಗಿರುವ ಜಂಟಿ ಸರ್ವೆ ಕಾರ್ಯದ ವರದಿಯನ್ನು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸಲ್ಲಿಸಿದೆ.

ಈ ಸಂಬಂಧ ಶ್ರೀನಿವಾಸಪುರ ತಾಲ್ಲೂಕಿನ ಕುಂದಿಟಿವಾರಪಲ್ಲಿ ನಿವಾಸಿಯೂ ಆದ ಹೈಕೋರ್ಟ್ ವಕೀಲ ಕೆ.ವಿ.ಶಿವಾರೆಡ್ಡಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಹೈಕೋರ್ಟ್ ಆದೇಶದ ಅನುಸಾರ ನಡೆಸಲಾದ ಜಂಟಿ ಸರ್ವೆ ಕಾರ್ಯದ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿ ಆದೇಶಿಸಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಹಾಜರಿದ್ದರು.

ಹೈಕೋರ್ಟ್ ಆದೇಶ: 'ಒತ್ತುವರಿ ಕುರಿತಂತೆ 14 ವರ್ಷದ ಹಿಂದೆಯೇ ಸರ್ವೆ ಕಾರ್ಯ ಕೈಗೊಳ್ಳಲು ಆದೇಶಿಸಲಾಗಿದ್ದರೂ ಅದನ್ನು ಇನ್ನೂ ಕಾರ್ಯಗತಗೊಳಿಸದೇ ಇರುವುದು ಆಘಾತಕಾರಿ ವಿಚಾರ' ಎಂದು ಈ ಹಿಂದಿನ ವಿಚಾರಣೆ ವೇಳೆ ಹೈಕೋರ್ಟ್ ಕಳವಳ ವ್ಯಕ್ತಪಡಿಸಿತ್ತು.

'ಅರ್ಜಿಯಲ್ಲಿ ಪ್ರತಿವಾದಿಯಾಗಿರುವ ಮತ್ತು ಅರಣ್ಯ ಒತ್ತುವರಿ ಆರೋಪ ಎದುರಿಸುತ್ತಿರುವ ಮಾಜಿ ವಿಧಾನಸಭಾಧ್ಯಕ್ಷ ಕೆ.ಆರ್.ರಮೇಶ್ ಆಗಲೀ ಅಥವಾ ಅವರ ಅಧಿಕೃತ ಪ್ರತಿನಿಧಿಯಾಗಲೀ ಜಂಟಿ ಸರ್ವೆ ಕಾರ್ಯದಲ್ಲಿ ಭಾಗವಹಿಸಬೇಕು. ಈ ಸಂಬಂಧ ರಮೇಶ್ ಕುಮಾರ್ ಅವರಿಗೆ ಜಿಲ್ಲಾಧಿಕಾರಿ ನೋಟಿಸ್ ಕೊಡಬೇಕು' ಎಂದು ನ್ಯಾಯಪೀಠ ಗಡುವು ವಿಧಿಸಿತ್ತು.

'ಒಂದು ವೇಳೆ ರಮೇಶ್ ಕುಮಾರ್ ಆಗಲಿ ಅಥವಾ ಅವರ ಪ್ರತಿನಿಧಿಯಾಗಲೀ ಸರ್ವೆ ಕಾರ್ಯದಲ್ಲಿ ಭಾಗವಹಿಸದೇ ಹೋದಲ್ಲಿ ಸರ್ವೆ ಕಾರ್ಯವನ್ನು ಮುಂದುವರಿಸಬೇಕು. ಅಂತೆಯೇ, ಸರ್ವೆ ನಡೆಸಿದ ನಂತರ ನೀಡಲಾಗುವ ವರದಿಯನ್ನು ಆಕ್ಷೇಪಿಸಲಾಗಲೀ ಅಥವಾ ಸ್ಥಿರಾಸ್ತಿ ಬಾಧ್ಯತೆಯ ಕ್ಲೇಮು ಮಾಡಲು ರಮೇಶ್ ಕುಮಾರ್ ಅವರಿಗೆ ಯಾವುದೇ ಅಧಿಕಾರ ಇರುವುದಿಲ್ಲ' ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ಸ್ಪಷ್ಟಪಡಿಸಿತ್ತು.

'ಸತ್ಯಕ್ಕೆ ಜಯ ಸಿಕ್ಕಿದೆ; ಇನ್ನು ನನಗೆ ನೆಮ್ಮದಿ'

ಕೋಲಾರ: 'ನನ್ನ ವಿರುದ್ಧದ ಅರ್ಜಿ ಇತ್ಯರ್ಥವಾಗಿದ್ದು, ಸತ್ಯಕ್ಕೆ ಜಯ ಸಿಕ್ಕಿದೆ. ಕೋರ್ಟ್ ರೂಪದಲ್ಲಿ ಸಂಬಂಧಪಟ್ಟವರಿಗೆ ದೇವರೇ ಉತ್ತರ ಕೊಟ್ಟಿದ್ದಾನೆ. ನಾನು ಇನ್ನು ಗೌರವದಿಂದ ತಲೆ ಎತ್ತಿ ತಿರುಗಬಹುದು' ಎಂದು ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ತಿಳಿಸಿದರು.

ಹೈಕೋರ್ಟ್‌ನಲ್ಲಿ ಅರ್ಜಿ ವಿಲೇವಾರಿ ಆಗಿರುವ ಸಂಬಂಧ ಬುಧವಾರ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ನಾನು ಎಂದಿಗೂ ಸರ್ವೆಗೆ ವಿರೋಧಿಸಿಲ್ಲ. ಇದು, ನಾನು ಖರೀದಿಸಿದ ಜಮೀನು. ಸರ್ಕಾರಕ್ಕೆ ಸೇರಿದ್ದರೆ ಧಾರಾಳವಾಗಿ ತೆಗೆದುಕೊಳ್ಳಲು ಕೋರಿದ್ದೆ' ಎಂದರು.



ಕೆ.ಆರ್.ರಮೇಶ್ ಕುಮಾರ್

'ಇಷ್ಟಾಗಿದ್ದರೂ ಕೆಲವರು ನನ್ನ ಚಾರಿತ್ರ್ಯವಧೆ, ತೇಜೋವಧೆ ಮುಂದುವರಿಸಿದ್ದರು. ನಾನು ಯಾವುದಕ್ಕೂ ಪ್ರತಿಕ್ರಿಯಿಸದೆ ಸುಮ್ಮನಿದ್ದೆ, ತಾಳ್ಮೆಯಿಂದ ಪರೀಕ್ಷೆ ಎದುರಿಸಿದೆ. ಈಗ ಅರ್ಜಿ ವಿಲೇವಾರಿ ಆಗುವುದರೊಂದಿಗೆ ಮಾನಸಿಕವಾಗಿ ನೆಮ್ಮದಿ ಸಿಕ್ಕಿದೆ' ಎಂದು ಹೇಳಿದರು.

ಚಿಕ್ಕಮಗಳೂರು: ತಹಶೀಲ್ದಾರ್ ಕಚೇರಿ ಬಳಿಯ ಸ್ಥಳದಲ್ಲಿನ ಕಟ್ಟಡ ತೆರವು

14 ಜನರ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ನಗರದ ತಾಲ್ಲೂಕು ಕಚೇರಿ ಎದುರಿನ ವಿವಾದಿತ ಸ್ಥಳದಲ್ಲಿದ್ದ ಕಟ್ಟಡಗಳನ್ನು ಏಕಾಏಕಿ ಮಂಗಳವಾರ ಬೆಳಗಿನ ಜಾವ ತೆರವುಗೊಳಿಸಿದ್ದ ಪ್ರಕರಣದ ಸಂಬಂಧ 14 ಜನರ ವಿರುದ್ಧ ಪೊಲೀಸರು ಎರಡು ಎಫ್‌ಐಆರ್ ದಾಖಲಿಸಿದ್ದಾರೆ.

ನಲ್ಲೂರು ಮಠದಮನೆಯ ಹರೀಶ್ ಮತ್ತು ಉಷಾ ಫಿಷ್ ಕಾರ್ನರ್ ಹೋಟೆಲ್ ಮಾಲೀಕರಾದ ನಿರ್ಮಲಾ ಪಿ.ಶೆಟ್ಟಿ ಈ ಬಗ್ಗೆ ದೂರು ನೀಡಿದ್ದರು.

ಮುದಾಸಿರ್ ಪಾಷಾ, ಮೊಹಮದ್ ಇಮ್ತಿಯಾಸ್, ಅಲ್ತಾಫ್, ನೂರಿ, ಅಫ್ಜಲ್ ಖಾನ್, ಸತ್ತಾರ್, ಆಸಿಫ್ ಖಾನ್, ಇರ್ಫಾನ್, ಶಾದಬ್ ಖಾನ್, ತಬ್ರೆಜ್, ಅಕ್ಬರ್, ಅಬ್ರರ್, ರಾಹಿಲ್ ಶರೀಫ್, ಅಫ್ಸರ್ ಬಿಲ್ಲಿ ಹೆಸರುಗಳು ಆರೋಪಿಗಳ ಪಟ್ಟಿಯಲ್ಲಿವೆ.

ಮಸೀದಿಗೆ ಹೊಂದಿಕೊಂಡಂತೆ ಇರುವ ನಲ್ಲೂರು ಮಠದಮನೆಗೆ ಸೇರಿದ ಕಟ್ಟಡವನ್ನು ಜೆಸಿಬಿ ಮೂಲಕ ನೆಲಸಮ ಮಾಡಲಾಗಿದೆ. ಈ ಕುರಿತು ಪ್ರಶ್ನಿಸಿಲು ಹೋದಾಗ ಮಾರಕಾಸ್ತ್ರಗಳಿಂದ ಹಲ್ಲೆಗೆ ಮುಂದಾದರು ಎಂದು ಹರೀಶ್ ದೂರಿನಲ್ಲಿ ಆರೋಪಿಸಿದ್ದಾರೆ.

ಕಟ್ಟಡ ಧ್ವಂಸದಿಂದ ಹೋಟೆಲ್ ನಲ್ಲಿದ್ದ ಸಾಮಗ್ರಿಗಳು ಹಾಳಾಗಿವೆ. ₹2 ಲಕ್ಷ ಮೌಲ್ಯದ ಬೆಳ್ಳಿ ಆಭರಣ, ದಿನಸಿ ಕಳುವಾಗಿವೆ ಎಂದು ನಿರ್ಮಲಾ ಪಿ.ಶೆಟ್ಟಿ ದೂರಿನಲ್ಲಿ ತಿಳಿಸಿದ್ದಾರೆ.

ಆಕ್ಷೇಪ: 'ಬಡಮಕಾನ್ ಜಾಗದಲ್ಲಿ ಅನಧಿಕೃತ ಅಂಗಡಿಗಳ ತೆರವು ವಿಚಾರವಾಗಿ ಊರಿನಲ್ಲಿ ಇಲ್ಲದ ಜಾಮಿಯ ಮಸೀದಿ ಆಡಳಿತ ಸಂಸ್ಥೆಯ ಸದಸ್ಯರ ವಿರುದ್ಧವೂ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಜಾಮಿಯ ಮಸೀದಿ ಆಡಳಿತ ಸಂಸ್ಥೆಯ ಅಧ್ಯಕ್ಷ ಮುದಾಸಿರ್ ಪಾಷಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹೈಕೋರ್ಟ್ ಆದೇಶದಂತೆ ನಿರ್ಮಲಾ ಪಿ.ಶೆಟ್ಟಿ ಅವರ ಬಳಿ ತೆರಳಿ ಮಳಿಗೆ ಖಾಲಿ ಮಾಡಿಸಲು ಹೋಗಿದ್ದೆವು. ಆಗ ಹೋಟೆಲ್ ಬಂದ್ ಆಗಿತ್ತು. ಆದ್ದರಿಂದ ದೂರವಾಣಿ ಮೂಲಕ ತಿಳಿಸಿದ್ದು, ಮಾರ್ಚ್ 1 ರಂದು ಮಳಿಗೆ ಖಾಲಿ ಮಾಡಿಕೊಡಲು ಒಪ್ಪಿದ್ದರು. ನಂತರ ಕಮಿಟಿ ಸದಸ್ಯರ ಸಮ್ಮುಖದಲ್ಲಿ ತೆರವು ಮಾಡಲಾಗಿದೆ' ಎಂದು ಹೇಳಿದರು.

'ಇದಕ್ಕೆ ಸಂಬಂಧ ಇಲ್ಲದ ವ್ಯಕ್ತಿಗಳ ದೂರಿನ ಮೇರೆಗೆ ಜಾಮಿಯ ಮಸೀದಿ ಆಡಳಿತ ಸಂಸ್ಥೆಯ ಸದಸ್ಯರ ಮೇಲೆ ಎಫ್‌ಐಆರ್ ದಾಖಲಿಸಿರುವುದು ಸರಿಯಲ್ಲ' ಎಂದು ಹೇಳಿದರು.

ವಿವಾದ ಏನು?

ಮಸೀದಿಗೆ ಹೊಂದಿಕೊಂಡಿರುವ ನಲ್ಲೂರು ಮಠದಮನೆ ಜಾಗದ ವಿಷಯ ನ್ಯಾಯಾಲಯದ ಮೆಟ್ಟಿಲೇರಿತ್ತು. ಮಠದಮನೆ ಬಾಡಿಗೆಗೆ ನೀಡಿದ್ದ ಕಟ್ಟಡಗಳಲ್ಲಿ ಕೆಲವನ್ನು ಮಂಗಳವಾರ ಬೆಳಿಗ್ಗೆ ಏಕಾಏಕಿ ಜೆಸಿಬಿ ಬಳಸಿ ತೆರವು ಮಾಡುವ ಕೆಲಸ ಆರಂಭಿಸಲಾಗಿತ್ತು.

ನೋಟಿಸ್ ನೀಡದೆ ತೆರವುಗೊಳಿಸಲಾಗುತ್ತಿದೆ ಎಂದು ಆರೋಪಿಸಿ ತಡೆಯಲು ಮಠದಮನೆಗೆ ಸಂಬಂಧಿಸಿದವರು ಮುಂದಾಗಿದ್ದರು. ಪೊಲೀಸರು ಕಾರ್ಯಾಚರಣೆ ಸ್ಥಗಿತಗೊಳಿಸಿದ್ದರು. 'ನಲ್ಲೂರು ಮಠದಮನೆಗೆ ಸೇರಿದ ಜಾಗದಲ್ಲಿದ್ದ ಹಿಂದೂಗಳ ಅಂಗಡಿ, ಹೋಟೆಲ್‌ಗಳನ್ನು ವಕ್ಫ್ ಮಂಡಳಿ ಅಧಿಕಾರಿಗಳು, ಮುಸ್ಲಿಂ ಮುಖಂಡರು ಏಕಾಏಕಿ ತೆರವು ಗೊಳಿಸಿದ್ದಾರೆ' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ದೇವರಾಜ ಶೆಟ್ಟಿ ದೂರಿದ್ದರು.

'ಕೋರ್ಟ್ ಆದೇಶದಂತೆ ತೆರವು ಮಾಡಲಾಗಿದೆ. ಏಕಾಏಕಿ ತೆರವು ಮಾಡಿಲ್ಲ. ಸಂಬಂಧಿಸಿವರಿಗೆ ಮಾಹಿತಿ ನೀಡಿದ್ದೇವೆ. ಕಾನೂನು ಉಲ್ಲಂಘಿಸಿಲ್ಲ' ಎಂದು ಜಾಮಿಯಾ ಮಸೀದಿ ಆಡಳಿತ ಸಂಸ್ಥೆ ಅಧ್ಯಕ್ಷ ಮುದಾಸೀರ್ ಪಾಷಾ ಸಮರ್ಥಿಸಿಕೊಂಡಿದ್ದರು.

ಆಸಕ್ತಿ ಕ್ಷೇತ್ರ ನಿರ್ಧರಿಸಿ: ಕಂಪನಿ ಸೆಕ್ರೆಟರಿಯಾಗಿ ವೃತ್ತಿಜೀವನ ಆರಂಭಿಸಿ



ಶೈಕ್ಷಣಿಕ ಮಾರ್ಗ ಆಯ್ದುಕೊಳ್ಳುವ ಮುನ್ನ ಅಥವಾ ಯಾವುದೇ ವೃತ್ತಿಜೀವನದ ಪರೀಕ್ಷೆಯನ್ನು ತೆಗೆದುಕೊಳ್ಳುವ ಮುನ್ನ ಯೋಚಿಸಿ, ಪರಿಶೀಲಿಸಿ ನಿರ್ಧರಿಸಬೇಕು. ಅದರಲ್ಲೂ ನಿಮ್ಮ ಆಸಕ್ತಿಯ ಕ್ಷೇತ್ರವನ್ನು ಆಯ್ದುಕೊಂಡು ಅದಕ್ಕೆ ಸೂಕ್ತ ತಯಾರಿ ನಡೆಸಬೇಕು. ಬಹುಮುಖ್ಯವಾಗಿ ವೃತ್ತಿಜೀವನವನ್ನು ಅಭಿವೃದ್ಧಿಪಡಿಸುವ ಮತ್ತು ಅತ್ಯಂತ ಅಪೇಕ್ಷಿತ ಮಾರ್ಗವನ್ನು ಅನುಸರಿಸುವುದು ಒಳಿತು.

ಭವಿಷ್ಯದಲ್ಲಿ ವೃತ್ತಿಜೀವನ ಸುಖಮಯ ಹಾಗೂ ಶ್ರೀಮಂತಮಯವಾಗಿರುವ ಮತ್ತು ಬೇಡಿಕೆಯುಳ್ಳ 'ಕಂಪನಿ ಸೆಕ್ರೆಟರಿ ಕೋರ್ಸ್' ಅನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ. ಏಕೆಂದರೆ ಈ ಕೋರ್ಸ್ ಹೆಚ್ಚಿನ ಗೌರವ ಮತ್ತು ಉದ್ಯೋಗ ತೃಪ್ತಿಯನ್ನು ತರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

ಕಂಪನಿ ಕಾರ್ಯದರ್ಶಿಯಾಗಿ ಪದವಿ ಪಡೆದ ನಂತರ ಕಂಪನಿ ಸೆಕ್ರೆಟರಿಗಳು ಉದ್ಯೋಗದ ಆಯ್ಕೆ ಮಾಡಿಕೊಳ್ಳಬಹುದು ಅಥವಾ ಪ್ರಾಕ್ಟಿಸ್ ಸರ್ಟಿಫಿಕೇಟ್ ಪಡೆದುಕೊಂಡು ಸ್ವತಃ ಪ್ರಾಕ್ಟಿಸಿಂಗ್ ಕಂಪನಿ ಕಾರ್ಯದರ್ಶಿಯಾಗಿ ಭವಿಷ್ಯ ರೂಪಿಸಿಕೊಳ್ಳಬಹುದು.

ಕಂಪನಿಗಳ ಕಾಯಿದೆ–2013ರ ಅಡಿ ಕಂಪನಿಯ ಕಾರ್ಯದರ್ಶಿಗಳಿಗೆ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯ (KMP) ವಿಶೇಷ ಸ್ಥಾನಮಾನವನ್ನು ನೀಡಿದೆ. MD, CEO, ಮ್ಯಾನೇಜರ್, ಪೂರ್ಣ ಪ್ರಮಾಣದ ನಿರ್ದೇಶಕ(ರು) ಮತ್ತು CFO ಆಗಲು ಅನುವು ಮಾಡಿಕೊಟ್ಟಿದೆ. ಈ ಕಾಯಿದೆ ಅನುಸಾರ ಕಂಪನಿ ಆಡಿಟ್ ಪ್ರಾಕ್ಟಿಸಿಂಗ್ ಕಾರ್ಯದರ್ಶಿಯಿಂದ ಹಿಡಿದು ಸೆಕ್ರೆಟೇರಿಯಲ್ ಆಡಿಟ್ ಸಹ ಮಾಡುವ ಅಧಿಕಾರವಿರುತ್ತದೆ. ಇದು ವೃತ್ತಿಜೀವನದ ಪಾತ್ರವನ್ನು ಹೆಚ್ಚು ವಿಸ್ತಾರವಾಗಿಯೂ ಹಾಗೂ ಎಲ್ಲದರಲ್ಲೂ ಒಳಗೊಳ್ಳುವಂತೆ ಮಾಡುತ್ತದೆ.

ಮೇಲಿನ ಎಲ್ಲ ಪ್ರಮುಖ ಕ್ಷೇತ್ರಗಳಲ್ಲದೆ, ಕಂಪನಿ ಕಾರ್ಯದರ್ಶಿಗಳು ಅಪಾಯ ನಿರ್ವಹಣೆ (ರಿಸ್ಕ್ ಮ್ಯಾನೇಜ್ಮೆಂಟ್) ಮತ್ತು ತಗ್ಗಿಸುವಿಕೆ, ESG, ಮೌಲ್ಯಮಾಪನ, ದಿವಾಳಿತನ, ಸಾಮಾಜಿಕ ಲೆಕ್ಕಪರಿಶೋಧನೆ, ವಿಲೀನಗಳು ಮತ್ತು ಸ್ವಾಧೀನಗಳು, ಪರ್ಯಾಯ ವಿವಾದ ಪರಿಹಾರ, ಪ್ರಾತಿನಿಧ್ಯ ಸೇವೆಗಳು ಸೇರಿದಂತೆ ಇತರ ವ್ಯಾಪಕ ಅವಕಾಶಗಳನ್ನು ಹೊಂದಿದ್ದಾರೆ. ಆದ್ದರಿಂದ ಕಂಪನಿ ಕಾರ್ಯದರ್ಶಿ ಕೋರ್ಸ್ ಇಂದಿನ ಮಹತ್ವಾಕಾಂಕ್ಷಿ ಯುವಪೀಳಿಗೆಯ ಆಕರ್ಷಕ ಕೋರ್ಸ್ ಆಯ್ಕೆ ಎನಿಸಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾ

ಭಾರತದಲ್ಲಿ ಕಂಪನಿ ಕಾರ್ಯದರ್ಶಿ ಸದಸ್ಯತ್ವವನ್ನು ನೀಡುವ ಏಕೈಕ ಪ್ರಧಾನ ರಾಷ್ಟ್ರೀಯ ವೃತ್ತಿಪರ ಸಂಸ್ಥೆ 'ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾ' (ICSI). ಕಂಪನಿ ಕಾರ್ಯದರ್ಶಿಗಳ ಕಾಯಿದೆ 1980ರ ಅಡಿಯಲ್ಲಿ ಸ್ಥಾಪಿತವಾದ ಸಂಸ್ಥೆ ಇದು. ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಐಸಿಎಸ್‌ಐ ದೇಶದ ಕಂಪನಿ ಕಾರ್ಯದರ್ಶಿಗಳ ವೃತ್ತಿಯನ್ನು ನಿಯಂತ್ರಿಸುವ ಮತ್ತು ಅಭಿವೃದ್ಧಿಪಡಿಸುವ ಕಾರ್ಯವನ್ನು ಮಾಡುತ್ತದೆ.

ಐಸಿಎಸ್‌ಐ ಪ್ರಧಾನ ಕಚೇರಿಯು ನವದೆಹಲಿ ಮತ್ತು ನೋಯ್ಡಾದಲ್ಲಿದ್ದು, ಇದರ ನಾಲ್ಕು ಪ್ರಾದೇಶಿಕ ಕಚೇರಿಗಳು ನವದೆಹಲಿ, ಕೋಲ್ಕತ, ಚೆನ್ನೈ ಮತ್ತು ಮುಂಬೈನಲ್ಲಿವೆ. ಭಾರತದಾದ್ಯಂತ 73 ಅಧ್ಯಾಯ ಕಚೇರಿಗಳನ್ನು ಹೊಂದಿದೆ. ನವಿ ಮುಂಬೈ, ಹೈದರಾಬಾದ್ ಮತ್ತು ಕೋಲ್ಕತದಲ್ಲಿ ಸಂಶೋಧನೆ ಮತ್ತು ತರಬೇತಿ ಕೇಂದ್ರಗಳಿದ್ದು, ICSI ಆರು ಸಾಗರೋತ್ತರ ಕೇಂದ್ರಗಳು ಆಸ್ಟ್ರೇಲಿಯಾ, ಕೆನಡಾ, ಸಿಂಗಾಪುರ್, ಯುಎಇ, ಯುಕೆ ಮತ್ತು ಯುಎಸ್‌ಎನಲ್ಲಿವೆ.

ಅರ್ಹತೆ ಮತ್ತು ನೋಂದಣಿ

ಲಲಿತ ಕಲೆಗಳ ಪದವಿ ಹೊರತುಪಡಿಸಿ ಇತರ ಯಾವುದೇ ವಿಭಾಗದಲ್ಲಿ 12ನೇ ತರಗತಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿ ಕಂಪನಿ ಸೆಕ್ರೆಟರಿ ಕೋರ್ಸ್‌ಗೆ ಅರ್ಹರಾಗಿರುತ್ತಾರೆ. ಆದರೆ, ಕಂಪನಿ ಸೆಕ್ರೆಟರಿ ಎಕ್ಸಿಕ್ಯೂಟಿವ್ ಎಂಟ್ರೆನ್ಸ್ ಟೆಸ್ಟ್ (CSEET)ಗೆ ಒಳಗಾಗಬೇಕಾಗುತ್ತದೆ. ICSI ವರ್ಷಕ್ಕೆ 4 ಬಾರಿ ರಿಮೋಟ್ ಪ್ರೊಕ್ಟರ್ಡ್ ಮೋಡ್ (RPM) ಮೂಲಕ CSEET ಅನ್ನು ನಡೆಸುತ್ತದೆ. ಟೆಸ್ಟ್ ಅನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಕಂಪನಿ ಕಾರ್ಯದರ್ಶಿ ಕಾರ್ಯನಿರ್ವಾಹಕ ಪ್ರೋಗ್ರಾಂ (CSEP)ಗೆ ನೇರವಾಗಿ ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳಬಹುದು.

ಪದವೀಧರರು, ಸ್ನಾತಕೋತ್ತರ ಪದವೀಧರರು ಮತ್ತು ICAI, ICMAI ಅಂತಿಮ ಉತ್ತೀರ್ಣ ವಿದ್ಯಾರ್ಥಿಗಳು CSEET ನಿಂದ ವಿನಾಯಿತಿ ಪಡೆದಿರುತ್ತಾರೆ. CS ಎಕ್ಸಿಕ್ಯುಟಿವ್ ಪ್ರೋಗ್ರಾಂ ಅನ್ನು ಕ್ಲಿಯರ್ ಮಾಡಿದ ವಿದ್ಯಾರ್ಥಿಗಳು ನಂತರ CS ವೃತ್ತಿಪರ ಕಾರ್ಯಕ್ರಮಕ್ಕೆ ದಾಖಲಾಗಬಹುದು.

ತರಬೇತಿ ಮತ್ತು ಆರ್ಥಿಕ ನೆರವು

ನೋಂದಣಿ ನಂತರ ಐಸಿಎಸ್‌ಐ ವಿದ್ಯಾರ್ಥಿಗಳಿಗೆ ಕಂಪನಿ ಸೆಕ್ರೆಟರಿ ಕೋರ್ಸ್‌ನ ಆಯಾ ಕಾರ್ಯಕ್ರಮದ ಅಧ್ಯಯನ ಸಾಮಗ್ರಿ (ಕೋರ್ಸ್ ಮೆಟೀರಿಯಲ್) ಯನ್ನು ಒದಗಿಸುತ್ತದೆ. ಪ್ರಾದೇಶಿಕ ಮತ್ತು ಅಧ್ಯಾಯ ಕಚೇರಿಗಳಲ್ಲಿ ವಿಶೇಷ ತರಗತಿಗಳನ್ನು ಆಯೋಜಿಸುತ್ತದೆ. ಎಲ್ಲವೂ ಉಚಿತ ಆನ್‌ಲೈನ್ ತರಗತಿಗಳಾಗಿದ್ದು, ತಜ್ಞ ಅಧ್ಯಾಪಕರಿಂದ ಉಪನ್ಯಾಸಗಳು ಮತ್ತು ನೈಜ ಸಮಯದ ಅನುಮಾನ ನಿವಾರಣೆ (ರಿಯಲ್ ಟೈಮ್ ಡೌಟ್ ಕ್ಲಿಯರಿಂಗ್)ಯನ್ನು ಸಹ ಆಯೋಜಿಸುತ್ತದೆ. ಇದರ ಜತೆ ICSI ನಲ್ಲಿ ವಿದ್ಯಾರ್ಥಿಗಳು ವಿವಿಧ ತರಬೇತಿ ಕಾರ್ಯಕ್ರಮಗಳಿಗೆ ಒಳಗಾಗುತ್ತಾರೆ. ಪ್ರಮುಖ ಸಾಮರ್ಥ್ಯಗಳು, ಕೋರ್ ಕಾಂಪಿಟೆನ್ಸಿಗಳು, ಸಾಫ್ಟ್ ಸ್ಕಿಲ್ಸ್ ಮತ್ತು ನಾಯಕತ್ವದ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಕಾರ್ಪೊರೇಟ್ ಮತ್ತು ಪ್ರಾಕ್ಟಿಸಿಂಗ್ ಕಂಪನಿ ಸೆಕ್ರೆಟರಿಗಳೊಂದಿಗೆ ವಿದ್ಯಾರ್ಥಿಗಳು ಪ್ರಾಯೋಗಿಕ ತರಬೇತಿ ತೆಗೆದುಕೊಳ್ಳಬೇಕಾಗುತ್ತದೆ.

ವಿದ್ಯಾರ್ಥಿಗಳಿಗೆ ಹಲವು ರೀತಿಯ ಹಣಕಾಸು ನೆರವು ಯೋಜನೆಗಳ ಸೌಲಭ್ಯ ICSI ನಲ್ಲಿವೆ. ಸ್ಕಾಲರ್‌ಶಿಪ್‌ಗಳು, ಶುಲ್ಕ ಮನ್ನಾ, ರಿಯಾಯತಿ ರೂಪದಲ್ಲಿ ಲಭ್ಯ. ಮಾಹಿತಿಗೆ www.icsi.edu ಲಾಗ್ ಆನ್ ಮಾಡಿ.

'ಕನ್ನಡದಲ್ಲೇ ಕೆಪಿಎಸ್‌ಸಿ ಪರೀಕ್ಷೆ ನಡೆಸಿ'

ಸರ್ಕಾರಕ್ಕೆ ಕರವೇ ರಾಜ್ಯಾಧ್ಯಕ್ಷ ನಾರಾಯಣಗೌಡ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪರೀಕ್ಷೆ ಇಂಗ್ಲಿಷ್ ಮಾಧ್ಯಮದಲ್ಲಿ ಏಕೆ? ಕನ್ನಡದಲ್ಲೇ ಇನ್ನು ಮುಂದೆ ಈ ಪರೀಕ್ಷೆ ನಡೆಸಿ' ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

'ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿರುವ ಕೆಪಿಎಸ್‌ಸಿ ಸುಧಾರಣೆಗಾಗಿ ರಾಜ್ಯ ಸರ್ಕಾರ ಕೆಪಿಎಸ್‌ಸಿ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದೆ. ಇದು ಕೂಡಲೇ ಆಗಬೇಕಾಗಿರುವ ಕೆಲಸ. ಪ್ರತಿ ಬಾರಿ ಕೆಪಿಎಸ್‌ಸಿ ಪರೀಕ್ಷೆ ನಡೆದಾಗಲೂ ಒಂದಲ್ಲ ಒಂದು ಅವಾಂತರಗಳು ನಡೆಯುತ್ತಿದೆ. ಕೆಪಿಎಸ್‌ಸಿ ಅಧಿಕಾರಿಗಳ ಅಪ್ರಾಮಾಣಿಕತೆ, ಭ್ರಷ್ಟತೆ, ಅದಕ್ಷತೆ, ಹೊಣೆಗೇಡಿತನ, ಕನ್ನಡ ದ್ರೋಹ, ವೃತ್ತಿಪರವಲ್ಲದ ನಡವಳಿಕೆ, ಕ್ರಿಯೆಗಳಿಂದ ಕೆಪಿಎಸ್‌ಸಿ ಸರ್ವನಾಶ ಆಗುವ ಹಂತ ತಲುಪಿದೆ. ಇದನ್ನು ಈಗ ರಿಪೇರಿ ಮಾಡದೇ ಇದ್ದರೆ ಶಾಶ್ವತವಾಗಿ ಮುಚ್ಚವುದೇ ವಾಸಿ' ಎಂದು ಹೇಳಿದ್ದಾರೆ.

'ಸರ್ಕಾರ ಕಾಯ್ದೆಗೆ ತಿದ್ದುಪಡಿ ತಂದು, ಕೆಪಿಎಸ್‌ಸಿ ಪರೀಕ್ಷೆಗಳನ್ನು ಕನ್ನಡ ಮಾಧ್ಯಮದಲ್ಲಿಯೇ ನಡೆಸಬೇಕು. ಕೆಪಿಎಸ್‌ಸಿ ಪರೀಕ್ಷೆ ಬರೆದು ವಿವಿಧ ಹುದ್ದೆಗಳಿಗೆ ನೇಮಕ ಆಗುವವರು ಕನ್ನಡದಲ್ಲಿಯೇ ಆಡಳಿತ ನಡೆಸಬೇಕು. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆಯಾಗಿದೆ. ಕನ್ನಡ ಭಾಷೆಯಲ್ಲಿ ಹಿಡಿತವಿರುವ, ಕನ್ನಡ ಮಾಧ್ಯಮದ ವಿದ್ಯಾರ್ಥಿಗಳೇ ರಾಜ್ಯ ಸರ್ಕಾರದ ಉದ್ಯೋಗ ಮಾಡಲು ಹೆಚ್ಚು ಸಮರ್ಥರು. ಹೀಗಾಗಿ, ಎಲ್ಲ ಪರೀಕ್ಷೆಗಳೂ ಕನ್ನಡ ಮಾಧ್ಯಮದಲ್ಲೇ ನಡೆಯಲಿ' ಎಂದಿದ್ದಾರೆ.

'ಇಂಗ್ಲಿಷ್ ಮಾಧ್ಯಮ ವಿದ್ಯಾರ್ಥಿಗಳಿಗೆ ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಸೇರಿ ಇತರೆ ಪರೀಕ್ಷೆಗಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಬರೆಯಲು ವಿಪುಲ ಅವಕಾಶಗಳಿವೆ. ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ ಆಡಳಿತ ಸೇವೆ ಬಿಟ್ಟರೆ ಇತರೆ ಅವಕಾಶಗಳು ಕಡಿಮೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.


ವಿಚಾರಣೆಗೆ ಗೈರು: ರಾಹುಲ್‌ಗೆ ₹200 ದಂಡ ವಿಧಿಸಿದ ಕೋರ್ಟ್

ಪ್ರಜಾವಾಣಿ ವಾರ್ತೆ

ಲಖನೌ: ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಕುರಿತ ಹೇಳಿಕೆಗೆ ಸಂಬಂಧಿಸಿ ತಮ್ಮ ವಿರುದ್ಧದ ಪ್ರಕರಣದಲ್ಲಿ ವಿಚಾರಣೆಗೆ ಪದೇಪದೇ ಗೈರಾದ ಕಾರಣಕ್ಕೆ, ಲೋಕಸಭೆ ವಿರೋಧ ಪಕ್ಷದ ನಾಯಕ ಹಾಗೂ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರಿಗೆ ಇಲ್ಲಿನ ನ್ಯಾಯಾಲಯ ₹200 ದಂಡ ವಿಧಿಸಿದೆ.

ದಂಡದ ಹಣವನ್ನು ದೂರುದಾರರ ಪರ ವಕೀಲರಿಗೆ ನೀಡುವಂತೆ, ಇಲ್ಲಿನ ನ್ಯಾಯಾಲಯದ ಹೆಚ್ಚುವರಿ ಮುಖ್ಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನಿರ್ದೇಶನ ನೀಡಿದ್ದಾರೆ.

ವಿಚಾರಣೆ ವೇಳೆ, 'ಸಂಸತ್ ಅಧಿವೇಶನದಲ್ಲಿ ಪಾಲ್ಗೊಳ್ಳಬೇಕಿರುವ ಕಾರಣ ನನ್ನ ಕಕ್ಷಿದಾರರಿಗೆ ಖುದ್ದು ಹಾಜರಾತಿಯಿಂದ ವಿನಾಯಿತಿ ನೀಡಬೇಕು' ಎಂದು ರಾಹುಲ್ ಪರ ವಕೀಲರು ಕೋರಿದರು. ಆಗ, ವಿಚಾರಣೆಯನ್ನು ಏಪ್ರಿಲ್ 14ಕ್ಕೆ ಕೋರ್ಟ್ ಮುಂದೂಡಿತು.



'2022ರಲ್ಲಿ ಮಹಾರಾಷ್ಟ್ರದಲ್ಲಿ ಚುನಾವಣಾ ಪ್ರಚಾರಸಭೆಯಲ್ಲಿ ಮಾತನಾಡಿದ್ದ ರಾಹುಲ್ ಗಾಂಧಿ, ಸಾವರ್ಕರ್ ಅವರನ್ನು 'ಬ್ರಿಟಿಷರ ಸೇವಕ' ಎಂಬುದಾಗಿ ಕರೆದಿದ್ದರು' ಎಂದು ದೂರುದಾರರ ಪರ ವಕೀಲ ನೃಪೇಂದ್ರ ಪಾಂಡೆ ತಿಳಿಸಿದ್ದಾರೆ.

ಹಾಲಿನ ದರವೂ ಏರಿಕೆ?

ಒಂದನೇ ಪುಟದಿಂದ...

'ಉತ್ಪಾದನಾ ವೆಚ್ಚವನ್ನು ಪರಿಗಣಿಸಿಯೇ ದರ ಏರಿಕೆ ಮಾಡಬೇಕು ಎಂಬ ಒತ್ತಾಯವಿದೆ. ಉತ್ಪಾದಕರಿಗೂ ನಷ್ಟವಾಗಬಾರದು ಮತ್ತು ಗ್ರಾಹಕರಿಗೂ ವಿಪರೀತ ಹೊರೆಯಾಗದ ರೀತಿಯಲ್ಲಿ ದರ ಪರಿಷ್ಕರಣೆ ಮಾಡಬೇಕಿದೆ. ಅದರ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ' ಎಂದರು.

₹656.07ಕೋಟಿ ಪ್ರೋತ್ಸಾಹ ಧನ ಬಾಕಿ: ಪ್ರತಿ ಲೀಟರ್ ಹಾಲಿಗೆ ₹5ರಂತೆ ಹಾಲು ಉತ್ಪಾದಕರಿಗೆ ನೀಡಬೇಕಿರುವ ಪ್ರೋತ್ಸಾಹ ಧನದಲ್ಲಿ ಸರ್ಕಾರವು ₹656.07 ಕೋಟಿ ಬಾಕಿ ಉಳಿಸಿಕೊಂಡಿದೆ. ಒಟ್ಟು 9.04 ಲಕ್ಷ ಫಲಾನುಭವಿಗಳಿಗೆ ಕಳೆದ ಹಲವು ತಿಂಗಳಿಂದ ಈ ಹಣ ಪಾವತಿಯಾಗಿಲ್ಲ ಎಂದು ಸಚಿವ ವೆಂಕಟೇಶ್ ಹೇಳಿದರು.

'ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹಾಲಿನ ಉತ್ಪಾದನೆ ಮತ್ತು ಪ್ರೋತ್ಸಾಹ ಧನವನ್ನು ಗಮನದಲ್ಲಿ ಇರಿಸಿಕೊಳ್ಳದೆ ಬಜೆಟ್‌ನಲ್ಲಿ ಅನುದಾನ ನಿಗದಿ ಮಾಡಿದ್ದಾರೆ. ಹೀಗಾಗಿ ಪ್ರತಿ ಆರ್ಥಿಕ ವರ್ಷದಲ್ಲೂ ನೂರಾರು ಕೋಟಿ ಬಾಕಿ ಉಳಿದುಕೊಂಡಿದ್ದು, ಒಟ್ಟು ₹704 ಕೋಟಿಯಷ್ಟಿತ್ತು. ಅದನ್ನೆಲ್ಲ ಚುಕ್ತಾ ಮಾಡಿದ್ದೇವೆ. ಹೀಗಾಗಿಯೇ ನಮ್ಮ ಅವಧಿಯ ಪ್ರೋತ್ಸಾಹ ಧನ ಬಾಕಿಯಾಗಿದೆ' ಎಂದರು.

ಅಂಕಿ ಅಂಶಗಳು

₹613.58 ಕೋಟಿ — ಸಾಮಾನ್ಯ ವರ್ಗದ 8.17 ಲಕ್ಷ ಹಾಲು ಉತ್ಪಾದಕರಿಗೆ ನೀಡಬೇಕಿರುವ ಐದು ತಿಂಗಳ ಬಾಕಿ

₹18.29 ಕೋಟಿ — ಪರಿಶಿಷ್ಟ ಜಾತಿಗಳ 52,467 ಮಂದಿಗೆ ನೀಡಬೇಕಿರುವ ಎರಡು ತಿಂಗಳ ಬಾಕಿ

₹24.20 ಕೋಟಿ — ಪರಿಶಿಷ್ಟ ಪಂಗಡಗಳ 35,006 ಮಂದಿಗೆ ನೀಡಬೇಕಿರುವ ನಾಲ್ಕು ತಿಂಗಳ ಬಾಕಿ

₹2,661.70 ಕೋಟಿ — '2023ರಿಂದ 2025ರ ಫೆಬ್ರುವರಿವರೆಗೆ ರೈತರಿಗೆ ನೀಡಿದ ಪ್ರೋತ್ಸಾಹ ಧನ

21ರಿಂದ ಆರ್‌ಎಸ್‌ಎಸ್ ಪ್ರತಿನಿಧಿ ಸಭೆ

ಬೆಂಗಳೂರು: ಇದೇ 21ರಿಂದ ಮೂರು ದಿನ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಅಖಿಲ ಭಾರತ ಪ್ರತಿನಿಧಿ ಸಭೆಯು ನಗರದಲ್ಲಿ ನಡೆಯಲಿದೆ.

ನಗರದ ಮಾಗಡಿ ರಸ್ತೆಯ ಚನ್ನೇನಹಳ್ಳಿಯಲ್ಲಿರುವ ಜನಸೇವಾ ವಿದ್ಯಾಕೇಂದ್ರದಲ್ಲಿ 21, 22 ಮತ್ತು 23ರಂದು ಸಭೆ ನಡೆಯಲಿದೆ. ಆರ್‌ಎಸ್‌ಎಸ್‌ನ ಶತಮಾನೋತ್ಸವ ವರ್ಷಾಚರಣೆಯ ರೂಪುರೇಷೆಗಳ ಬಗ್ಗೆ ಸಭೆಯಲ್ಲಿ ಚರ್ಚೆಗಳು ನಡೆಯಲಿವೆ ಎಂದು ಸಂಘದ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ತಿಳಿಸಿದ್ದಾರೆ.

'2025ರ ವಿಜಯದಶಮಿಗೆ ಸಂಘಕ್ಕೆ ನೂರು ವರ್ಷ ತುಂಬಲಿದೆ. ಅಂದಿನಿಂದ 2026ರ ವಿಜಯದಶಮಿವರೆಗೆ ಆರ್‌ಎಸ್‌ಎಸ್ ಶತಾಬ್ದಿ ಆಚರಿಸಲು ನಿರ್ಧರಿಸಲಾಗಿದೆ. ಅದರ ರೂಪುರೇಷೆಗಳನ್ನು ಸಭೆಯಲ್ಲಿ ಚರ್ಚಿಸಲಾಗುತ್ತದೆ' ಎಂದಿದ್ದಾರೆ.

'ರಾಷ್ಟ್ರೀಯ ಹಿತಾಸಕ್ತಿಗೆ ಸಂಬಂಧಿಸಿದ ಎರಡು ಮುಖ್ಯ ವಿಷಯಗಳ ಮೇಲೂ ಚರ್ಚೆ ನಡೆಯಲಿದ್ದು, ನಿರ್ಣಯ ಕೈಗೊಳ್ಳಲಾಗುತ್ತದೆ. ಸಂಘದ ಸರಸಂಘಚಾಲಕ ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಸೇರಿದಂತೆ ಪ್ರಮುಖರು ಭಾಗಿಯಾಗಲಿದ್ದಾರೆ' ಎಂದಿದ್ದಾರೆ.

ಹಿನ್ನೆಲೆ ಗಾಯಕಿ ಕಲ್ಪನಾ ಸ್ಥಿತಿ ಗಂಭೀರ

ಹೈದರಾಬಾದ್: ತಮಿಳು, ತೆಲುಗು ಮತ್ತು ಬಹು ಭಾಷೆಗಳಲ್ಲಿ ಖ್ಯಾತಿ ಪಡೆದ ಹಿನ್ನೆಲೆ ಗಾಯಕಿ ಕಲ್ಪನಾ ಅವರು ಮಂಗಳವಾರ ಹೈದರಾಬಾದ್‌ನ ನಿಜಾಮ್‌ಪೇಟೆಯಲ್ಲಿರುವ ನಿವಾಸದಲ್ಲಿ ಗಂಭೀರ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ.

ಕಲ್ಪನಾ ತನಗೆ ಪ್ರಜ್ಞೆ ತಪ್ಪುತ್ತಿದೆ ಎಂದು ಪತಿಗೆ ತಿಳಿಸಿದ್ದಾರೆ, ಬಳಿಕ ಅವರನ್ನು ಸಂಪರ್ಕಿಸಲು ಯತ್ನಿಸಿದರು ಅದು ಸಾಧ್ಯವಾಗದಿದ್ದಾಗ ಕಲ್ಪನಾ ಪತಿ, ತಕ್ಷಣವೇ ನಿವಾಸಿ ಸಂಘದ ಪ್ರತಿನಿಧಿಯನ್ನು ಸಂಪರ್ಕಿಸಿದ್ದಾರೆ. ಅವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಬಳಿಕ ಪೊಲೀಸರು ಬಾಗಿಲು ಒಡೆದು ನೋಡಿದಾಗ, ಕಲ್ಪನಾ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು. ಗಂಭೀರ ಸ್ಥಿತಿಯಲ್ಲಿದ್ದ ಅವರನ್ನು ಖಾಸಗಿ ಆಸ್ಪತ್ರೆಯೊಂದರ ತೀವ್ರ ನಿಗಾ ಘಟಕಕ್ಕೆ ದಾಖಲಿಸಲಾಯಿತು. ಬುಧವಾರದ ಹೊತ್ತಿಗೆ ಅವರ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಕಲ್ಪನಾ ನಿದ್ರೆ ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಅರಮನೆ ಮೈದಾನ ಟಿಡಿಆರ್: ಪಂಚಾಯತ್ ರಾಜ್ ವಿ.ವಿಗೆ ಗಾಂಧೀಜಿ ಹೆಸರು

'ಸುಪ್ರೀಂ'ನಲ್ಲಿ ₹3,400 ಕೋಟಿ ಠೇವಣಿಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಬಳ್ಳಾರಿ ರಸ್ತೆ ಮತ್ತು ಜಯಮಹಲ್ ರಸ್ತೆಗಳ ವಿಸ್ತರಣೆಗಾಗಿ ಸ್ವಾಧೀನ ಪಡಿಸಿಕೊಂಡಿರುವ ಅರಮನೆ ಮೈದಾನದ 15 ಎಕರೆಗೂ ಹೆಚ್ಚು ಭೂಮಿಗೆ ಸಂಬಂಧಿಸಿದಂತೆ ₹3,400 ಕೋಟಿಗೂ ಹೆಚ್ಚಿನ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಪ್ರಮಾಣಪತ್ರಗಳನ್ನು ಷರತ್ತುಬದ್ಧವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಠೇವಣಿ ಇಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಬುಧವಾರ ರಾತ್ರಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಈಪ್ರಕರಣದಲ್ಲಿನ್ಯಾಯಾಲಯದ ಅಂತಿಮ ತೀರ್ಪು ನೀಡುವವರೆಗೂ ಠೇವಣಿ ಇಡುವ ಮೊತ್ತವನ್ನು ಭೂಮಿಯ ಮಾಲೀಕರು ಬಳಸಲು ಅವಕಾಶ ನೀಡಬಾರದು ಎಂಬ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಲೂ ಸರ್ಕಾರ ನಿರ್ಧರಿಸಿದೆ.

ವಾರದೊಳಗೆ ₹3,400 ಕೋಟಿಯನ್ನು ಠೇವಣಿ ಇಡುವಂತೆ ಸುಪ್ರೀಂ ಕೋರ್ಟ್ ಇದೇ ಫೆ. 27ರಂದು ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿತ್ತು.

ಸಚಿವ ಸಂಪುಟ ಸಭೆ

'ಬೆಂಗಳೂರು ಅರಮನೆ ಮೈದಾನಕ್ಕೆ ಟಿಡಿಆರ್ ನೀಡುವ ವಿಚಾರವಾಗಿ ಸಭೆಯಲ್ಲಿ ಗಂಭೀರ ಚರ್ಚೆ ನಡೆಯಿತು. ಟಿಡಿಆರ್ ಕುರಿತಂತೆ ಕಾನೂನಾತ್ಮಕವಾಗಿ ಹೋರಾಟ ನಡೆಸಲು ಒಲವು ವ್ಯಕ್ತವಾಯಿತು. ಟಿಡಿಆರ್ ಮೌಲ್ಯವನ್ನು ₹3,400 ಕೋಟಿ ನಿಗದಿ ಮಾಡಿರುವುದು ಸರಿ ಇಲ್ಲ ಎಂಬ ಅಭಿಪ್ರಾಯವೂ ಸಭೆಯಲ್ಲಿ ವ್ಯಕ್ತವಾಯಿತು' ಎಂದು ಮೂಲಗಳು ಹೇಳಿವೆ.

'ಟಿಡಿಆರ್ ಬಳಸಿದರೆ ಅಥವಾ ಭೂಮಿಯನ್ನು ಮಾರಾಟ ಮಾಡಿದರೆ, ಸುಪ್ರೀಂ ಕೋರ್ಟ್ ತೀರ್ಪು ರಾಜ್ಯ ಸರ್ಕಾರದ ಪರವಾಗಿ ಬಂದರೆ ಟಿಡಿಆರ್ ವಾಪಸ್ ಪಡೆಯಲು ಸಾಧ್ಯವಿಲ್ಲ. ಹೀಗಾಗಿ ಟಿಡಿಆರ್ ವಿಚಾರದಲ್ಲಿ ರಾಜಮನೆತನದವರು ಸುಪ್ರೀಂ ಕೋರ್ಟ್‌ನ ಅಂತಿಮ ತೀರ್ಪು ಬರುವವರೆಗೂ ಬಳಸದಂತೆ ಷರತ್ತು ವಿಧಿಸಿ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಲು ತೀರ್ಮಾನಿಸಲಾಯಿತು ಎಂದೂ ಗೊತ್ತಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವನ್ನು ಮಹಾತ್ಮಾ ಗಾಂಧಿ ವಿಶ್ವ ವಿದ್ಯಾಲಯ ಎಂದು ಮರು ನಾಮಕರಣಕ್ಕೆ ಅವಕಾಶ ಮಾಡಿಕೊಡುವ ತಿದ್ದುಪಡಿ ಮಸೂದೆಗೂ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಇತರ ನಿರ್ಣಯಗಳು

- 'ಕರ್ನಾಟಕ ಪಶು ಆಹಾರ ಮತ್ತು ಪೂರಕ ಮೇವು (ತಯಾರಿ ನಿಯಂತ್ರಣ, ಮಾರಾಟ ಮತ್ತು ವಿತರಣೆ) ಮಸೂದೆ- 2025ಕ್ಕೆ ಅನುಮೋದನೆ
- ಕೆಐಎಡಿಬಿಯಿಂದ ಜಮೀನು ಹಂಚಿಕೆ ಹಾಗೂ ಲೀಸ್ ಕಂ ಸೇಲ್ ಆಧಾರದಲ್ಲಿ ಹಂಚಿಕೆಯಾದ ಜಮೀನುಗಳಿಗೆ ಕ್ರಯಪತ್ರ ನೀಡಲು ಸತತ ಎರಡು ವರ್ಷ ಚಾಲ್ತಿಯಲ್ಲಿ ಇರಬೇಕು ಎಂಬ ಷರತ್ತಿನಿಂದ ಕೆಲವು ಘಟಕಗಳಿಗೆ ವಿನಾಯಿತಿಗೆ ಒಪ್ಪಿಗೆ
- ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಕಾಮಗಾರಿಯ ₹ 63.34 ಕೋಟಿಯ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ
- ತುಮಕೂರು ಮಹಾನಗರ ಪಾಲಿಕೆ ಆವರಣದಲ್ಲಿ ಕೃಷ್ಣರಾಜೇಂದ್ರ ಪುರಭವನದ ಮುಂಭಾಗದಲ್ಲಿ ಡಾ.ಬಿ. ಆರ್. ಅಂಬೇಡ್ಕರ್ ಪ್ರತಿಮೆಯನ್ನು ₹ 52.72 ಲಕ್ಷದ (ಪ್ರತಿಮೆಗೆ ₹ 34.42 ಲಕ್ಷ, ಪೀಠದ ಕಾಮಗಾರಿಗೆ ₹ 18 ಲಕ್ಷ ವೆಚ್ಚ) ಅಂದಾಜು ಮೊತ್ತದಲ್ಲಿ ನಿರ್ಮಿಸಿರುವ ಪ್ರಸ್ತಾವಕ್ಕೆ ಅನುಮೋದನೆ
- ಬಿಬಿಎಂಪಿ ವ್ಯಾಪ್ತಿಯ ಭೂ ಭರ್ತಿ ಘಟಕದ ಪ್ರದೇಶಗಳಲ್ಲಿ ಶೇಖರಣೆಯಾಗಿರುವ ಪಾರಂಪರಿಕ ಲಿಚೆಟ್ ಸಂಸ್ಕರಣೆಗೆ ಸೇವಾದಾರರಿಗೆ ಪ್ರತಿ ಲೀಟರ್‌ಗೆ ₹ 1.65ಗಳಂತೆ ಪಾವತಿಸುವ (ನಾಲ್ಕು ವರ್ಷಗಳ ಅವಧಿಗೆ ₹ 474.89 ಕೋಟಿ) ವಿಸ್ತೃತ ಯೋಜನಾ ವರದಿಗೆ ಅನುಮೋದನೆ
- ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರಗಳ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ತಿದ್ದುಪಡಿ ಮಸೂದೆ- 2025ಕ್ಕೆ ಅನುಮೋದನೆ
- ಕೇಂದ್ರ ಕಾಯ್ದೆ 'ದಿ ಪಬ್ಲಿಕ್ ಡೆಬ್ಟ್ ಆ್ಯಕ್ಟ್ 1944' ಅನ್ನು ನಿರಶನಗೊಳಿಸುವ ಮತ್ತು 'ದಿ ಗವರ್ನ್‌ಮೆಂಟ್ ಸೆಕ್ಯೂರಿಟಿಸ್ ಆ್ಯಕ್ಟ್ 2009'ಗೆ ತಿದ್ದುಪಡಿ ಮಾಡುವ ಬಗ್ಗೆ
- 'ಕರ್ನಾಟಕ ಕಿರುಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ತಡೆ) ಮಸೂದೆ- 2025'ಕ್ಕೆ ಅನುಮೋದನೆ

ಡಿಜಿಪಿಯಿಂದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದಲ್ಲಿ 2012ರಲ್ಲಿ ನಡೆದಿದ್ದ ವಿದ್ಯಾರ್ಥಿನಿ ಸೌಜನ್ಯಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮೀರ್ ಎಂಬಾತ ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದು, ಈ ಬಗ್ಗೆ ಮಾಹಿತಿ ನೀಡಲು ವಿಫಲವಾಗಿರುವ ಇಲಾಖೆಯ ಸಾಮಾಜಿಕ ಜಾಲತಾಣ ವಿಭಾಗಕ್ಕೆ ಡಿಜಿಪಿ ಎಚ್ಚರಿಕೆ ನೀಡಿದ್ದಾರೆ.

ಸಾಮಾಜಿಕ ಜಾಲತಾಣ ವಿಭಾಗದ ನಿರ್ವಾಹಕರು, ಸಮೀರ್ ಹರಿಬಿಟ್ಟಿದ್ದ ವಿಡಿಯೊ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿಲ್ಲ. ಅದರಿಂದ ಸಮಾಜದಲ್ಲಿ ಪರ-ವಿರೋದ ಅನಿಸಿಕೆಗಳು ಉಂಟಾಗಿವೆ. ಕಾನೂನು ಮತ್ತು ಸುವ್ಯವಸ್ಥೆ ಹದಗೆಡುವ ಸಂಭವವಿದೆ. ಆ ಘಟಕದ ಅಧಿಕಾರಿಗಳು ಚುರುಕುಗೊಳ್ಳಬೇಕು ಎಂದು ಡಿಜಿಪಿ ಅಲೋಕ್ ಮೋಹನ್ ಆದೇಶದಲ್ಲಿ ತಿಳಿಸಿದ್ದಾರೆ.



ಹತ್ರಾಸ್‌ನಲ್ಲಿ ನಡೆದ ಸಭೆಯಲ್ಲಿ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಮತ್ತಿತರರು ನಂದಿನಿ ಬ್ರ್ಯಾಂಡ್ ಉತ್ಪನ್ನಗಳ ಭಿತ್ತಿಪತ್ರವನ್ನು ಪ್ರದರ್ಶಿಸಿದರು

ಹಾಥರಸ್‌ನಲ್ಲಿ 'ನಂದಿನಿ' ಪ್ಯಾಕಿಂಗ್ ಘಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯ ನಂತರ, ಉತ್ತರ ಪ್ರದೇಶ ಮತ್ತು ರಾಜಸ್ಥಾನಗಳಿಗೆ ನಂದಿನಿ ಬ್ರ್ಯಾಂಡ್ ಉತ್ಪನ್ನಗಳ ಮಾರುಕಟ್ಟೆ ವಿಸ್ತರಿಸಲು ಕರ್ನಾಟಕ ಹಾಲು ಮಹಾ ಮಂಡಳ(ಕೆಎಂಎಫ್) ಸಿದ್ಧತೆ ನಡೆಸುತ್ತಿದ್ದು, ಉತ್ತರ ಪ್ರದೇಶದ ಹಾಥರಸ್‌ನಲ್ಲಿ ಹಾಲು ಸಂಸ್ಕರಣೆ ಮತ್ತು ಪ್ಯಾಕಿಂಗ್ ಘಟಕ ಆರಂಭಿಸುವ ಕುರಿತು ಸ್ಥಳೀಯ ಹಾಲು ಮಾರಾಟಗಾರರೊಂದಿಗೆ ಸಭೆ ನಡೆಸಿದೆ.

ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಅವರ ನೇತೃತ್ವದಲ್ಲಿ ಸಭೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಶಿವಸ್ವಾಮಿ, 'ಹಾಥರಸ್‌ನಲ್ಲಿ ಘಟಕ ಆರಂಭಿಸುವುದರಿಂದ ಆಗ್ರಾ, ಮಥುರಾ, ಮೀರತ್, ಅಲಿಘಢ ನಗರ ಪ್ರದೇಶಗಳಿಗೆ ಹಾಲು ಮಾರಾಟ ವಿಸ್ತರಿಸಲು ಅನುಕೂಲವಾಗುತ್ತದೆ. ಮಾರ್ಚ್ 16ರಿಂದ ಈ ಎಲ್ಲ ನಗರಗಳಲ್ಲಿ ನಂದಿನಿ ಹಾಲಿನ ಮಾರಾಟ ಆರಂಭವಾಗಲಿದೆ' ಎಂದು ತಿಳಿಸಿದರು.

'ರಾಜಸ್ಥಾನದ ಜೈಪುರದಲ್ಲೂ ನಂದಿನ ಹಾಲು ಮಾರಾಟ ಸಿದ್ಧತೆ ಮಾಡಿಕೊಳ್ಳಲಾಗಿದೆ. ಅಲ್ಲಿಗೂ ಶೀಘ್ರದಲ್ಲೇ ಹಾಲಿನ ಉತ್ಪನ್ನಗಳನ್ನು ಪೂರೈಸಲಾಗುತ್ತದೆ' ಎಂದು ಅವರು ವಿವರಿಸಿದರು.

ಸಭೆಯಲ್ಲಿ ಕೆಎಂಎಫ್‌ನ ಹಿರಿಯ ಅಧಿಕಾರಿಗಳು ಮತ್ತು ಸ್ಥಳೀಯ ಹಾಲು ಮಾರಾಟಗಾರರು ಭಾಗವಹಿಸಿದ್ದರು.

ಮುಸ್ಲಿಮರಷ್ಟೇ ಅಲ್ಪಸಂಖ್ಯಾತರೇ?

ಬಿವೈವಿ ಪ್ರಶ್ನೆ: ಶೇ 4 ಮೀಸಲಾತಿ ಕಲ್ಪಿಸುವ ಚಿಂತನೆಗೆ ಕಿಡಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಲ್ಪಸಂಖ್ಯಾತರೆಂದರೆ ಮುಸ್ಲಿಮರು ಮಾತ್ರವೇ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರಶ್ನಿಸಿದ್ದಾರೆ.

ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ 4 ಮೀಸಲಾತಿ ಕಲ್ಪಿಸಲು ಮುಂದಾಗಿರುವ ರಾಜ್ಯ ಸರ್ಕಾರದ ವಿರುದ್ಧ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ವಾಗ್ದಾಳಿ ನಡೆಸಿದ್ದಾರೆ.

'ಪ್ರಜಾವಾಣಿ' ವರದಿಯನ್ನು ಹಂಚಿಕೊಂಡಿರುವ ಅವರು, 'ಬಾಯಿಯಲ್ಲಿ ಸರ್ವ ಜನಾಂಗದ ಶಾಂತಿಯ ತೋಟದ ಮಂತ್ರ. ಸಂಪನ್ಮೂಲದ ಪಾಲಿನಲ್ಲಿ ನಿರಂತರ ಪಕ್ಷಪಾತ' ಎಂದು ಅವರುಕಿಡಿಕಾರಿದ್ದಾರೆ.

'ಕಾಂಗ್ರೆಸ್ ಸರ್ಕಾರದ ಕಣ್ಣಿಗೆ ಅಲ್ಪ ಸಂಖ್ಯಾತರು ಎಂದರೆ ಮುಸ್ಲಿಮರು ಮಾತ್ರ ಕಾಣುತ್ತಾರೆಯೇ ಹೊರತು, ಇತರ ನೈಜ ಅಲ್ಪಸಂಖ್ಯಾತ ಸಮುದಾಯಗಳು ಕಣ್ಣಿಗೆ ಕಾಣುವುದೇ ಇಲ್ಲ. ಮತ ಬ್ಯಾಂಕ್ ಹೆಸರಿನಲ್ಲಿ ಮುಸ್ಲಿಮರಿಗೆ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ, ಧರ್ಮದ ಹೆಸರಿನಲ್ಲಿ ಉದ್ಯೋಗ ಹಾಗೂ ಶೈಕ್ಷಣಿಕ ಮೀಸಲಾತಿ ನೀಡಲಾಗಿದೆ. ಇದೀಗ ಸರ್ಕಾರಿ ಕಾಮಗಾರಿಗಳಲ್ಲೂ ಶೇ 4 ಮೀಸಲಾತಿ ಕಲ್ಪಿಸಲು ಮುಂದಾಗಿದೆ' ಎಂದು ಹೇಳಿದ್ದಾರೆ.


ವಿಜಯೇಂದ್ರ

'ಮುಸ್ಲಿಮರೂ ಸೇರಿದಂತೆ ಸಮಗ್ರ ಅಲ್ಪಸಂಖ್ಯಾತ ಸಮುದಾಯಗಳ ಕುರಿತು ಯಾವುದೇ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡರೆ ನಾವು ಅದನ್ನು ಆಕ್ಷೇಪಿಸುವುದಿಲ್ಲ. ಆದರೆ, ಕೇವಲ ಮುಸ್ಲಿಮರನ್ನು ಮಾತ್ರ ಪ್ರತ್ಯೇಕಿಸಿ ಓಲೈಸುವುದು ಸಮಾಜ ಕಟ್ಟುವುದಕ್ಕೋ ಅಥವಾ ಸಮಾಜ ಒಡೆಯುವುದಕ್ಕೋ ಎಂಬ ಪ್ರಶ್ನೆ ಜನರದ್ದು' ಎಂದು ಹೇಳಿದ್ದಾರೆ.

'ಧರ್ಮದ ಹೆಸರಿನಲ್ಲಿ ಸಮಾಜ ಹಾಗೂ ನಾಡನ್ನು ವಿಭಜಿಸಲು ಹೊರಟಿರುವ ಕಾಂಗ್ರೆಸ್ ಸರ್ಕಾರದ ಧೋರಣೆಯನ್ನು ಬಿಜೆಪಿ ಬಲವಾಗಿ ಖಂಡಿಸಿ ವಿರೋಧಿಸುತ್ತದೆ. ಮುಸ್ಲಿಂ ಸಮುದಾಯಕ್ಕೆ ಕಾಮಗಾರಿಯಲ್ಲಿ ಮೀಸಲಾತಿ ಕಲ್ಪಿಸಲು ಹೊರಟಿರುವ ತುಷ್ಟೀಕರಣದ ಧೋರಣೆಯ ನಿರ್ಧಾರವನ್ನು ಸರ್ಕಾರ ಕೈಬಿಡಬೇಕು' ಎಂದೂ ಅವರು ಒತ್ತಾಯಿಸಿದ್ದಾರೆ.

ಮುಖ್ಯಾಂಶಗಳು
- ನೈಜ ಅಲ್ಪಸಂಖ್ಯಾತರನ್ನು ಕಡೆಗಣಿಸುತ್ತಿರುವ ಸರ್ಕಾರ
- ಧರ್ಮದ ಹೆಸರಿನಲ್ಲಿ ಸಮಾಜ ವಿಭಜನೆ ಟೀಕೆ

ಕೇರಳ: ನಾಡಿಗೆ ಕಾಡಾನೆ ಗುಂಪು ಸೇರಲು ನಿಷೇಧ

ಕಣ್ಣೂರು (ಕೇರಳ) (ಪಿಟಿಐ): ಕಾಡಾನೆಗಳು ಕಾಣಿಸಿಕೊಂಡಿರುವ ಕಾರಣ ಅಯ್ಯನ್‌ಕುನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೂರು ವಾರ್ಡ್‌ಗಳಲ್ಲಿ ಸಾರ್ವಜನಿಕರು ಎರಡು ದಿನ ಗುಂಪು ಸೇರುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿ ಬುಧವಾರ ಆದೇಶ ಹೊರಡಿಸಿದ್ದಾರೆ.

8, 9 ಮತ್ತು 10ನೇ ವಾರ್ಡ್‌ಗಳಲ್ಲಿ ಮಾ.5ರ ಬೆಳಿಗ್ಗೆ 10 ಗಂಟೆಯಿಂದ ಮಾರ್ಚ್ 6ರ ಸಂಜೆ 6 ಗಂಟೆವರೆಗೆ ಜನರು ಗುಂಪು ಸೇರಬಾರದು ಎಂದು ಆದೇಶದಲ್ಲಿ ತಿಳಿಸಿದ್ದಾರೆ.



ಈ ಮಧ್ಯೆ, ನಾಡಿಗೆ ಬಂದಿರುವ ಕಾಡಾನೆಗಳನ್ನು ವಾಪಸ್ ಕಳಿಸಲು ಅರಣ್ಯ ಅಧಿಕಾರಿಗಳು ಹರಸಾಹಸ ಪಡುತ್ತಿರುವ ದೃಶ್ಯಗಳು ಮಾಧ್ಯಮಗಳಲ್ಲಿ ಬಿತ್ತರವಾಗಿವೆ.

ಫೆ.23ರಂದು ಕಾಡಾನೆ ದಾಳಿಯಿಂದ ದಂಪತಿ ಮೃತಪಟ್ಟಿದ್ದರು.

3 ಮಕ್ಕಳ ಜೊತೆ ತಾಯಿ ಆತ್ಮಹತ್ಯೆ

ರಾಯಬಾಗ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಮೊಳವಾಡ ಸೇತುವೆ ಬಳಿ ಬುಧವಾರ ಗೃಹಿಣಿ, ಮೂರು ಮಕ್ಕಳೊಂದಿಗೆ ಕೃಷ್ಣಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪತಿಯ ಕಿರುಕುಳ ಕಾರಣ ಎನ್ನಲಾಗಿದೆ.

ಚಿಂಚಲಿ ಪಟ್ಟಣದ ಶಾರದಾ ಅಶೋಕ ಡಾಲೆ (32), ಮಕ್ಕಳಾದ ಅನುಷ್ಕಾ (14), ಅಮೃತಾ (10), ಆದರ್ಶ (8) ಮೃತಪಟ್ಟವರು. ಶವಗಳನ್ನು ನೀರಿನಿಂದ ತೆಗೆಯಲಾಗಿದೆ.

ಶಾರದಾ ಅವರ ಪತಿ ಅಶೋಕ ಡಾಲೆ (45) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ. 'ನದಿಗೆ ಹಾರಿದ್ದನ್ನು ಕಂಡ ಮೀನುಗಾರರು ರಕ್ಷಣೆಗೆ ಧಾವಿಸಿದ್ದರು. ಆದರೆ, ರಕ್ಷಿಸಲು ಸಾಧ್ಯವಾಗಲಿಲ್ಲ' ಎಂದು ಕುಡಚಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮದುವೆಯಾದ ಮೂರೇ ದಿನಕ್ಕೆ ಸಾವು

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ಮದುವೆಯಾದ ಮೂರನೇ ದಿನಕ್ಕೆ ಇಲ್ಲಿನ ನಿವಾಸಿ ಶಶಾಂಕ್ (28) ಅವರು ಹೃದಯಾಘಾತದಿಂದ ನಿಧನರಾದರು.

ಇವರು, ಪುರಸಭೆ ಸದಸ್ಯ ಕೆ.ಸಿ. ಮಂಜುನಾಥ್ ಹಾಗೂ ಎಸ್‌ಬಿಐ ಅಧಿಕಾರಿ ವನಿತಾ ಮಂಜುನಾಥ್ ದಂಪತಿಯ ಪುತ್ರ. ಪ್ರೀತಿಸಿದ್ದ ಜಾರ್ಖಂಡ್ ಯುವತಿ ಜೊತೆಗೆ ಕಳೆದ ಭಾನುವಾರ ಹಸೆ ಮಣೆ ಏರಿದ್ದರು. ಐ.ಟಿ ಉದ್ಯೋಗಿಯಾಗಿದ್ದ ಅವರಿಗೆ ಬೆಂಗಳೂರಿನಲ್ಲಿ ಸೋಮವಾರ ಸಂಜೆ ಎದೆನೋವು ಕಾಣಿಸಿಕೊಂಡಿತ್ತು. ಕೂಡಲೇ ಆಸ್ಪತ್ರೆಗೆ ಕರೆದೊಯ್ದರೂ ಬದುಕುಳಿಯಲಿಲ್ಲ.


ಶಶಾಂಕ್

ಪೋಷಕರ ಪತ್ತೆಗಾಗಿ ಪ್ರಕಟಣೆ



ಈ ಭಾವಚಿತ್ರದಲ್ಲಿರುವ ಸುಮಾರು 6 ತಿಂಗಳ ಗಂಡು ಮಗುವನ್ನು ದಿನಾಂಕ: 02–03–2025ರಂದು ದಯಾಕಿರಣ ದತ್ತು ಕೇಂದ್ರದ ಆವರಣದಲ್ಲಿ ಅಳವಡಿಸಿರುವ ಮಮತೆಯ ತೊಟ್ಟಿಲಿನಲ್ಲಿ ಯಾರೋ ಬಿಟ್ಟು ಹೋಗಿರುತ್ತಾರೆ. ಸದರಿ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿದ್ದು, ಸದರಿ ಮಗುವಿನ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ **ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೊದಲನೇ ಮಹಡಿ, ಮಹಾತ್ಮಾ ಗಾಂಧಿ ಕ್ರೀಡಾಂಗಣ, ಕುವೆಂಪುನಗರ, ತುಮಕೂರು ದೂರವಾಣಿ ಸಂಖ್ಯೆ: 0816–2956699** ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ: ತುಮಕೂರು
ದಿನಾಂಕ: 04–03–2025
ಸಹಿ/–
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.
DIPR/TUM/RO-201/24-25/Oysters

ಸಿಇಟಿ ಪ್ರಶ್ನೆಗಳ ಉತ್ತರಕ್ಕೆ ಐದು ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಪ್ರತಿ ಪ್ರಶ್ನೆಗೆ ಉತ್ತರ ನೀಡಲು ಇನ್ನುಮುಂದೆ ಐದು ಆಯ್ಕೆಗಳು ಇರಲಿವೆ.

ಪ್ರತಿ ಪ್ರಶ್ನೆಗೆ ಉತ್ತರ ನೀಡಲು ಇದುವರೆಗೆ ನಾಲ್ಕು ಆಯ್ಕೆಗಳು ಇದ್ದವು. ಪರೀಕ್ಷಾ ಅಕ್ರಮ ತಡೆಯಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಐದು ಆಯ್ಕೆಗಳಿಗೆ ಅವಕಾಶ ಮಾಡಿಕೊಟ್ಟಿದೆ. ಒಬ್ಬ ವಿದ್ಯಾರ್ಥಿ ನಿರ್ದಿಷ್ಟ ಪ್ರಶ್ನೆಗೆ ಉತ್ತರಿಸದಿದ್ದರೆ, ಅವರು ಆಪ್ಟಿಕಲ್ ಮಾರ್ಕ್ ರೆಕಗ್ನಿಷನ್ (ಒಎಂಆರ್) ಹಾಳೆಯಲ್ಲಿ ಒದಗಿಸಲಾದ ಐದನೇ ಆಯ್ಕೆಗೆ ಮಾರ್ಕ್ ಮಾಡಬಹುದು.

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಪರೀಕ್ಷೆಗಳಲ್ಲಿ ಕೆಲವರು ಪರೀಕ್ಷೆಯ ನಂತರ ಒಎಂಆರ್ ಹಾಳೆ ತಿದ್ದಿದ್ದ ಪ್ರಕರಣಗಳು ವರದಿಯಾಗಿದ್ದವು. ಈ ಕುರಿತು ರಚಿಸಿದ್ದ ಸಮಿತಿ ಮಾಡಿದ್ದ ಶಿಫಾರಸಿನಂತೆ ಒಎಂಆರ್‌ನಲ್ಲಿ ಐದನೇ ಆಯ್ಕೆಗೆ ಶಿಫಾರಸು ಮಾಡಿತ್ತು. ಇದೇ ವಿಧಾನವನ್ನು ಕೆಇಎ ಅಳವಡಿಸಿಕೊಂಡಿದೆ.

ಪ್ರಶ್ನೆ ಪತ್ರಿಕೆಗಳಿಗೆ ಉತ್ತರಿಸಲು ಮೂರು ಗಂಟೆಯ ಸಮಯ ಇರುತ್ತದೆ. ಅವಧಿ ಮುಗಿದ ನಂತರ ವಿದ್ಯಾರ್ಥಿಗಳು ಐದನೇ ಆಯ್ಕೆಗೆ ಶೇಡ್ ಮಾಡಲು ಹೆಚ್ಚುವರಿ ಐದು ನಿಮಿಷ ಸಮಯ ನೀಡಲಾಗುತ್ತದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದರು.

‘ವಾಣಿಜ್ಯ ಬಂದರು ಯೋಜನೆ’ಗೆ ತೀವ್ರ ವಿರೋಧ • ಪ್ರತಿಭಟಿಸಿದ್ದಕ್ಕೆ ಕಾನೂನು ಕ್ರಮದ ಭೀತಿ

ನೆಲೆಗಾಗಿ ಮೀನುಗಾರರ ಹೋರಾಟ

• ಗಣಪತಿ ಹೆಗಡೆ

ಕಾರವಾರ: ‘ಮೂರು ದಶಕದ ಹಿಂದೆ ವಾಸಕ್ಕೆ 30x40 ಅಳತೆ ಪ್ಲಾಟುಗಳನ್ನು ಹಂಚಿ, ಪಟ್ಟಾ ನೀಡಿದ್ದರು. ಈಗ ವಾಣಿಜ್ಯ ಬಂದರು ನಿರ್ಮಿಸಲು ಮನೆ ತೆರವಿಗೆ ಮುಂದಾಗಿದ್ದಾರೆ. ಹೋರಾಟ ನಡೆಸಿದ್ದಕ್ಕೆ ಸುಳ್ಳುಪ್ರಕರಣ ದಾಖಲಿಸಿದ್ದಾರೆ. ಭಯದಲ್ಲೇ ದಿನ ಕಳೆಯುತ್ತಿದ್ದೇವೆ’

-ಹೀಗೆಂದು ಹೊನ್ನಾವರ ತಾಲ್ಲೂಕಿನ ಟೊಂಕದಲ್ಲಿ ಮೀನುಗಾರರ ಕುಟುಂಬದ ಮಹಿಳೆಯರು ಕಣ್ಣೀರು ಸುರಿಸಿದರು. ಆಡಳಿತ ವ್ಯವಸ್ಥೆಗೆ ಹಿಡಿಶಾಪ ಹಾಕಿದರು.

ಇದು ಹೊನ್ನಾವರದ ಸ್ಥಿತಿ. ಅತ್ತ, ಮೀನುಗಾರಿಕೆ ಚಟುವಟಿಕೆಯಿಂದ ಗಿಜಿಗಿಡುತ್ತಿದ್ದ ಅಂಕೋಲಾದ ಕೇಣಿ ಕಡಲ ತೀರದಲ್ಲಿ ಪೊಲೀಸರು ಕಾವಲಿದ್ದಾರೆ. ದೋಣಿಗಳು ಲಂಗರು ಹಾಕಿವೆ.

ವಾಣಿಜ್ಯ ಬಂದರು ನಿರ್ಮಾಣ ಯೋಜನೆಯು ಮೀನುಗಾರರನ್ನು ಆತಂಕಕ್ಕೆ ದೂಡಿದೆ. ಜೀವನಾಧಾರವಾಗಿದ್ದ ನೆಲೆ ಕಳೆದುಕೊಳ್ಳುವುದರ ವಿರುದ್ಧ ಹೋರಾಡದಂತೆ ನಿಷೇಧಾಜ್ಞೆ ನೆಪದಲ್ಲಿ ಹತ್ತಿಕ್ಕುವ ಕೆಲಸ ನಡೆದಿದೆ ಎಂಬುದು ಮೀನುಗಾರರ ದೂರು. ಇದರಿಂದಾಗಿ ಹೊನ್ನಾವರದ ಟೊಂಕ, ಅಂಕೋಲಾದ ಕೇಣಿಯಲ್ಲಿ ಮೀನುಗಾರಿಕೆ ಈಗ ಸ್ತಬ್ಧಗೊಂಡಿದೆ.

‘ಕಾಸರಕೋಡದಿಂದ ಟೊಂಕದವರೆಗೆ ವಾಣಿಜ್ಯ ಬಂದರಿಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಭೂಮಿ ಸ್ವಾಧೀನಕ್ಕಾಗಿ ಫೆ. 25ರಂದು ಸಮೀಕ್ಷೆ ನಡೆಸಲಾಗಿದೆ. ಆಗ ನಿಷೇಧಾಜ್ಞೆ ಹೇರಿದ್ದು, 45 ಜನರ ವಿರುದ್ಧ ಕೊಲೆ ಯತ್ನದಂತಹ ಗಂಭೀರ ಪ್ರಕರಣ ದಾಖಲಿಸಿ, 20ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ. ಯೋಜನೆಯ ಪರಿಣಾಮಗಳನ್ನು ವಿವರಿಸಲು ಫೆ. 25ರಂದು ಸಿ.ಎಂ ಅವರನ್ನು ಭೇಟಿಯಾಗಲು ಬೆಂಗಳೂರಿಗೆ ತೆರಳಿದ್ದ ನನ್ನ ಮತ್ತು ಪತ್ನಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ’ ಎಂದು ಹೊನ್ನಾವರದ ಗಣಪತಿ ತಾಂಡೇಲ ಅವರು ತಿಳಿಸಿದರು.

‘ಈಗಲೂ ಗ್ರಾಮದಲ್ಲಿ ಪೊಲೀಸರ ಗಸ್ತು ಇದೆ. ಯೋಜನೆ ವಿರೋಧಿಸುವವರ ಮಾಹಿತಿ ಕಲೆ ಹಾಕುವ ಹಾಗೂ ಬೆದರಿಸುವ ಯತ್ನ ನಡೆದಿದೆ’ ಎಂದು ಕೇಣಿ ಗ್ರಾಮಸ್ಥರು ತಿಳಿಸಿದರು.

‘ಸ್ಥಳೀಯರ ವಿರೋಧದ ನಡುವೆಯೂ ಕೇಣಿಯಲ್ಲಿ ಸಮೀಕ್ಷೆ ಮುಂದುವರಿದಿದೆ. ಹೋರಾಟ ನಡೆಸದಂತೆ ನಿಷೇಧಾಜ್ಞೆ ವಿಧಿಸಲಾಗಿದೆ. ಇದರಿಂದ ನಾಲ್ಕೈದು ಜನರು ಒಟ್ಟುಗೂಡಿ ಮೀನುಗಾರಿಕೆಗೂ ತೆರಳಲಾಗದ ಸ್ಥಿತಿ ಇದೆ’ ಎಂದು ಕೇಣಿಯ ಹುವಾ ಖಂಡೇಕರ ದೂರಿದರು.

ಟೊಂಕ ಸಮೀಪದ ಮಲ್ಲುಕುರ್ವಾದಲ್ಲಿ 2010ರಲ್ಲಿ ವಾಣಿಜ್ಯ ಬಂದರು ನಿರ್ಮಿಸಲು ಹೊನ್ನಾವರ ಪೋರ್ಟ್ ಪ್ರೈವೆಟ್ ಲಿಮಿಟೆಡ್‌ಗೆ 93 ಎಕರೆ ಭೂಮಿ ಹಸ್ತಾಂತರಿಸಲಾಗಿತ್ತು.

ಪ್ರತಿಭಟನೆಯಿಂದಾಗಿ ಯೋಜನೆ ಸದ್ಯ ನನೆಗುದಿಗೆ ಬಿದ್ದಿದೆ. ಯೋಜನೆ ಕೈಬಿಡಲು ಕೋರಿ ರಾಷ್ಟ್ರೀಯ ಹಸಿರು ಪೀಠಕ್ಕೆ ಕಾಸರಕೋಡಿನ ವ್ಯಕ್ತಿಯೊಬ್ಬರು ದಾವೆ ಸಲ್ಲಿಸಿದ್ದಾರೆ. ಅದು ವಿಚಾರಣೆ ಹಂತದಲ್ಲಿ ಇರುವಾಗಲೇ, ಸಮೀಕ್ಷೆ ಪ್ರಕ್ರಿಯೆ ನಡೆದಿದೆ.

ಅಂಕೋಲಾದ ಕೇಣಿಯಲ್ಲಿ ₹4,200 ಕೋಟಿ ವೆಚ್ಚದಲ್ಲಿ ಜೆಎಸ್‌ಡಬ್ಲ್ಯು ಕಂಪನಿ ಗ್ರೀನ್ ಫೀಲ್ಡ್ ಬಂದರು ಸ್ಥಾಪನೆಗೆ ಭೌಗೋಳಿಕ ಕಾರ್ಯಸಾಧ್ಯತೆ ಸಮೀಕ್ಷೆಯನ್ನು ನಡೆಸುತ್ತಿದೆ.



ವಾಣಿಜ್ಯ ಬಂದರು ಯೋಜನೆ ವಿರೋಧಿಸಿ ಪ್ರತಿಭಟಿಸಿ ಹೊನ್ನಾವರದ ಟೊಂಕದಲ್ಲಿ ಸಮುದ್ರಕ್ಕೆ ಇಳಿಯಲು ಮುಂದಾಗಿದ್ದವರನ್ನು ಫೆ.25ರಂದು ಪೊಲೀಸರು ವಶಕ್ಕೆ ಪಡೆದಿದ್ದರು

‘ಬಂದರು ಅಭಿವೃದ್ಧಿಯಿಂದ ಪರಿಸರ ನಾಶ’

ಕುಮಟಾ: ‘ಅಂಕೋಲಾದ ಕೇಣಿಯಲ್ಲಿ ವಾಣಿಜ್ಯ ಬಂದರು ನಿರ್ಮಾಣದಿಂದ ಪಶ್ಚಿಮ ಘಟ್ಟ ಮತ್ತು ಕರಾವಳಿ ಪ್ರದೇಶದಲ್ಲಿ ಪರಿಸರ ನಾಶವಾಗುತ್ತದೆ. ಈ ಯೋಜನೆ ಬಗ್ಗೆ ಸ್ಥಳೀಯರೊಂದಿಗೆ ಚರ್ಚಿಸಲು ಜಿಲ್ಲೆಗೆ ಭೇಟಿ ನೀಡುತ್ತೇನೆ’ ಎಂದು ಪರಿಸರವಾದಿ ಸುರೇಶ ಹೆಬ್ಳೀಕರ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ್ದಾರೆ.

‘ಕೇಣಿ ಬಂದರು ಪ್ರದೇಶವು ದೇಶದಲ್ಲೇ ಪ್ರಾಕೃತಿಕವಾಗಿ ಸುಂದರ ತಾಣ. ಅಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಬಹುದು. ಕರಾವಳಿ ಮತ್ತು ಪಶ್ಚಿಮಘಟ್ಟ ಸೇರುವ ರಾಜ್ಯದ ಸುಂದರ ಪ್ರದೇಶವಾದ ಜಿಲ್ಲೆಯ ಎಲ್ಲ ಸಮುದ್ರ ತೀರ ನಾಶ ಮಾಡಿ ಬಂದರು ನಿರ್ಮಿಸುತ್ತಿರುವುದು ಸರಿಯಲ್ಲ’ ಎಂದು ಅವರು ತಿಳಿಸಿದರು.

‘ಕೇಣಿಯಲ್ಲಿ ವಾಣಿಜ್ಯ ಬಂದರು ನಿರ್ಮಾಣದಿಂದ ಮೀನುಗಾರರು ಬೇರೆ ಉದ್ಯೋಗಕ್ಕೆ ಪಟ್ಟಣ ಸೇರಬೇಕಾಗುತ್ತದೆ. ಹೆದ್ದಾರಿಗಳ ವಿಸ್ತರಣೆಗೆ ಇನ್ನಷ್ಟು ಕಾಡು ನಾಶವಾಗುತ್ತದೆ. ಅದರ ಬದಲು ಈಗಿರುವ ಕಾರವಾರ, ಮಲ್ಪೆ, ಮಂಗಳೂರು ಬಂದರನ್ನು ವ್ಯಾಪಾರಕ್ಕೆ ಬಳಸಲು ಸಾಧ್ಯವಿದೆ’ ಎಂದರು.

ವಾಣಿಜ್ಯ ಬಂದರು ಯೋಜನೆ ಜಾರಿಯಿಂದ ಜಿಲ್ಲೆಯ ಪರಿಸರ ನಾಶವಾಗಲಿದೆ. ಉಪಯೋಗಕ್ಕೆ ಬಾರದ ಯೋಜನೆಯು ಜನ ಜೀವನದ ಮೇಲೆ ಪರಿಣಾಮ ಬೀರಲಿದೆ

ವಿ.ಎನ್.ನಾಯಕ, ಪರಿಸರ ತಜ್ಞ

ಟೊಂಕದಲ್ಲಿ ಯೋಜನೆಗೆ ಮನೆ ಕಳೆದುಕೊಳ್ಳುವವರಿಗೆ ಪರಿಹಾರ ನೀಡುವ ಬಗ್ಗೆ ಯೋಜನೆಯಲ್ಲಿ ಪ್ರಸ್ತಾಪವಿಲ್ಲ. ಸರ್ಕಾರದ ಮಟ್ಟದಲ್ಲಿ ನಿರ್ಣಯ ಆಗಬೇಕಿದೆ

ಕ್ಯಾಪ್ಟನ್ ಸಿ.ಸ್ವಾಮಿ, ನಿರ್ದೇಶಕ, ಬಂದರು ಮತ್ತು ಜಲಸಾರಿಗೆ ಮಂಡಳಿ

ಒಂದು ಕಿ.ಮೀ ವ್ಯಾಪ್ತಿಯಲ್ಲಿ ಕೋಳಿಗಳ ವಧೆ ಆರಂಭ

ಕಪ್ಪಗಲ್ಲು: ಹಕ್ಕಿ ಜ್ವರ ದೃಢ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ಬಳ್ಳಾರಿ ಹೊರವಲಯದ ಕಪ್ಪಗಲ್ಲು ಪ್ರದೇಶದಲ್ಲಿ 8 ಸಾವಿರ ಕೋಳಿಗಳ ಸಾಮೂಹಿಕವಾಗಿ ಸಾವಿಗೆ ಹಕ್ಕಿಜ್ವರವೇ ಕಾರಣ’ ಎಂದು ಭೋಪಾಲ್‌ನ ರಾಷ್ಟ್ರೀಯ ಉನ್ನತ ಭದ್ರತಾ ಪ್ರಾಣಿ ರೋಗಗಳ ಸಂಸ್ಥೆ ದೃಢಪಡಿಸಿದೆ.

ಕೋಳಿಗಳ ಮಾದರಿಗಳನ್ನು ಪರೀಕ್ಷಿಸಿದ ಸಂಸ್ಥೆಯ ತಜ್ಞರು ಈ ಕುರಿತಂತೆ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಗೆ ವರದಿಯನ್ನು ಸಲ್ಲಿಸಿದ್ದಾರೆ.

ಹಕ್ಕಿಜ್ವರ ದೃಢಪಟ್ಟ ಕಾರಣ ಅಧಿಕಾರಿಗಳು, ಮುಂಜಾಗ್ರತೆ ಮಾರ್ಗಸೂಚಿಗಳನ್ನು ಜಾರಿಗೊಳಿಸಲು ಮುಂದಾಗಿದ್ದಾರೆ. ನಿರ್ದಿಷ್ಟ ಕೋಳಿ ಫಾರಂನಿಂದ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಎಲ್ಲ ಕೋಳಿಗಳನ್ನು ವೈಜ್ಞಾನಿಕವಾಗಿ ವಧೆ ಮಾಡುವ ಕಾರ್ಯ ನಡೆದಿದೆ.

ಕಪ್ಪಗಲ್ಲು ಕೋಳಿ ಫಾರಂನಿಂದ ಒಂದು ಕಿ.ಮೀ ವ್ಯಾಪ್ತಿಯಲ್ಲಿ 305 ಹಿತ್ತಲ (ನಾಟಿ) ಕೋಳಿಗಳು, ಫಾರಂನಲ್ಲಿ 1,000 ಬ್ರಾಯ್ಲರ್ ಕೋಳಿಗಳಿವೆ. ಎಲ್ಲವನ್ನು ವಧೆ ಮಾಡಲಿದ್ದೇವೆ. ನಂತರ ಗುಂಡಿ ಅಗೆದು ಉಪ್ಪು, ಸುಣ್ಣ ಸಮೇತ ಹೂಳಲಾಗುವುದು ಎಂದು ತಿಳಿಸಿದ್ದಾರೆ.

‘ನಾಟಿಕೋಳಿಗಳ ವಧೆಗೆ ಜನ ನಿರಾಕರಿಸುತ್ತಾರೆ. ಆದರೆ, ಮಾರ್ಗಸೂಚಿ ಅನ್ವಯ ವಧೆ ಮಾಡಲೇಬೇಕು. ಈಗಾಗಲೇ ಜನರಿಗೆ ಮಾಹಿತಿ ನೀಡಲಾಗಿದೆ. ಬುಧವಾರ ಎಷ್ಟು ಸಾಧ್ಯವೋ, ಅಷ್ಟು ಕೋಳಿಗಳನ್ನು ಸಾಯಿಸುತ್ತೇವೆ’ ಎಂದು ಇಲಾಖೆಯ ಉಪನಿರ್ದೇಶಕ ಹನುಮಂತ ನಾಯ್ಕ ಕಾರಬಾರಿ ‘ಪ್ರಜಾವಾಣಿ’ ತಿಳಿಸಿದರು.

ಆಂಧ್ರಪ್ರದೇಶದ ಗಡಿಯಿಂದ ಬಳ್ಳಾರಿಗೆ ಕೋಳಿಗಳನ್ನು ತರುವುದನ್ನು ತಡೆಯಲು ಚೆಕ್ ಪೋಸ್ಟ್ ಆರಂಭಿಸಲಾಗಿದೆ. ಹಕ್ಕಿಜ್ವರ ಹಿನ್ನೆಲೆಯಲ್ಲಿ ಬಿಗಿ ತಪಾಸಣೆ ಮಾಡಲಾಗುತ್ತಿದೆ.

ನಾಲೆಯಲ್ಲಿ ಸತ್ತ ಕೋಳಿಗಳು: ಆತಂಕ

ಶ್ರೀರಂಗಪಟ್ಟಣ: ತಾಲ್ಲೂಕಿನ ಪಿ.ಹೊಸಹಳ್ಳಿ ಮಾರ್ಗವಾಗಿ ಹರಿಯುವ ದೇವರಾಯ ನಾಲೆಯಲ್ಲಿ ಮಂಗಳವಾರ ಸತ್ತಕೋಳಿಗಳು ತೇಲಿ ಬಂದಿವೆ. ಹಕ್ಕಿ ಜ್ವರ ಪ್ರಕರಣಗಳು ಬೆಳಕಿಗೆ ಬರುತ್ತಿರುವ ಸಂದರ್ಭದಲ್ಲೇ, ಈ ಬೆಳವಣಿಗೆ ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.

ನಾಲೆ ನೀರನ್ನು ಕೃಷಿಯ ಜೊತೆಗೆ ಕುಡಿಯುವ ಉದ್ದೇಶಕ್ಕೂ ಬಳಸಲಾಗುತ್ತಿದೆ. ಸತ್ತ ಕೋಳಿಗಳನ್ನು ನಾಲೆಗೆ ಯಾರು ಎಸೆದಿದ್ದಾರೆ ಎಂಬುದು ಗೊತ್ತಾಗಿಲ್ಲ. 30ಕ್ಕೂ ಹೆಚ್ಚು ಕೋಳಿಗಳ ಕಳೇಬರ ತೇಲಿಕೊಂಡು ಬಂದಿವೆ.



‘ಆಸುಪಾಸಿನ ಫಾರಂಗಳಲ್ಲಿ ಪರಿಶೀಲಿಸಿದ್ದೇವೆ. ಬೇರೆಡೆಯಿಂದ ತಂದು ಬಿಸಾಡಿರುವ ಸಾಧ್ಯತೆ ಇದೆ. ಕೋಳಿಗಳು ಹಕ್ಕಿ ಜ್ವರದಿಂದ ಸತ್ತಿರುವ ಲಕ್ಷಣಗಳಿಲ್ಲ’ ಎಂದು ಪಶು ವೈದ್ಯಕೀಯ ಇಲಾಖೆ ಸಹಾಯಕ ನಿರ್ದೇಶಕ ಡಾ.ಜಿ.ಜೆ. ಸುರೇಶ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಅನುಮತಿ ಇಲ್ಲದೆ ಚಿತ್ರೀಕರಣ, ತಡೆ, ಎಫ್‌ಐಆರ್ ದಾಖಲು

ತುಮಕೂರು: ತಾಲ್ಲೂಕಿನ ನಾಮದ ಚಿಲುಮೆ ಅರಣ್ಯ ಪ್ರದೇಶದಲ್ಲಿ ಅನುಮತಿ ಇಲ್ಲದೆ ಸಿನಿಮಾ ಚಿತ್ರೀಕರಣ ಮಾಡುತ್ತಿದ್ದ ತಂಡದ ಮೇಲೆ ಅರಣ್ಯ ಇಲಾಖೆ ಅಧಿಕಾರಿಗಳು ಮಂಗಳವಾರ ರಾತ್ರಿ ದಾಳಿ ನಡೆಸಿದ್ದು, ಚಿತ್ರೀಕರಣ ತಡೆದಿದ್ದಾರೆ.


ನಿರ್ದೇಶಕ ತರುಣ್ ಸುಧೀರ್ ಅವರ ಇನ್ನು ಹೆಸರಿಡದ ಚಿತ್ರದ ಚಿತ್ರೀಕರಣ ನಡೆಯುತ್ತಿತ್ತು. ನಟ ರಾಣಾ, ನಟಿ ಪ್ರಿಯಾಂಕ ನಟಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

4–5 ದಿನಗಳಿಂದ ಚಿತ್ರೀಕರಣ ನಡೆಯುತ್ತಿತ್ತು. ಖಚಿತ ಮಾಹಿತಿ ಆಧರಿಸಿ ಎಸಿಎಫ್ ಪವಿತ್ರ ನೇತೃತ್ವದ ತಂಡ ದಾಳಿ ಮಾಡಿದೆ. ಸ್ಥಳದಲ್ಲಿದ್ದ ಲೈಟ್, ಅಡುಗೆ ಸಾಮಗ್ರಿಗಳು, ಕುರ್ಚಿ, ಟಿಟಿ ವಾಹನ, ಇತರೆ ವಸ್ತುಗಳನ್ನು ವಶಕ್ಕೆ ಪಡೆದು, ಚಿತ್ರೀಕರಣ ತಡೆದಿದೆ.

ದಾಳಿ ಮುನ್ಸೂಚನೆ ಸಿಗುತ್ತಿದ್ದಂತೆ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದ ಹಲವರು ಸ್ಥಳದಿಂದ ತೆರಳಿದ್ದಾರೆ. ಸ್ಥಳದಲ್ಲಿದ್ದ ಕೆಲವರ ವಿಚಾರಣೆ ನಡೆಸಲಾಗಿದೆ. ವಿವರ ಲಭ್ಯವಾಗಿಲ್ಲ.

ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಚಿತ್ರೀಕರಣಕ್ಕೆ ಪರೋಕ್ಷವಾಗಿ ನೆರವು ನೀಡಿದ ಅರಣ್ಯ ಇಲಾಖೆ ಮೂವರು ನೌಕರರಿಗೆ ನೋಟಿಸ್ ಜಾರಿಮಾಡಲಾಗಿದೆ.

‘ಅನುಮತಿ ಕೋರಿ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿದ್ದು, ಅನುಮತಿ ಸಿಕ್ಕಿಲ್ಲ. ಪ್ರಕರಣ ದಾಖಲಿಸಲಾಗಿದೆ’ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಅನುಪಮಾ ತಿಳಿಸಿದರು.



ಟೂತ್‌ಪೇಸ್ಟ್ ಟ್ಯೂಬ್‌ನಲ್ಲಿ ಮಾದಕ ವಸ್ತು: ಬಂಧನ

ಮಡಿಕೇರಿ: ಟೂತ್‌ಪೇಸ್ಟ್ ಟ್ಯೂಬ್‌ನಲ್ಲಿ ಮಾದಕ ವಸ್ತು ಹ್ಯಾಶಿಶ್ ತುಂಬಿ ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾ ಕೈದಿ ಸನಮ್ ಎಂಬಾತನಿಗೆ ನೀಡುವ ವೇಳೆ ಸುರಬೀಲ್ (26) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಕೇರಳದ ಕಣ್ಣೂರು ಜಿಲ್ಲೆಯ ಆರೋಪಿ, ತಾನು ಸನಮ್ ಸೋದರ ಎಂದು ಹೇಳಿಕೊಂಡಿದ್ದ. ಕೈದಿಗೆ ಕೊಡಲು ಟೂತ್‌ಪೇಸ್ಟ್, ಟೂತ್‌ಬ್ರಷ್, ಸೋಪು, ಎಣ್ಣೆ ತಂದಿದ್ದ. ಕಾರಾಗೃಹ ಅಧೀಕ್ಷಕ ಸಂಜಯ ದತ್ತಿ ಪರಿಶೀಲಿಸಿದಾಗ ಟೂತ್‌ಪೇಸ್ಟ್ ಟ್ಯೂಬ್‌ನಲ್ಲಿ ಮಾದಕ ವಸ್ತು ಪತ್ತೆಯಾಯಿತು.

ಅಧೀಕ್ಷಕರು ದೂರು ನೀಡಿದ್ದು, ಆರೋಪಿಯನ್ನು ಬಂಧಿಸಿ, 24 ಗ್ರಾಂ ಹ್ಯಾಶಿಶ್ ಅನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಮಡಿಕೇರಿ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ಲಾರಿಗಳ ಡಿಕ್ಕಿ: ಚಾಲಕರ ಸಾವು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ತಾಲ್ಲೂಕಿನ ಸೀಬಾರ ಬಳಿ ರಾಷ್ಟ್ರೀಯ ಹೆದ್ದಾರಿ– 48ರಲ್ಲಿ ಕೆಟ್ಟು ನಿಂತಿದ್ದ ಲಾರಿಗೆ ಹಿಂದಿನಿಂದ ಬಂದ ಇನ್ನಿತರ ಎರಡು ಲಾರಿಗಳು ಬುಧವಾರ ಡಿಕ್ಕಿ ಹೊಡೆದಿದೆ. ಪರಿಣಾಮ, ಮೂರೂ ಲಾರಿಗಳ ಚಾಲಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಆಂಧ್ರಪ್ರದೇಶದ ತಾಡಪತ್ರಿಯ ಶೇಖರ್ (55), ತಮಿಳುನಾಡಿನ ಧರ್ಮಪುರಿಯ ಪೆರಿಯ ಸ್ವಾಮಿ (50), ಉತ್ತರಪ್ರದೇಶದ ಅಲಿಗಢದ ಮೊಹಮದ್ ಕೈಫ್ (22) ಮೃತ ಚಾಲಕರು. ಬಜರುದ್ದೀನ್ ಎಂಬವರು ಗಾಯಗೊಂಡಿದ್ದು, ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಲಾರಿಗಳು ಮುಂಬೈನಿಂದ ಬೆಂಗಳೂರು ಕಡೆಗೆ ತೆರಳುತ್ತಿದ್ದವು. ಟೈರ್ ಸ್ಫೋಟಗೊಂಡಿದ್ದರಿಂದ ಭತ್ತ ತುಂಬಿದ್ದ ಲಾರಿಯನ್ನು ರಸ್ತೆ ಬದಿ ನಿಲ್ಲಿಸಿ, ಚಾಲಕ ಟೈರ್ ಬದಲಿಸುತ್ತಿದ್ದರು. ಆಗ, ಕ್ರಮವಾಗಿ ಜವಳಿ ಮತ್ತು ಕಲ್ಲಂಗಡಿ ಸಾಗಿಸುತ್ತಿದ್ದ ಎರಡು ಲಾರಿಗಳು ಡಿಕ್ಕಿ ಹೊಡೆದಿವೆ. ಡಿಕ್ಕಿಯ ರಭಸಕ್ಕೆ ಮೂರೂ ವಾಹನಗಳ ಚಾಲಕರು ಸ್ಥಳದಲ್ಲೇ ಮೃತಪಟ್ಟರು.

ಅಪಘಾತದ ಬಳಿಕ ಬಟ್ಟೆ, ಭತ್ತ, ಕಲ್ಲಂಗಡಿ ಹಣ್ಣುಗಳು ರಸ್ತೆಯಲ್ಲಿ ಚೆಲ್ಲಾಡಿದ್ದವು. ಕೆಲಕಾಲ ಸಂಚಾರ ಸ್ಥಗಿತಗೊಂಡಿತ್ತು. ಚಿತ್ರದುರ್ಗ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಚಿತ್ರದುರ್ಗ ಬಳಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಲಾರಿಗಳ ನಡುವೆ ಸಂಭವಿಸಿದ ಅಪಘಾತದ ದೃಶ್ಯ.

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿಯ ವಿ. ಸುನಿಲ್ ಕುಮಾರ್ ವಾಗ್ದಾಳಿ

'ಅನಿವಾರ್ಯ ಬಂದಾಗ ಒಬಿಸಿ ಹೆಲ್ಮೆಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮಗೆ ಅನಿವಾರ್ಯ ಎದುರಾದಾಗಲೆಲ್ಲ ಹಿಂದುಳಿದ ವರ್ಗಗಳ (ಒಬಿಸಿ) ಹೆಲ್ಮೆಟ್ ಧರಿಸುತ್ತಾರೆ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿವಾರು ಜನಗಣತಿ) ವರದಿಯನ್ನೂ ಸ್ವಯಂ ರಕ್ಷಣೆಗೆ ಬಳಸಿಕೊಳ್ಳುತ್ತಾರೆ' ಎಂದು ಬಿಜೆಪಿಯ ವಿ. ಸುನಿಲ್ ಕುಮಾರ್ ವಿಧಾನಸಭೆಯಲ್ಲಿ ಬುಧವಾರ ವಾಗ್ದಾಳಿ ನಡೆಸಿದರು.

ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, '2015ರಲ್ಲಿ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಆಯೋಗವು ಜಾತಿವಾರು ಜನಗಣತಿ ವರದಿ ಸಲ್ಲಿಸಲು ಮುಂದಾಗಿತ್ತು. ಆದರೆ, ಆಯೋಗದಿಂದ ಆಗ ವರದಿ ಪಡೆದಿರಲಿಲ್ಲ. ಈಗಲೂ ವರದಿಯ ಸ್ಥಿತಿ ಏನಾಗಿದೆ ಎಂಬುದನ್ನು ಬಹಿರಂಗಪಡಿಸುತ್ತಿಲ್ಲ' ಎಂದರು.

'ಜಾತಿವಾರು ಜನಗಣತಿ ವರದಿ ಕುರಿತು ಚರ್ಚೆ ನಡೆಯುತ್ತಲೇ ಇದೆ. ₹ 165 ಕೋಟಿ ವೆಚ್ಚ ಮಾಡಿ ನಡೆಸಿದ ಗಣತಿಯ ವರದಿ ಬಹಿರಂಗಪಡಿಸದಂತೆ ಯಾವ ಶಕ್ತಿ ತಡೆಯುತ್ತಿದೆ? ವಿಧಾನಮಂಡಲದ ಈ ಅಧಿವೇಶನ ಮುಗಿಯುವುದರೊಳಗೆ ವರದಿಯನ್ನು ಸದನದಲ್ಲಿ ಮಂಡಿಸಬೇಕು' ಎಂದು ಆಗ್ರಹಿಸಿದರು.

ಇಂದಿರಾ ಕ್ಯಾಂಟೀನ್‌ನಂಥ ಸರ್ಕಾರ: 'ರಾಜ್ಯ ಸರ್ಕಾರದ ಸ್ಥಿತಿಗೂ ಇಂದಿರಾ ಕ್ಯಾಂಟೀನ್‌ಗೂ ಹೋಲಿಕೆ ಇದೆ. ಸರ್ಕಾರದ ಲೆಕ್ಕದಲ್ಲಿ 600 ಇಂದಿರಾ ಕ್ಯಾಂಟೀನ್ ಇವೆ. ಆದರೆ, ಅಲ್ಲಿ ಇಡ್ಲಿ ಸಿಕ್ಕರೆ ಸಾಂಬಾರು ಇರುವುದಿಲ್ಲ. ಈ ಸರ್ಕಾರದಲ್ಲೂ ಹಾಗೆಯೇ ಆಗಿದೆ. ಸರ್ಕಾರ ಇದೆ. ಆದರೆ, ಯೋಜನೆ ಮತ್ತು ಅನುದಾನವೇ ಇಲ್ಲ' ಎಂದು ಟೀಕಿಸಿದರು.

ಕಾನೂನು ಸುವ್ಯವಸ್ಥೆ ಕುರಿತು ರಾಜ್ಯಪಾಲರಿಂದ ಸುಳ್ಳು ಹೇಳಿಸಲಾಗಿದೆ. ಗಂಭೀರ ಸ್ವರೂಪದ ಪ್ರಕರಣಗಳೇ ನಡೆದಿಲ್ಲ ಎಂದು ರಾಜ್ಯಪಾಲರು ಹೇಳಿದ್ದಾರೆ. ಮಂಡ್ಯ ಮತ್ತು ಶಿವಮೊಗ್ಗದಲ್ಲಿ ನಡೆದ ಗಲಭೆಗಳು, ಮೈಸೂರಿನ ಉದಯಗಿರಿ ಪ್ರಕರಣ, ಬೀದರ್‌ನಲ್ಲಿ ನಡೆದ ದರೋಡೆ ಮತ್ತು ಕೊಲೆ ಎಲ್ಲವೂ ಯಾವ ರೀತಿಯ ಪ್ರಕರಣಗಳು ಎಂದು ಪ್ರಶ್ನಿಸಿದರು.

ತಿಂಗಳಿಗೆ ₹1.5 ಲಕ್ಷ ವೇತನ ಪಡೆಯುವವರೂ 'ಶಕ್ತಿ' ಮೂಲಕ ಉಚಿತ ಪ್ರಯಾಣ ಮಾಡುತ್ತಿದ್ದಾರೆ. ಬಿಪಿಎಲ್ ಕುಟುಂಬಗಳಿಗೆ ಯೋಜನೆ ಸೀಮಿತಗೊಳಿಸುವ ಬಗ್ಗೆ ಚಿಂತನೆ ನಡೆಸಬೇಕು.

ಎಂ.ಟಿ. ಕೃಷ್ಣಪ್ಪ, ಜೆಡಿಎಸ್ ಸದಸ್ಯ

'ಗಾಲಿ ಕುರ್ಚಿಯ ಮೇಲೆ ಸರ್ಕಾರ'

'ಮುಂದಿನ ಮುಖ್ಯಮಂತ್ರಿ ಯಾರು ಎಂಬ ಚರ್ಚೆಯಿಂದ ರಾಜ್ಯ ಸರ್ಕಾರದಲ್ಲಿ ರಾಜಕೀಯ ಅಸ್ಥಿರತೆ ಸೃಷ್ಟಿಯಾಗಿದೆ. ಬಜೆಟ್ ಅಧಿವೇಶನದ ಬಳಿಕ ಈ ಸರ್ಕಾರದ 'ಕರಿಮಣಿ ಮಾಲೀಕ' ಯಾರು ಎಂಬ ಪ್ರಶ್ನೆ ಉದ್ಭವಿಸಿದೆ. ಇಡೀ ಸರ್ಕಾರವೇ ಗಾಲಿ ಕುರ್ಚಿಯ ಮೇಲಿದೆ' ಎಂದು ಸುನಿಲ್ ಕುಮಾರ್ ಟೀಕಿಸಿದರು.



ವಿಧಾನಸಭಾ ಕಲಾಪದಲ್ಲಿ ಶಾಸಕ ವಿ. ಸುನಿಲ್ ಕುಮಾರ್ ಮಾತನಾಡಿದರು

'₹ 5 ಲಕ್ಷದವರೆಗೆ ಸಾಲ ವಿತರಿಸಬೇಕು'

'ಸಕಾಲಕ್ಕೆ ಸಾಲ ಸಿಗದೇ ಗ್ರಾಮೀಣ ಪ್ರದೇಶದಲ್ಲಿನ ರೈತ ಕುಟುಂಬಗಳು ಮೈಕ್ರೊ ಫೈನಾನ್ಸ್ ಕಂಪನಿಗಳ ಬಲಿ ಹೋಗುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಗ್ಗೂಡಿ ಪ್ರತಿ ರೈತ ಕುಟುಂಬಕ್ಕೆ ₹5 ಲಕ್ಷದವರೆಗೆ ಬಡ್ಡಿರಹಿತ ಸಾಲ ವಿತರಿಸಬೇಕು' ಎಂದು ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ಒತ್ತಾಯಿಸಿದರು.

'ನಬಾರ್ಡ್ ರಾಜ್ಯದ ಸಹಕಾರಿ ಅಪೆಕ್ಸ್ ಬ್ಯಾಂಕ್‌ಗೆ ನೀಡುತ್ತಿದ್ದ ಆರ್ಥಿಕ ನೆರವನ್ನು ಕಡಿತಗೊಳಿಸಿರುವುದರಿಂದ ರೈತರಿಗೆ ಸಾಲ ವಿತರಿಸಲು ತೊಡಕಾಗುತ್ತಿದೆ. ತಕ್ಷಣವೇ ನೆರವು ಒದಗಿಸಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಪೊಲೀಸರ ನೈತಿಕ ಸ್ಥೈರ್ಯ ಕುಸಿತ'



'ಈಗಿನ ಸರ್ಕಾರದ ಧೋರಣೆಯಿಂದ ರಾಜ್ಯದಲ್ಲಿ ಪೊಲೀಸರ ನೈತಿಕ ಸ್ಥೈರ್ಯ ಕುಸಿಯುತ್ತಿದೆ. ಬೆಳಗಾವಿಯಲ್ಲಿ ಮೀಸಲಾತಿಗಾಗಿ ಹೋರಾಡಿದ ಪಂಚಮಸಾಲಿ ಲಿಂಗಾಯತರ ಮೇಲೆ ಲಾಠಿ ಪ್ರಹಾರ ನಡೆಸಲಾಗಿತ್ತು. ಆದರೆ, ಮೈಸೂರಿನ ಉದಯರವಿಯಲ್ಲಿ ಪೊಲೀಸ್ ಠಾಣೆಯನ್ನು ಸುಡುತ್ತೇವೆ ಎಂದ ಮತಾಂಧನನ್ನು ಬಂಧಿಸಲಿಲ್ಲ' ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

'ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ರಾಜ್ಯದ ಗುತ್ತಿಗೆದಾರರ ಬಿಲ್ ಪಾವತಿ ಆಗುತ್ತಿಲ್ಲ. ಆದರೆ, ಹೈದರಾಬಾದ್‌ನ ಗುತ್ತಿಗೆದಾರರೊಬ್ಬರಿಗೆ ಒಂದೇ ದಿನ ₹ 250 ಕೋಟಿ ಬಿಲ್ ಪಾವತಿಸಲಾಗಿದೆ' ಎಂದು ದೂರಿದರು.

'ಗೃಹಲಕ್ಷ್ಮಿ' ಯೋಜನೆ ಗದ್ದಲ ಕಲಾಪ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹಲಕ್ಷ್ಮಿ ಯೋಜನೆಯ ಹಣ ಫಲಾನುಭವಿಗಳ ಖಾತೆಗೆ ಸಕಾಲಕ್ಕೆ ಸಂದಾಯ ಆಗದಿರುವ ವಿಷಯ ವಿಧಾನ ಪರಿಷತ್‌ನಲ್ಲಿ ಕೋಲಾಹಲ ಸೃಷ್ಟಿಸಿತು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಜೆಡಿಎಸ್‌ನ ಟಿ.ಎ. ಶರವಣ, ಫಲಾನುಭವಿಗಳಿಗೆ ಆರು ತಿಂಗಳಿನಿಂದ ಹಣ ನೀಡಿಲ್ಲ. ದಿನವೂ ಹಣಕ್ಕಾಗಿ ನಿರೀಕ್ಷೆ ಮಾಡುವುದರಲ್ಲೇ ಜನರು ಸಮಯ ವ್ಯರ್ಥ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಶರವಣ ಮಾತಿಗೆ ಕೆರಳಿದ ಕಾಂಗ್ರೆಸ್ ಸದಸ್ಯರು, ಆರು ತಿಂಗಳು ಹಣ ಬಂದಿಲ್ಲ ಎನ್ನುವುದನ್ನು ಸಾಬೀತು ಮಾಡುವಂತೆ ಸವಾಲು ಹಾಕಿದರು. ಜೆಡಿಎಸ್‌ನ ಎಸ್.ಎಲ್. ಬೋಜೇಗೌಡ ಅವರು ಮಾತನಾಡಲು ಎದ್ದು ನಿಂತಾಗ ಸಭಾ ನಾಯಕ ಬೋಸರಾಜು ಆಕ್ಷೇಪಿಸಿದರು. ಇದರಿಂದ ಪರಿಷತ್ ಕಲಾಪ ಗದ್ದಲದ ಗೂಡಾಯಿತು. ಸಭಾಪತಿ ಸ್ಥಾನದಲ್ಲಿದ್ದ ಮಂಜುನಾಥ ಭಂಡಾರಿ ಎಲ್ಲರೂ ಕುಳಿತುಕೊಳ್ಳುವಂತೆ ತಾಕೀತು ಮಾಡಿದರು.

ಬಿಜೆಪಿಯ ಎನ್. ರವಿಕುಮಾರ್, ಭಾರತಿಶೆಟ್ಟಿ, 'ಗ್ಯಾರಂಟಿ ಯೋಜನೆಗಳ ಹಣವನ್ನು ಈ ಸರ್ಕಾರ ಚುನಾವಣಾ ಸಮಯಕ್ಕೆ ಮಾತ್ರ ನೀಡುತ್ತದೆ' ಎಂದು ಟೀಕಿಸಿದರು. 'ಆರು ತಿಂಗಳು ವಿಳಂಬವಾಗಿರುವುದನ್ನು ಸಾಬೀತು ಮಾಡಿದರೆ ರಾಜೀನಾಮೆ ನೀಡುವೆ' ಎಂದು ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹಮದ್ ಸವಾಲು ಹಾಕಿದರು. ವಾದ–ವಿವಾದ ತಾರಕ್ಕೇರುತ್ತಿದಂತೆ ಪೀಠಕ್ಕೆ ಮರಳಿದ ಸಭಾಪತಿ ಬಸವರಾಜ ಹೊರಟ್ಟಿ, 'ಸದಸ್ಯರು ಪೀಠಕ್ಕಾದರೂ ಮರ್ಯಾದೆ ಕೊಡಬೇಕು. ಜನರು ನೋಡಿ ಏನು ಅನ್ನುತ್ತಾರೆ ಎನ್ನುವ ಅಂಜಿಯಾದರೂ ಇರಲಿ' ಎಂದು ಅಸಮಾಧಾನ ವ್ಯಕ್ತಪಡಿಸಿ, ಕಲಾಪ ಮುಂದೂಡಿದರು.

'ವಿದ್ಯುತ್ ಅಕ್ರಮ–ಸಕ್ರಮ ದೊಡ್ಡ ದಂಧೆ'

ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆಯುವ ಅಕ್ರಮ–ಸಕ್ರಮ ಯೋಜನೆ ದೊಡ್ಡ ದಂಧೆಯಾಗಿತ್ತು. ಹಲವು ವರ್ಷಗಳಿಂದ ಅರ್ಜಿ ಸಲ್ಲಿಸಿದವರಿಗೆ ಸಂಪರ್ಕ ಸಿಕ್ಕಿಲ್ಲ. ಹಿಂದೆ ಅರ್ಜಿ ಸಲ್ಲಿಸಿದವರಿಗೆ ಸಂಪರ್ಕ ಸಿಗುವವರೆಗೂ ಹೊಸ ಅರ್ಜಿ ಸ್ವೀಕರಿಸದಂತೆ ಸೂಚಿಸಲಾಗಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು. ಬಿಜೆಪಿಯ ಸಿ.ಟಿ. ರವಿ, ಸೆಪ್ಟೆಂಬರ್ 2023ರ ನಂತರ ಅಕ್ರಮ–ಸಕ್ರಮ ಸ್ಥಗಿತಗೊಳಿಸಲಾಗಿದೆ. ಈ ಸರ್ಕಾರ ರೈತರ ವಿರೋಧಿ ಎಂಬ ಮಾತಿಗೆ ಸಚಿವ ಜಾರ್ಜ್ ಆಕ್ಷೇಪ ವ್ಯಕ್ತಪಡಿಸಿದರು.



ನಗೆಗಡಲು.... ವಿಧಾನ ಪರಿಷತ್‌ನ ಕಲಾಪದಲ್ಲಿ ಬುಧವಾರ ಗೃಹ ಸಚಿವ ಜಿ. ಪರಮೇಶ್ವರ ಹಾಗೂ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ನಡುವೆ ನಗೆ ಚಟಾಕಿ ಹಾರಿದ ಕ್ಷಣ. ಸಚಿವ ರಾಮಲಿಂಗಾರೆಡ್ಡಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಹಣ ಸಿಕ್ಕಿಲ್ಲ, ಕೊಳವೆಬಾವಿ ಕೊರೆಸಲೂ ದುಡ್ಡಿಲ್ಲ: ಬಿಜೆಪಿ ತರಾಟೆ

'ಮಹದೇವಪ್ಪಗೂ ಅನುದಾನ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮುಖ್ಯಮಂತ್ರಿಯವರಿಗೆ ಅತ್ಯಂತ ಆಪ್ತ. ಆದರೆ, ಅವರು ತಮ್ಮ ಇಲಾಖೆಗೆ ಅಗತ್ಯ ಪ್ರಮಾಣದಲ್ಲಿ ಅನುದಾನ ಪಡೆಯಲು ವಿಫಲರಾಗಿದ್ದಾರೆ. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಶೇ 50 ರಷ್ಟೂ ಹಣ ಸಿಕ್ಕಿಲ್ಲ, ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ಕೊರೆಸಲೂ ಹಣವಿಲ್ಲ' ಎಂದು ವಿಧಾನಸಭೆಯಲ್ಲಿ ಬಿಜೆಪಿ–ಜೆಡಿಎಸ್ ಸದಸ್ಯರು ಮಹದೇವಪ್ಪ ಅವರನ್ನು ತರಾಟೆಗೆ ತೆಗೆದುಕೊಂಡರು.

ಪ್ರಶ್ನೋತ್ತರ ಅವಧಿಯಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುವ ಸಂದರ್ಭದಲ್ಲಿ ಸಚಿವರು ವಿರೋಧಪಕ್ಷಗಳ ಟೀಕೆಗೆ ಗುರಿಯಾದರು.

'ಕಳೆದ 2 ವರ್ಷಗಳಲ್ಲಿ ಅಂಬೇಡ್ಕರ್ ನಿಗಮಕ್ಕೆ ಅನುದಾನ ಪ್ರಮಾಣ ತೀವ್ರ ಕುಸಿತವಾಗಿದೆ. 2022–23 ರಲ್ಲಿ ₹219.75 ಕೋಟಿ ಅನುದಾನ ನೀಡಿದ್ದರೆ, 2023–24 ರಲ್ಲಿ ₹124 ಕೋಟಿಗೆ ಇಳಿಸಲಾಗಿದೆ. ₹100 ಕೋಟಿ ಕಡಿತ ಮಾಡಲಾಗಿದೆ. ಮಹದೇವಪ್ಪ ಅವರಿಗೇ ಹಣ ಸಿಗುವುದಿಲ್ಲ, ಅವರು ಅಸಹಾಯಕರಾಗಿದ್ದರೆ ಎಂದರೆ ಉಳಿದವರ ಕಥೆ ಏನು' ಎಂದು ಬಿಜೆಪಿಯ ವಿ.ಸುನಿಲ್‌ಕುಮಾರ್ ಪ್ರಶ್ನಿಸಿದರು.

ಬಿಜೆಪಿಯ ಡಾ.ಕೆ.ಚಂದ್ರು ಲಮಾಣಿ ಮಾತನಾಡಿ, 'ತಾಂಡಾ ಅಭಿವೃದ್ಧಿ ನಿಗಮದಲ್ಲಿ ಗಂಗಾಕಲ್ಯಾಣ ಯೋಜನೆಯಡಿ ವರ್ಷಕ್ಕೆ ಒಂದು ಅಥವಾ 2 ಕೊಳವೆ ಬಾವಿಗಳನ್ನು ಕೊರೆಸಲಾಗುತ್ತಿದೆ. ಕೊಳವೆಬಾವಿಗಾಗಿ ಸಾವಿರಾರು ಅರ್ಜಿಗಳು ಬರುತ್ತವೆ. ಒಂದು ಅಥವಾ ಎರಡು ಕೊಳವೆಬಾವಿ ಕೊರೆಸುವುದರಿಂದ ಉಳಿದವರ ಅಸಮಾಧಾನಕ್ಕೆ ನಾವು ಗುರಿಯಾಗಬೇಕಾಗಿದೆ. ನಿತ್ಯವೂ ನಮ್ಮ ಮನೆ ಬಳಿ ಜನ ಬರುತ್ತಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೆಲವು ಕಾಂಗ್ರೆಸ್ ಸದಸ್ಯರು ಕೈ ಎತ್ತುವ ಮೂಲಕ ಇದಕ್ಕೆ ಸಹಮತ ವ್ಯಕ್ತಪಡಿಸಿದರು.

ಆಗ ಮಧ್ಯ ಪ್ರವೇಶಿಸಿ ಮಾತನಾಡಿದ ಬಸನಗೌಡ ಪಾಟೀಲ ಯತ್ನಾಳ ಅವರು, 'ಶಿವನ ತಲೆಯ ಮೇಲೆ ಇರುವ ಗಂಗೆ ಕಾಂಗ್ರೆಸ್ ಸರ್ಕಾರದಲ್ಲಿ ನಾಪತ್ತೆಯಾಗಿದ್ದಾಳೆ. ಹೆಸರಿಗೆ ಮಹದೇವಪ್ಪ, ಆದರೆ ಗಂಗೆಯನ್ನೇ ನಾಪತ್ತೆ ಮಾಡಿದ್ದಾರೆ' ಎಂದು ಕಾಲೆಳೆದರು.

'ಮಹದೇವಪ್ಪನವರು ಮಲೆ ಮಹದೇಶ್ವರ ಕ್ಷೇತ್ರದ ಕಡೆಯಿಂದ ಬರುತ್ತಾರೆ. ಅವರ ತಲೆ ಮೇಲೆ ಗಂಗೆನೇ ಇಲ್ಲ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕರ್ಮ ತೊಳೆದುಕೊಳ್ಳಲು ಗಂಗೆಯಲ್ಲಿ ಮುಳುಗುಹಾಕಿ ಬಂದರು. ಆದರೆ, 'ಇಲ್ಲಿ ಬರಗಾಲ' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಕುಟುಕಿದರು.

'ಗುರಿ ನಿಗದಿ ಮಾಡಲಾಗುವುದು'



ಮಹದೇವಪ್ಪ

ಎಲ್ಲ ಟೀಕೆಗಳನ್ನು ನಗುತ್ತಲೇ ಸ್ವೀಕರಿಸಿ ಮಾತನಾಡಿದ ಮಹದೇವಪ್ಪ, ಗಂಗಾಕಲ್ಯಾಣ ಯೋಜನೆಯ ಗುರಿ ಹೆಚ್ಚಿಸಬೇಕು ಎಂಬುದು ಎಲ್ಲ ಶಾಸಕರ ಬೇಡಿಕೆಯಾಗಿದೆ. ಹೀಗಾಗಿ ಪ್ರತಿಯೊಂದು ಕ್ಷೇತ್ರದಲ್ಲಿ ಹೆಚ್ಚು ಕೊಳವೆಬಾವಿಗಳನ್ನು ಕೊರೆಸಲು ಗುರಿ ನಿಗದಿ ಮಾಡಲಾಗುವುದು. ಗಂಗಾ ಕಲ್ಯಾಣ ಯೋಜನೆಗಾಗಿ 1991 ರಿಂದ ಇಲ್ಲಿಯವರೆಗೆ 70 ಸಾವಿರ ಎಕರೆ ಜಮೀನು ಖರೀದಿ ಮಾಡಿ ಯೋಜನೆ ಕಾರ್ಯಗತ ಮಾಡಲಾಗಿದೆ ಎಂದರು.

ಹಿಂದಿನ ಸರ್ಕಾರದ ಅವಧಿಯಲ್ಲಿ ಹಗರಣ ಆಗಿದ್ದರಿಂದ 18 ಸಾವಿರ ಕೊಳವೆಬಾವಿ ಕೊರೆಯುವುದನ್ನು ಸ್ಥಗಿತಗೊಳಿಸಲಾಗಿತ್ತು. ಅಷ್ಟೂ ಸಂಖ್ಯೆಯ ಕೊಳವೆಬಾವಿ ಕೊರೆಸಲು ಈಗ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಹದೇವಪ್ಪ ಭರವಸೆ ನೀಡಿದರು.

20 ಲಕ್ಷ ನಕಲಿ ಕಾರ್ಮಿಕ ಕಾರ್ಡ್ ರದ್ದು



ಸಂತೋಷ್ ಲಾಡ್

ಕಾರ್ಮಿಕ ಕಲ್ಯಾಣ ಮಂಡಳಿ ವಿತರಿಸಿದ 56 ಲಕ್ಷ ಕಾರ್ಡ್‌ಗಳ ಪೈಕಿ ಸುಮಾರು 20 ಲಕ್ಷಕ್ಕೂ ಹೆಚ್ಚು ನಕಲಿ ಕಾರ್ಡ್‌ಗಳನ್ನು ರದ್ದು ಮಾಡಲಾಗಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ವಿಧಾನಸಭೆಗೆ ತಿಳಿಸಿದರು.

ಕಾರ್ಡ್‌ಗಳ ನೈಜತೆ ಪರಿಶೀಲಿಸಲು ಮನೆ ಮನೆಗೆ ಹೋದಾಗ 20 ಲಕ್ಷಕ್ಕೂ ಹೆಚ್ಚು ಕಾರ್ಡ್‌ಗಳು ನಕಲಿ ಎಂಬುದು ಪತ್ತೆ ಆಯಿತು ಎಂದು ಅವರು ಬಿಜೆಪಿಯ ಮಹೇಶ್ ಟೆಂಗಿನಕಾಯಿ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಮದುವೆ ಪ್ರೋತ್ಸಾಹ ಧನಕ್ಕಾಗಿ 2022 ರಿಂದ ಈವರೆಗೆ 1,57,174 ಅರ್ಜಿಗಳು ಸಲ್ಲಿಕೆ ಆಗಿದ್ದು, ಈ ಪೈಕಿ 1,06,091 ಅರ್ಜಿಗಳಿಗೆ ಪ್ರೋತ್ಸಾಹ ಧನ ಮಂಜೂರಾಗಿದೆ ಎಂದು ಬಿಜೆಪಿಯ ಮಹೇಶ್ ಟೆಂಗಿನಕಾಯಿ ಅವರ ಪ್ರಶ್ನೆಗೆ ತಿಳಿಸಿದರು.

'ಮಾಂಸ, ಮೊಟ್ಟೆ ಬೇಯಿಸಿ ಸೇವಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಕ್ಕಿ ಜ್ವರದ ಬಗ್ಗೆ ಅನಗತ್ಯ ಆತಂಕ ಪಡುವ ಅಗತ್ಯವಿಲ್ಲ. ಆದರೆ, ಕೋಳಿ ಮಾಂಸ ಮತ್ತು ಮೊಟ್ಟೆಯನ್ನು ಚೆನ್ನಾಗಿ ಬೇಯಿಸಿ ಸೇವಿಸಬೇಕು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.



ದಿನೇಶ್

ಈ ಬಗ್ಗೆ 'ಎಕ್ಸ್' ಮಾಡಿರುವ ಅವರು, 'ಹಕ್ಕಿ ಜ್ವರದ ಪ್ರಕರಣಗಳು ರಾಜ್ಯದ ಅಲ್ಲಲ್ಲಿ ವರದಿಯಾಗುತ್ತಿವೆ. ಹಕ್ಕಿ ಜ್ವರ ಸಾಂಕ್ರಾಮಿಕ ಜ್ವರವಾಗಿದೆ. ಕೋಳಿ ಮೊಟ್ಟೆ, ಮಾಂಸ ತಿನ್ನುವಾಗ ಮುನ್ನೆಚ್ಚರಿಕೆ ವಹಿಸಬೇಕು' ಎಂದಿದ್ದಾರೆ.

'ಮಾಂಸವನ್ನು 70 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದಲ್ಲಿ ಅರ್ಧ ಗಂಟೆಗೂ ಹೆಚ್ಚು ಅವಧಿ ಬೇಯಿಸಿ, ಸೇವಿಸಬೇಕು. ಸೋಂಕು ಪೀಡಿತ ಕೋಳಿ ಫಾರಂ, ಮೃತ ಹಕ್ಕಿ ಅಥವಾ ಕೋಳಿಗಳ ಸಮೀಪಕ್ಕೆ ತೆರಳದೆ ಎಚ್ಚರವಹಿಸಬೇಕು' ಎಂದು ಹೇಳಿದ್ದಾರೆ.

ಪೌಷ್ಟಿಕ ಆಹಾರ ಕಳವು ಪ್ರಕರಣ ಆರೋಪಿಗಳ ಬಂಧನದ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧಾರವಾಡದಲ್ಲಿ ಮಕ್ಕಳು ಮತ್ತು ಮಹಿಳೆಯರಿಗೆ ವಿತರಣೆಗಾಗಿ ಪೂರೈಸಿದ್ದ ಪೌಷ್ಟಿಕ ಆಹಾರ ಕಳವು ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪ ಎದುರಿಸುತ್ತಿರುವ ಬೈತುಲ್ಲಾ ಕಿಲ್ಲೇದಾರ ಮತ್ತು ಆಕೆಯ ಪತಿ ಫಾರೂಕ್ ಎಂಬುವವರನ್ನು ಶೀಘ್ರದಲ್ಲಿ ಬಂಧಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದರು.



ಪ್ರಿಯಾಂಕ್ ಖರ್ಗೆ

ವಿಧಾನಸಭೆಯಲ್ಲಿ ಬುಧವಾರ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಮಹೇಶ್ ಟೆಂಗಿನಕಾಯಿ, 'ಈ ಪ್ರಕರಣದಲ್ಲಿ ಅಂಗನವಾಡಿ ಕಾರ್ಯಕರ್ತೆಯರನ್ನು ಬಂಧಿಸಲಾಗಿದೆ. ಆದರೆ, ಪ್ರಮುಖ ಆರೋಪಿ ಬೈತುಲ್ಲಾ ಕಿಲ್ಲೇದಾರ ಮತ್ತು ಫಾರೂಕ್ ಸ್ಥಳದಲ್ಲಿದ್ದರೂ ಬಂಧಿಸಿಲ್ಲ. ಈ ಇಬ್ಬರಿಗೂ ಕಾಂಗ್ರೆಸ್ ನಾಯಕರ ಜೊತೆ ನಂಟಿರುವುದೇ ಇದಕ್ಕೆ ಕಾರಣ' ಎಂದು ದೂರಿದರು.

ತಮ್ಮ ಪಕ್ಷದ ಹೆಸರು ಪ್ರಸ್ತಾಪಿಸಿದ್ದನ್ನು ತೀವ್ರವಾಗಿ ಆಕ್ಷೇಪಿಸಿದ ಕಾಂಗ್ರೆಸ್‌ನ ಪ್ರಸಾದ್ ಅಬ್ಬಯ್ಯ, 'ಕಮಿಷನರ್ ಅವರಿಂದ ಲೋಪವಾಗಿದೆ. ರಾಜಕೀಯ ಬೇಡ, ಪಕ್ಷಾತೀತವಾಗಿ ಹೋರಾಟ ಮಾಡೋಣ' ಎಂದರು.

'ತೊಂದರೆ ಮಾಡಿದರೆ ಕ್ರಮ ಜರುಗಿಸಿ'

'ರಾಜ್ಯದ ವಿವಿಧ ಮಹಾನಗರ ಪಾಲಿಕೆಗಳಲ್ಲಿ ನೀರು ಪೂರೈಕೆ ವಿಭಾಗದಲ್ಲಿ ಹೊರ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನೌಕರರು ತಮ್ಮ ಬೇಡಿಕೆ ಈಡೇರಿಕೆ ಆಗ್ರಹಿಸಿ ಪ್ರತಿಭಟಿಸುವ ಹೆಸರಿನಲ್ಲಿ ಜನರಿಗೆ ತೊಂದರೆ ಮಾಡಿದರೆ ಅವರ ವಿರುದ್ಧ ಮುಲಾಜಿಲ್ಲದೆ ಕ್ರಮ ಜರುಗಿಸಿ' ಎಂದು ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್ ಅವರು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಎಸ್.ಎನ್. ಚನ್ನಬಸಪ್ಪ, 'ನೀರು ಪೂರೈಕೆ ವಿಭಾಗದ ನೌಕರರ ಬೇಡಿಕೆಗಳನ್ನು ತಕ್ಷಣ ಈಡೇರಿಸಿ. ಇಲ್ಲವಾದರೆ ಮಹಾನಗರ ಪಾಲಿಕೆಗಳಲ್ಲಿ ನೀರು ಪೂರೈಕೆ ಸಂಪೂರ್ಣ ಸ್ಥಗಿತಗೊಳ್ಳುತ್ತದೆ' ಎಂದರು.

ಈ ಕುರಿತು ನಗರಾಭಿವೃದ್ಧಿ ಸಚಿವರಿಂದ ಗುರುವಾರ ಉತ್ತರ ಕೊಡಿಸುವುದಾಗಿ ಕಾನೂನು ಸಚಿವ ಎಚ್.ಕೆ. ಪಾಟೀಲ ಭರವಸೆ ನೀಡಿದರು. ಆಗ ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷರು, 'ಸರ್ಕಾರ ನೌಕರರ ಬೇಡಿಕೆಗಳನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳುತ್ತದೆ. ಆದರೆ, ಪ್ರತಿಭಟನೆ ಹೆಸರಿನಲ್ಲಿ ನೀರು ಪೂರೈಕೆ ಸ್ಥಗಿತಗೊಳಿಸಿದರೆ ಅವರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ನಿರ್ದೇಶನ ನೀಡಿದರು.

ವಿಜಯಪುರದಲ್ಲಿ ಎನ್‌ಐಎ ಘಟಕ ಆರಂಭಕ್ಕೆ ಆಗ್ರಹ

ಬೆಂಗಳೂರು: 'ಅಕ್ರಮ ವಲಸಿಗರ ತಡೆ, ಭೂ ಮಾಫಿಯಾ, ಅಕ್ಕಿ ಕಳ್ಳಸಾಗಣೆ ಮಾಫಿಯಾ ಮತ್ತು ನಾಡ ಪಿಸ್ತೂಲ್ ಹಾವಳಿ ತಡೆಗೆ ವಿಜಯಪುರ ಜಿಲ್ಲೆಯಲ್ಲಿ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಘಟಕ ಸ್ಥಾಪನೆಗೆ ಪ್ರಸ್ತಾವ ಸಲ್ಲಿಸಬೇಕು' ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಶೂನ್ಯ ವೇಳೆಯಲ್ಲಿ ಆಗ್ರಹಿಸಿದರು.

ಉತ್ತರ ನೀಡಿದ ಗೃಹ ಸಚಿವ ಜಿ. ಪರಮೇಶ್ವರ, 'ವಿಜಯಪುರದಲ್ಲಿ ಸದ್ಯ ವಿದೇಶಿ ಅಕ್ರಮ ವಲಸಿಗರಿಲ್ಲ. ರಾಜ್ಯ ಇತರೆಡೆ 137 ಮಂದಿಯನ್ನು ಬಂಧಿಸಲಾಗಿದೆ. ಮೂರು ವರ್ಷಗಳಲ್ಲಿ ಭೂ ಮಾಫಿಯಾಕ್ಕೆ ಸಂಬಂಧಿಸಿದ 27 ಮತ್ತು ನಾಡ ಪಿಸ್ತೂಲ್ ಪೂರೈಕೆ ಆರೋಪದ 20 ಪ್ರಕರಣಗಳು ದಾಖಲಾಗಿವೆ. ಎನ್‌ಐಎ ಘಟಕ ಸ್ಥಾಪನೆಗೆ ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಬೇಕಿಲ್ಲ. ಎನ್‌ಐಎ ಅಧಿಕಾರಿಗಳೇ ನಿರ್ಧರಿಸಬೇಕು' ಎಂದರು.

'ಜಲಕ್ಷಾಮ: ಮೇಕೆದಾಟು ಅನಿವಾರ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಜನಸಂಖ್ಯೆ 2030 ರಿಂದ 2050 ರ ವೇಳೆಗೆ 3 ಕೋಟಿಗೆ ಏರಲಿದ್ದು, ಕುಡಿಯುವ ನೀರಿನ ಅಭಾವ ತಪ್ಪಿಸಲು ಮೇಕೆದಾಟು ಯೋಜನೆ ಜಾರಿ ಅನಿವಾರ್ಯ ಎಂದು ಕಾಂಗ್ರೆಸ್‌ನ ಟಿ.ಬಿ.ಜಯಚಂದ್ರ ಅವರು ವಿಧಾನಸಭೆಯಲ್ಲಿ ಪ್ರತಿಪಾದಿಸಿದರು.



ಜಯಚಂದ್ರ

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮಂಡಿಸಿ ಮಾತನಾಡಿದ ಅವರು, ಇದಕ್ಕಾಗಿ ಕೇಂದ್ರ ಸರ್ಕಾರ ಮತ್ತು ಪ್ರಧಾನಿ ಮೋದಿಯವರ ಮೇಲೆ ಒತ್ತಡ ಹೇರಲು ಎಲ್ಲರೂ ಒಗ್ಗಟ್ಟಾಗಿ ಕೇಂದ್ರದ ಬಳಿ ಹೋಗಬೇಕು ಎಂದರು.

ಬೆಂಗಳೂರು ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಅಂತರ್ಜಲದ ಪ್ರಮಾಣ ತೀವ್ರ ಕುಸಿಯುತ್ತಿದೆ. ಪಕ್ಷಭೇದ ಮರೆತು ಈ ಸಮಸ್ಯೆಯ ಬಗ್ಗೆ ಗಮನಹರಿಸಬೇಕಿದೆ. ಮೇಕೆದಾಟು ಯೋಜನೆ ಜಾರಿ ಆದರೆ 67 ಟಿಎಂಸಿ ಅಡಿ ನೀರು ಸಿಗುತ್ತದೆ ಎಂದರು.

ಕೃಷಿ ಉತ್ಪನ್ನಗಳನ್ನು ಸಂಸ್ಕರಿಸಿ ವಿದೇಶಗಳಿಗೆ ರಫ್ತು ಮಾಡಲು ಏಳು ಫುಡ್ ಪಾರ್ಕ್ ಸ್ಥಾಪಿಸಲು ನಿರ್ಧರಿಸಲಾಗಿತ್ತು. ಆದರೆ ಇದು ನನೆಗುದಿಗೆ ಬಿದ್ದಿರುವುದು ದುರದೃಷ್ಟಕರ. ಯೋಜನೆ ಮುಂದುವರಿಸಲು ಅನುದಾನ ನೀಡಬೇಕು ಎಂದು ಹೇಳಿದರು.

ಕೆರಳಿದ ನಯನಾ ಮೋಟಮ್ಮ



ನಯನಾ

ಕೇಂದ್ರವು ರಾಜ್ಯಕ್ಕೆ ನೀಡುವ ತೆರಿಗೆ ಪಾಲಿನಲ್ಲಿ ಅನ್ಯಾಯ ಮಾಡುತ್ತಿದೆ ಮತ್ತು ರಾಜ್ಯದಲ್ಲಿ ಹಿಂದಿ ಹೇರಿಕೆ ಮಾಡುತ್ತಿದೆ ಎಂದು ಕಾಂಗ್ರೆಸ್‌ನ ನಯನಾ ಮೋಟಮ್ಮ ಆರೋಪಿಸಿದ್ದು ಬಿಜೆಪಿ ಸದಸ್ಯರನ್ನು ಕೆರಳಿಸಿತು.

ನಯನಾ ಅವರ ಆರೋಪಗಳಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ ಸದಸ್ಯರು ಕಾಂಗ್ರೆಸ್ ಸದಸ್ಯರ ಜತೆ ವಾಗ್ವಾದ ನಡೆಸಿದರು. 'ನಯನಾ ಅವರು ಮೊದಲ ಬಾರಿಗೆ ಶಾಸಕಿಯಾಗಿದ್ದಾರೆ. ಮಾತನಾಡಲು ಬಿಡಿ' ಎಂದು ಕಾಂಗ್ರೆಸ್‌ನ ಪಿ.ಎಂ. ನರೇಂದ್ರ ಸ್ವಾಮಿ ಹೇಳಿದರು. ಆಗ ಬಿಜೆಪಿಯ ಉಮಾನಾಥ್ ಕೋಟ್ಯಾನ್ ಅವರು, 'ಮೊದಲ ಬಾರಿ ಗೆದ್ದು ಬಂದರೂ ಇತಿ ಮಿತಿಯಲ್ಲಿ ಮಾತನಾಡಬೇಕು' ಎಂದು ಹೇಳಿದ್ದು ನಯನಾ ಅವರನ್ನು ಕೆರಳಿಸಿತು.

'ಬೆಳಗಾವಿ ಗದ್ದಲ– ಹಕ್ಕುಚ್ಯುತಿ ಸಮಿತಿಗೆ'

ಬೆಂಗಳೂರು: ಬೆಳಗಾವಿ ಚಳಿಗಾಲದ ಅಧಿವೇಶನದ ಕೊನೆಯ ದಿನ ಸುವರ್ಣ ವಿಧಾನಸೌಧದ ಒಳಗೆ ಪ್ರತಿಭಟನೆ ನಡೆಸಿದ ಬಿಜೆಪಿ ಸದಸ್ಯರ ಮೇಲೆ ದೌರ್ಜನ್ಯ ಎಸಗಿದ ಪೊಲೀಸರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಆಗ್ರಹಿಸಿದರು.

ಸುವರ್ಣವಿಧಾನಸೌಧ ಒಳಗೆ ಬಂದ ಪೊಲೀಸರು ಬಿಜೆಪಿ ಸದಸ್ಯರನ್ನು ವಶಕ್ಕೆ ಪಡೆದಿದ್ದರು. 'ಪೊಲೀಸರು ಹೇಗೆ ಒಳಗಡೆ ಬಂದರು? ಹೀಗಾದರೆ, ಸದಸ್ಯರಿಗೆ ರಕ್ಷಣೆ ಕೊಡುವವರು ಯಾರು? ಇದು ಹಕ್ಕು ಚ್ಯುತಿ ಅಲ್ಲವೇ? ಪೊಲೀಸರ ಮೇಲೆ ಕ್ರಮ ಆಗಬೇಕು' ಎಂದು ನಾರಾಯಣ ಸ್ವಾಮಿ ಒತ್ತಾಯಿಸಿದರು. ಆಗ ಸಭಾ ನಾಯಕ ಎನ್.ಎಸ್. ಬೋಸರಾಜು 'ಯಾವ ನಿಯಮದ ಅಡಿ ಈ ವಿಷಯ ಪ್ರಸ್ತಾಪಿಸುತ್ತಿದ್ದೀರಿ' ಎಂದು ಆಕ್ಷೇಪಿಸಿದರು. ಮಧ್ಯಪ್ರವೇಶಿಸಿದ ಸಭಾಪತಿ ಬಸವರಾಜ ಹೊರಟ್ಟಿ, 'ಈ ಪ್ರಕರಣವನ್ನು ಈಗಾಗಲೇ ಹಕ್ಕು ಚ್ಯುತಿ ಸಮಿತಿಗೆ ವಹಿಸಿದ್ದೇನೆ' ಎಂದು ಹೇಳಿದರು.

ಅರ್ಚಕರ ವೇತನ ತಾರತಮ್ಯ ನಿವಾರಣೆಗೆ ಸಮಿತಿ ರಚನೆ

ಮುಜರಾಯಿ ದೇವಸ್ಥಾನಗಳ ಅರ್ಚಕರ ವೇತನ ತಾರತಮ್ಯ ನಿವಾರಣೆ ಕುರಿತು ಪರಿಶೀಲಿಸಿ, ವರದಿ ನೀಡಲು ನಿವೃತ್ತ ನ್ಯಾಯಾಧೀಶ ನೇತೃತ್ವದ ಸಮಿತಿ ರಚಿಸಲಾಗುವುದು ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಪ್ರತಾಪ್‌ಸಿಂಹ ನಾಯಕ್ ಪ್ರಶ್ನೆಗೆ ಉತ್ತರ ನೀಡಿದ ಅವರು, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ ಜಾರಿಗೂ ಮೊದಲು ಅರ್ಚಕರಾಗಿದ್ದವರು ಸರ್ಕಾರಿ ವೇತನ ಶ್ರೇಣಿಯನ್ನು ಪಡೆಯುತ್ತಿದ್ದಾರೆ. 2019ರ ತಿದ್ದುಪಡಿ ಕಾಯ್ದೆಯ ನಂತರ ಹೊರಡಿಸಿದ ಆದೇಶದಂತೆ ಅರ್ಚಕರಿಗೆ ಸರ್ಕಾರದ ವೇತನ ಶ್ರೇಣಿ ಸಿಗುತ್ತಿಲ್ಲ. ಆಯಾ ದೇವಸ್ಥಾನಗಳ ಒಟ್ಟು ಆದಾಯದಲ್ಲಿ ಶೇ 35 ಮೀರದಂತೆ ಗೌರವಧನ ನಿಗದಿ ಮಾಡಲಾಗುತ್ತದೆ. ಇಂತಹ ನಿಯಮಗಳಿಂದ ಅರ್ಚಕರಿಗೆ ಸಮಾನ ವೇತನ–ಗೌರವಧನ ಪಡೆಯಲು ಸಾಧ್ಯವಾಗಿಲ್ಲ ಎಂದರು.

ಎಲ್ಲ ದೇವಸ್ಥಾನಗಳ ಅರ್ಚಕರ ವೇತನ–ಗೌರವಧನ, ಪ್ರಸ್ತುತ ಇರುವ ದಿನಗೂಲಿ, ಹಂಗಾಮಿ, ನಿಗದಿತ ವೇತನ ಪದ್ಧತಿ ಆಧಾರದ ಎಲ್ಲ ನೇಮಕಾತಿಗಳ ಕುರಿತು ಅಧ್ಯಯನ ನಡೆಸಿ, ವರದಿ ನೀಡಿದ ನಂತರ ತಾರತಮ್ಯ ನಿವಾರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಡಿಸಿಸಿಬಿ ಹಗರಣಕ್ಕಿಲ್ಲ 'ಲೋಕಾ' ತನಿಖೆ

ಚಿಕ್ಕಬಳ್ಳಾಪುರ, ಕೋಲಾರ ಸಹಕಾರ ಕೇಂದ್ರ ಬ್ಯಾಂಕ್‌ಗಳಲ್ಲಿ ನಡೆದ ಹಣ ದುರುಪಯೋಗ ಪ್ರಕರಣವನ್ನು ಲೋಕಾಯುಕ್ತಕ್ಕೆ ವಹಿಸುವ ಅಗತ್ಯವಿಲ್ಲ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಜೆಡಿಎಸ್‌ನ ಗೋವಿಂದರಾಜು ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಎರಡೂ ಜಿಲ್ಲೆಗಳ ಸಹಾಯಕ ನಿಬಂಧಕರು ತನಿಖೆ ನಡೆಸಿ ವರದಿ ಸಲ್ಲಿಸಿದ್ದಾರೆ. ವರದಿ ಆಧಾರದಲ್ಲಿ ವಸೂಲಾತಿಗೆ ಕ್ರಮಕೈಗೊಳ್ಳಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಅನ್ವಯ ಆರೋಪ ಎಸಗಿದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು, ತಪ್ಪಿತಸ್ಥರನ್ನು ಅನರ್ಹಗೊಳಿಸಲಾಗುವುದು ಎಂದರು.

ಕಾಡುಗೊಲ್ಲರಿಗೆ ಎಲ್ಲ ಜಿಲ್ಲೆಗಳಲ್ಲೂ ಪ್ರಮಾಣಪತ್ರ

ತುಮಕೂರು, ಚಿತ್ರದುರ್ಗ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಕಾಡುಗೊಲ್ಲರಿಗೆ ಪ್ರಮಾಣ ಪತ್ರ ವಿತರಿಸುವಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಹೇಳಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಕೆ.ಎಂ.ಶಿವಲಿಂಗೇಗೌಡ ಅವರ ಪ್ರಶ್ನೆಗೆ ಉತ್ತರಿಸಿ, 'ಕಾಡುಗೊಲ್ಲರಿಗೆ ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಎಂಟು ವರ್ಷಗಳ ಹಿಂದೆಯೇ ಕೇಂದ್ರಕ್ಕೆ ಶಿಫಾರಸು ಮಾಡಲಾಗಿತ್ತು. ಕೆಲವು ಸ್ಪಷ್ಟನೆ ಕೇಳಿ ಕಡತ ವಾಪಸ್ ಬಂದಿದೆ. ಈ ಸ್ಪಷ್ಟನೆಗಳಿಗೆ ಸಮಾಜ ಕಲ್ಯಾಣ ಇಲಾಖೆ ಜತೆ ಸೇರಿ ಸೂಕ್ತ ಉತ್ತರವನ್ನು ಕೇಂದ್ರಕ್ಕೆ ಒದಗಿಸಲಾಗುವುದು' ಎಂದು ಹೇಳಿದರು.

ಅಧಿವೇಶನದಲ್ಲಿ....

ವಿದ್ಯಾರ್ಥಿ ನಾಪತ್ತೆ: ಹುಡುಕಿಸಿ ಕೊಡಲು ಸುನಿಲ್‌ಕುಮಾರ್ ಆಗ್ರಹ

ಬೆಂಗಳೂರು: ಮಂಗಳೂರು ಸಮೀಪದ ಪರಂಗೀಪೇಟೆಯಲ್ಲಿ ದ್ವಿತೀಯ ಪಿಯು ವಿದ್ಯಾರ್ಥಿ ದಿಗಂತ್ ನಾಪತ್ತೆಯಾಗಿ 9 ದಿನ ಕಳೆದರೂ ಪತ್ತೆ ಮಾಡಲು ಸಾಧ್ಯವಾಗಿಲ್ಲ. ಆದಷ್ಟು ಬೇಗ ಹುಡುಕಿಸಿ-ಕೊಡಬೇಕು ಎಂದು ಬಿಜೆಪಿಯ ವಿ.ಸುನಿಲ್‌ಕುಮಾರ್ ಆಗ್ರಹಿಸಿದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಸುನಿಲ್ ಕುಮಾರ್, ಪರೀಕ್ಷೆಯ ಹಾಲ್‌ಟಿಕೆಟ್ ಪಡೆಯಲು ಹೋಗಿ ವಾಪಸ್ ಬರುವಾಗ ನಾಪತ್ತೆ ಆಗಿದ್ದಾನೆ. ಈ ವಿಚಾರ ಎಲ್ಲರಲ್ಲೂ ಆತಂಕ ಹುಟ್ಟಿಸಿದೆ. ಬೇಗನೆ ಪತ್ತೆ ಮಾಡುವಂತೆ ಒತ್ತಾಯಿಸಿ ಪ್ರತಿಭಟನೆಯೂ ನಡೆದಿದೆ. ಇದೊಂದು ಅತ್ಯಂತ ಸೂಕ್ಷ್ಮ ವಿಷಯ ಊಹಾಪೋಹಗಳಿಗೂ ಕಾರಣವಾಗಬಹುದು. ವಿಶೇಷ ತಂಡ ರಚನೆ ಮಾಡಿ ಪತ್ತೆ ಮಾಡಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಸಭಾಧ್ಯಕ್ಷ ಯು.ಟಿ.ಖಾದರ್ ಧ್ವನಿಗೂಡಿಸಿದರು.

ಗೃಹ ಸಚಿವರ ಪರವಾಗಿ ಉತ್ತರ ನೀಡಿದ ಶಿಕ್ಷಣ ಸಚಿವ ಮಧುಬಂಗಾರಪ್ಪ, ಈಗಾಗಲೇ 7 ತಂಡಗಳನ್ನು ರಚನೆ ಮಾಡಿ ಪತ್ತೆ ಕಾರ್ಯ ಆರಂಭಿಸಲಾಗಿದೆ. ಒಂದು ಸ್ಥಳದಲ್ಲಿ ವಿದ್ಯಾರ್ಥಿ ಮೊಬೈಲ್ ಫೋನ್ ಮತ್ತು ಚಪ್ಪಲಿ ಸಿಕ್ಕಿದೆ. ಡ್ರೋನ್ ಮೂಲಕವೂ ಹುಡುಕುವ ಪ್ರಯತ್ನ ನಡೆದಿದೆ. ಯಾವುದೇ ರೀತಿಯ ಸುಳಿವು ಸಿಕ್ಕಿಲ್ಲ ಎಂದರು.

'ಮಾರ್ಚ್ ಅಂತ್ಯಕ್ಕೆ 39,000 ಮನೆ'


ಪ್ರಧಾನ ಮಂತ್ರಿ ವಸತಿ ಯೋಜನೆ ಅಡಿಯಲ್ಲಿ ಮಾರ್ಚ್ ಅಂತ್ಯದ ವೇಳೆಗೆ 39,000 ಮನೆಗಳನ್ನು ಹಸ್ತಾಂತರ ಮಾಡಲಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಸೇರಿ ಸುಮಾರು ₹3 ಲಕ್ಷದಷ್ಟು ಸಹಾಯಧನ ನೀಡುತ್ತಿದ್ದು, ಉಳಿದ ₹4.50 ಲಕ್ಷವನ್ನು ಫಲಾನುಭವಿಗಳೇ ಭರಿಸಬೇಕು. ಈ ಮೊತ್ತವನ್ನು ಹೊಂದಿಸಲೂ ಕಷ್ಟವಾಗುತ್ತಿರುವವರಿಗೆ ನೆರವು ನೀಡುವ ಮತ್ತು ರಾಜ್ಯ ಸರ್ಕಾರದ ಸಹಾಯಧನವನ್ನು ₹3 ಲಕ್ಷಕ್ಕೆ ಹೆಚ್ಚಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ.

ಬಿಜೆಪಿಯ ಧನಂಜಯ ಸರ್ಜಿ ಪ್ರಶ್ನೆಗೆ ವಸತಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಉತ್ತರ

'ವರ್ಷದಲ್ಲಿ ಮುಜರಾಯಿ ಜಮೀನು ಇಂಡೀಕರಣ'

ರಾಜ್ಯದಲ್ಲಿ ಮುಜರಾಯಿ ವ್ಯಾಪ್ತಿಗೆ ಸೇರಿದ ಸುಮಾರು 35,000 ಎಕರೆಗಳಷ್ಟು ಜಮೀನಿದೆ. ಈಗ ಒಟ್ಟು 15,413 ಎಕರೆಗಳಷ್ಟು ಜಮೀನಿನ ಇಂಡೀಕರಣ ಮುಗಿಸಿದ್ದೇವೆ. ಒತ್ತುವರಿಗಳನ್ನು ತೆರವು ಮಾಡಿದ್ದೇವೆ. ಸರ್ಕಾರದ ಹೆಸರಿನಲ್ಲಿ ಇದ್ದುದನ್ನು ಮುಜರಾಯಿಗೆ ವರ್ಗಾಯಿಸಿದ್ದೇವೆ. ಇನ್ನೂ 20,000 ಎಕರೆಗಳ ಇಂಡೀಕರಣ ಬಾಕಿ ಇದ್ದು, ಪೂರ್ಣಗೊಳಿಸಲು ಒಂದು ವರ್ಷವಾಗುತ್ತದೆ.

ಕಾಂಗ್ರೆಸ್‌ನ ಕೆ.ಅಬ್ದುಲ್ ಜಬ್ಬಾರ್ ಪ್ರಶ್ನೆಗೆ ಧಾರ್ಮಿಕ ದತ್ತಿ ಸಚಿವ ರಾಮಲಿಂಗಾರೆಡ್ಡಿ ಉತ್ತರ



ಪರಿಷತ್ತಿನ ಪ್ರಶ್ನೋತ್ತರ

'ಸಂಪುಟದ ಒಪ್ಪಿಗೆ ಇಲ್ಲದೆ ಕಾರ್ಯಾದೇಶ'

ಕಂದಾಯ ಇಲಾಖೆಯಲ್ಲಿ ಕಂಪ್ಯೂಟರ್ ಆಪರೇಟರಿಂಗ್ ಸೇವೆಯನ್ನು ಸಿಎಂಎಸ್ ಕಂಪನಿಗೆ ಗುತ್ತಿಗೆ ನೀಡಿದ್ದು, ನೌಕರರ ನಿರ್ವಹಣೆ ಅವರದ್ದೇ ಹೊಣೆ. ಈ ಹಿಂದಿನ ಬಿಜೆಪಿ ಸರ್ಕಾರ ₹406 ಕೋಟಿಗಷ್ಟೇ ಸಂಪುಟದ ಒಪ್ಪಿಗೆ ಪಡೆದು, ಸಿಎಂಎಸ್ ಕಂಪನಿಗೆ ₹649 ಕೋಟಿಯ ಕಾರ್ಯಾದೇಶ ನೀಡಿದೆ. ಇದರಿಂದಲೇ ಕಂಪನಿಗೆ ಹಣ ಬಿಡುಗಡೆಯಾಗಿಲ್ಲ. ಹೀಗಿದ್ದೂ ವೇತನಕ್ಕೆಂದು ₹20 ಕೋಟಿ ನೀಡಿದ್ದೇವೆ.

ಬಿಜೆಪಿಯ ಚಿದಾನಂದ ಎಂ.ಗೌಡ ಪ್ರಶ್ನೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಉತ್ತರ



ಪ್ಲಾಸ್ಟಿಕ್ ಬಳಕೆ ಇಡ್ಲಿಗಷ್ಟೇ ಅಲ್ಲ

ಬಿಸಿ ಆಹಾರ ಪದಾರ್ಥಗಳ ಪಾರ್ಸೆಲ್‌ಗೆ ಪ್ಲಾಸ್ಟಿಕ್ ಚೀಲ ಬಳಕೆ ಅವ್ಯಾಹತ

ಇಡ್ಲಿ ಬೇಯಿಸಲು ಪ್ಲಾಸ್ಟಿಕ್ ಬಳಸುವುದನ್ನು ನಿಷೇಧಿಸಿ ರಾಜ್ಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯು ಆದೇಶ ಹೊರಡಿಸಿದೆ. ಹೋಟೆಲ್‌ಗಳಲ್ಲಿ ಪ್ಲಾಸ್ಟಿಕ್ ಹಾಳೆಗಳ ಬಳಕೆ ವ್ಯಾಪಕ ಆಗಿರುವುದರಿಂದ ಇದು ಅಗತ್ಯವಾದ ಕ್ರಮವಾಗಿತ್ತು. ಆದರೆ, ಪ್ಲಾಸ್ಟಿಕ್ ಬಳಕೆ ಇಡ್ಲಿ ಬೇಯಿಸಲು ಮಾತ್ರ ಸೀಮಿತವಾಗಿಲ್ಲ. ಆಹಾರ ತಯಾರಿಕೆ, ಅದರ ಸಾಗಣೆ ಮುಂತಾದ ಕಾರಣಗಳಿಗಾಗಿ ಪ್ಲಾಸ್ಟಿಕ್ ಅನ್ನು ಎಲ್ಲೆಡೆ ಎಗ್ಗಿಲ್ಲದೇ ಬಳಸಲಾಗುತ್ತಿದ್ದು, ಇದು ಸಹಜ ಪದ್ಧತಿ ಎನ್ನುವಂತಾಗಿದೆ. ಸಾರ್ವಜನಿಕರ ಆರೋಗ್ಯದ ಮೇಲೆ ಇದು ಗಂಭೀರ ದುಷ್ಪರಿಣಾಮ ಬೀರುತ್ತಿದೆ

ಪ್ರಜಾವಾಣಿ ವಾರ್ತೆ

ಇಡ್ಲಿ ಬೇಯಿಸಲು ಪ್ಲಾಸ್ಟಿಕ್ ಬಳಸುವುದನ್ನು ರಾಜ್ಯದಲ್ಲಿ ನಿಷೇಧಿಸಿರುವುದರ ಬೆನ್ನಹಿಂದೆಯೇ ಆಹಾರ ತಯಾರಿ ಮತ್ತು ಬಳಕೆಯ ವಿವಿಧ ಹಂತಗಳಲ್ಲಿ ಪ್ಲಾಸ್ಟಿಕ್ ಬಳಸುವ ವಿಚಾರವು ಮುನ್ನೆಲೆಗೆ ಬಂದಿದೆ. ಹೋಟೆಲ್, ರೆಸ್ಟೋರೆಂಟ್, ಫಾಸ್ಟ್‌ಫುಡ್ ಮಳಿಗೆಗಳು, ಫುಡ್ ಟ್ರಕ್, ಬಾರ್ ಮುಂತಾದ ಸ್ಥಳಗಳಲ್ಲಿ ಪ್ಲಾಸ್ಟಿಕ್ ಅನ್ನು ಅವ್ಯಾಹತವಾಗಿ ಬಳಸಲಾಗುತ್ತಿದೆ. ಪಾಲಿಥೀನ್ ಮತ್ತು ಪ್ಲಾಸ್ಟಿಕ್ ಚೀಲಗಳಿಲ್ಲದೇ ಆಹಾರದ ಉದ್ಯಮವೇ ಇಲ್ಲ ಎನ್ನುವ ಪರಿಸ್ಥಿತಿ ಇದೆ.

ಬಿಸಿಯಾದ ಅನ್ನ, ಸುಡುವ ಸಾಂಬಾರ್, ಹಬೆಯಾಡುವ ಕಾಫಿ–ಟೀ, ಹಾಲು ಮುಂತಾದವನ್ನು ಹೋಟೆಲ್‌ಗಳು/ಆಹಾರ ಮಳಿಗೆಗಳು ಪ್ಲಾಸ್ಟಿಕ್ ಚೀಲಗಳಲ್ಲಿ ಹಾಕಿ ಪಾರ್ಸೆಲ್ ಮಾಡುವುದು ಈಗ ಅತ್ಯಂತ ಸಾಮಾನ್ಯ ವಿದ್ಯಮಾನ. ಹಾಗೆಯೇ, ಹೋಟೆಲ್‌ನಲ್ಲಿ ತಿನ್ನುವಾಗಲೂ ತಟ್ಟೆಯಲ್ಲಿ ಪ್ಲಾಸ್ಟಿಕ್ ಹಾಳೆ ಹರಡಿ ಅದರ ಮೇಲೆ ಬಿಸಿಯಾದ ಇಡ್ಲಿ, ಸಾಂಬಾರ್ ಮುಂತಾದ ಪದಾರ್ಥಗಳನ್ನು ಹಾಕಿ ಗ್ರಾಹಕರಿಗೆ ಕೊಡಲಾಗುತ್ತಿದೆ. ಕಾಫಿ–ಟೀ ಅನ್ನು ಪ್ಲಾಸ್ಟಿಕ್‌ನಿಂದ ಮಾಡಿದ ಲೋಟಗಳಲ್ಲಿ ನೀಡಲಾಗುತ್ತಿದೆ.

ಬಿಸಿಯಾದ ಆಹಾರದ ಪಾರ್ಸೆಲ್‌ಗಾಗಿ ಪ್ಲಾಸ್ಟಿಕ್ ಬಳಸುವುದೇ ಅಪಾಯಕಾರಿ. ಅದರಲ್ಲೂ ಬಹುತೇಕ ಹೋಟೆಲ್, ಅಂಗಡಿ, ರೆಸ್ಟೋರೆಂಟ್‌ಗಳಲ್ಲಿ ನಿಷೇಧಿತ ಏಕಬಳಕೆಯ, ಕಡಿಮೆ ಗುಣಮಟ್ಟದ ಪ್ಲಾಸ್ಟಿಕ್ ಚೀಲಗಳನ್ನು ಬಳಸಲಾಗುತ್ತಿದ್ದು, ಪ್ಲಾಸ್ಟಿಕ್‌ಗಳಲ್ಲಿರುವ ವಿಷಕಾರಿ ಅಂಶಗಳು ಜನರ ಹೊಟ್ಟೆ ಸೇರುತ್ತಿವೆ.

ಶಾಖಕ್ಕೆ ಒಡ್ಡಿದಾಗ ಪ್ಲಾಸ್ಟಿಕ್‌ನಲ್ಲಿರುವ ರಾಸಾಯನಿಕಗಳು ಹೆಚ್ಚಿನ ಪ್ರಮಾಣದಲ್ಲಿ ಹೊರಬರುತ್ತವೆ. ಬಿಸಿ ಆಹಾರ ಪದಾರ್ಥಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿದಾಗ ಎರಡರ ನಡುವೆ ಅತಿ ಹೆಚ್ಚಿನ ರಾಸಾಯನಿಕ ವಿನಿಮಯ ನಡೆಯುತ್ತದೆ. ಅದರಿಂದ ಆಹಾರ ಪದಾರ್ಥದ ಸ್ವರೂಪವೇ ಬದಲಾಗುವ ಸಾಧ್ಯತೆ ಇದೆ. ಆಹಾರ ಪದಾರ್ಥಗಳೊಂದಿಗೆ ಅಪಾಯಕಾರಿ ರಾಸಾಯನಿಕಗಳು ಸೇರಿ, ಅನೇಕ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತವೆ.

ಹೀಗೆ ಬಿಸಿಯಾದ ಅನ್ನ, ಸಾಂಬಾರ್, ಕಾಫಿ–ಟೀ, ಮುಂತಾದ ಪದಾರ್ಥಗಳನ್ನು ನಿರಂತರವಾಗಿ ಪ್ಲಾಸ್ಟಿಕ್ ಚೀಲಗಳಲ್ಲಿ ಪಾರ್ಸೆಲ್ ಮಾಡಿಸಿಕೊಂಡು ಬಳಸುತ್ತಿದ್ದ ಛತ್ತೀಸಗಢ, ಆಂಧ್ರಪ್ರದೇಶ, ಒಡಿಶಾದ ನೂರಾರು ಮಂದಿ ಕಿಡ್ನಿ, ಗಂಟಲು ಸಮಸ್ಯೆ, ಕ್ಯಾನ್ಸರ್, ಬಂಜೆತನ ಮುಂತಾದ ಕಾಯಿಲೆಗಳಿಗೆ ಒಳಗಾಗಿ ಮುಂಬೈನ ಕಿಂಗ್ ಜಾರ್ಜ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ವರದಿಯಾಗಿತ್ತು.

ಹೋಳಿಗೆ ತಯಾರಿಸುವಾಗಲೂ ಏಕಬಳಕೆ ಪ್ಲಾಸ್ಟಿಕ್ ಬಳಸಲಾಗುತ್ತಿದೆ. ಹಾಲನ್ನು ಬಿಸಿ ಮಾಡುವಾಗ, ಅದರ ಪ್ಯಾಕೆಟ್ ಒಡೆದು, ಹಾಲನ್ನು ಪಾತ್ರೆಗೆ ಹಾಕಿ ಕುದಿಸುವುದು ರೂಢಿ. ಆದರೆ, ಇತ್ತೀಚೆಗೆ ಕೆಲವು ಕಡೆಗಳಲ್ಲಿ, ಹಾಲಿನ ಪ್ಯಾಕೆಟ್ ಅನ್ನೇ ನೇರವಾಗಿ ಕುದಿಯುವ ನೀರಿಗೆ ಹಾಕಿ, ಆ ಪ್ಲಾಸ್ಟಿಕ್ ಪ್ಯಾಕೆಟ್‌ನಲ್ಲೇ ಹಾಲು ಕುದಿಯುವಂತೆ ಮಾಡಲಾಗುತ್ತಿದೆ.

ಕರಿದ ತಿಂಡಿಗಳನ್ನು ತಯಾರಿಸಲು ಬಾಣಲೆಗೆ ಎಣ್ಣೆ ಹಾಕುವಾಗ, ಕೆಲವು ಆಹಾರ ತಯಾರಕರು ಅಡುಗೆ ಎಣ್ಣೆಯ ಪ್ಲಾಸ್ಟಿಕ್ ಪ್ಯಾಕೆಟ್ ಕತ್ತರಿಸದೆ, ಪ್ಯಾಕೆಟ್ ಅನ್ನು ನೇರವಾಗಿ ಕಾದಿರುವ ಬಾಣಲೆಗೆ ಒತ್ತಿ ಹಿಡಿದು ಪ್ಲಾಸ್ಟಿಕ್‌ನ ತಳಭಾಗ ಕರಗಿ ಪ್ಯಾಕೆಟ್ ಒಡೆಯುವಂತೆ ಮಾಡುವುದು ಕೂಡ ಅಲ್ಲಲ್ಲಿ ಕಾಣಸಿಗುತ್ತಿದೆ. ಇವೆಲ್ಲವೂ ಆಹಾರದೊಂದಿಗೆ ಪ್ಲಾಸ್ಟಿಕ್‌ನಲ್ಲಿರುವ ಹಾನಿಕಾರಕ ರಾಸಾಯನಿಕ ಬೆರೆಯುವಂತೆ ಮಾಡುತ್ತಿವೆ.

ಇವು ಕೆಲವು ಉದಾಹರಣೆಗಳಷ್ಟೇ, ಆಹಾರ ತಯಾರಿಕಾ ವಲಯದಲ್ಲಿ ಪ್ಲಾಸ್ಟಿಕ್ ಹಲವು ರೀತಿಯಲ್ಲಿ ಬಳಕೆಯಾಗುತ್ತಿದೆ. ಗೊತ್ತಿದ್ದೋ, ಗೊತ್ತಿಲ್ಲದೆಯೋ ಜನರು ವಿಷಕಾರಿ ಆಹಾರವನ್ನು ತಿಂದು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ.

ಆಧಾರ: ಎಫ್‌ಎಸ್‌ಎಸ್‌ಎಐ ನಿಯಮಾವಳಿಗಳು, ಬಿಬಿಸಿ, ಪಿಐಬಿ

ಕಾಗದದ ಕಪ್ ಸುರಕ್ಷಿತವಲ್ಲ



ಹೋಟೆಲ್, ಚಹಾ ಅಂಗಡಿಗಳು, ಸಮಾರಂಭಗಳಲ್ಲಿ ಚಹಾ, ಪಾನೀಯಗಳನ್ನು ಕಾಗದದಿಂದ ತಯಾರಿಸಿದ ಲೋಟ/ಕಪ್‌ಗಳಲ್ಲಿ ನೀಡಲಾಗುತ್ತಿದೆ (ಇವು ಏಕಬಳಕೆಯ ಕಪ್‌ಗಳು). ಈ ಕಪ್‌ಗಳು ಪರಿಸರಸ್ನೇಹಿ, ಆರೋಗ್ಯಸ್ನೇಹಿ ಎಂದು ಪ್ರತಿಪಾದಿಸಲಾಗುತ್ತದೆ. ಆದರೆ, ಈ ಪೇಪರ್ ಕಪ್‌ಗಳು ಕೂಡ ಸುರಕ್ಷಿತವಲ್ಲ ಎಂದು ಹೇಳುತ್ತಾರೆ ಸಂಶೋಧಕರು.

ಬಿಸಿಯನ್ನು ತಾಳಿಕೊಳ್ಳಲು, ಸೋರಿಕೆ ತಡೆಯಲು ಈ ಕಾಗದದ ಲೋಟ/ಕಪ್‌ಗಳಲ್ಲಿ ತೆಳುವಾದ ಪ್ಲಾಸ್ಟಿಕ್‌ನ ಪದರ ಹಾಕಲಾಗುತ್ತದೆ. ಬಿಸಿ ಚಹಾ, ಪಾನೀಯವನ್ನು ಕಪ್‌ಗೆ ಹಾಕಿದಾಗ ಅದರ ಬಿಸಿಗೆ ಪ್ಲಾಸ್ಟಿಕ್‌ನಲ್ಲಿರುವ ರಾಸಾಯನಿಕಗಳು ಕರಗಿ ಚಹಾ, ಪಾನೀಯದೊಂದಿಗೆ ಬೆರೆಯುತ್ತವೆ. ಇದು ಆರೋಗ್ಯಕ್ಕೆ ಹಾನಿಕರ ಎಂದು ಐಐಟಿ ಖರಗ್‌ಪುರದ ಅಧ್ಯಯನಕಾರರು 2020ರಲ್ಲಿ ನಡೆಸಿದ್ದ ಅಧ್ಯಯನ ಹೇಳಿದೆ.

ಕಾಗದದಲ್ಲಿ ಆಹಾರ: ಒಳ್ಳೆಯದಲ್ಲ

ಬಜ್ಜಿ, ಬೋಂಡಾ ಸೇರಿದಂತೆ ವಿವಿಧ ಆಹಾರ ಪದಾರ್ಥಗಳನ್ನು, ತಿಂಡಿ–ತಿನಿಸುಗಳನ್ನು ಹಳೆಯ ಪತ್ರಿಕೆ, ನಿಯತಕಾಲಿಕ ಸೇರಿದಂತೆ ಮುದ್ರಿತ ಕಾಗದಗಳಲ್ಲಿ ಹಾಕಿ ಕೊಡುವ, ಕಟ್ಟಿಕೊಡುವ ಪ್ರವೃತ್ತಿ ಇತ್ತೀಚೆಗೆ ಹೆಚ್ಚುತ್ತಿದೆ. ಆರೋಗ್ಯದ ದೃಷ್ಟಿಯಿಂದ ಇದು ಕೂಡ ಅಪಾಯಕಾರಿ ಎಂದು ಹೇಳುತ್ತಾರೆ ತಜ್ಞರು.

ಪತ್ರಿಕೆಗಳಲ್ಲಿ/ಮುದ್ರಿತ ಹಾಳೆಗಳಲ್ಲಿ ಇರುವ ಶಾಯಿಯು ವಿಷಕಾರಿ. ಶಾಯಿ ತಯಾರಿಕೆಗೆ ಸೀಸದಂತಹ ಲೋಹಗಳನ್ನು ಬಳಸಲಾಗುತ್ತಿದ್ದು, ಇದು ಆರೋಗ್ಯಕ್ಕೆ ಅಪಾಯಕಾರಿ. ಬಿಸಿ ಅಥವಾ ಎಣ್ಣೆಯಲ್ಲಿ ಕರಿದ ಆಹಾರ ಪದಾರ್ಥಗಳನ್ನು ಮುದ್ರಿತ ಕಾಗದದಲ್ಲಿ ಕಟ್ಟಿದಾಗ, ಅದರ ಶಾಖಕ್ಕೆ ಶಾಯಿಯಲ್ಲಿರುವ ರಾಸಾಯನಿಕಗಳು ಕರಗಿ ಆಹಾರ ಪದಾರ್ಥದೊಂದಿಗೆ ಬೆರೆಯುತ್ತವೆ. ಇಂತಹ ಆಹಾರ ಸೇವನೆ ಕ್ಯಾನ್ಸರ್‌ನಂತಹ ಕಾಯಿಲೆ ತರಬಹುದು.





ಆರೋಗ್ಯಕ್ಕೆ ಹೇಗೆ ಹಾನಿ?

ಪ್ಲಾಸ್ಟಿಕ್ ಬಿಸಿಯಾದಾಗ ಅದರಿಂದ ಬಿಡುಗಡೆಯಾಗುವ ರಾಸಾಯನಿಕಗಳು ಆಹಾರವನ್ನು ಸೇರಿ ಅದನ್ನು ವಿಷಪೂರಿತವನ್ನಾಗಿ ಮಾಡುತ್ತವೆ. ಅಂತಹ ಆಹಾರ ಸೇವನೆ ಮನುಷ್ಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಅಧ್ಯಯನಗಳಲ್ಲೂ ಇದು ಸಾಬೀತಾಗಿದೆ.

ಪ್ಲಾಸ್ಟಿಕ್ ತಯಾರಿಕೆಯಲ್ಲಿ ಹಲವು ರಾಸಾಯನಿಕ ವಸ್ತುಗಳು ಬಳಕೆಯಾಗುತ್ತವೆಯಾದರೂ ಎರಡು ವಸ್ತುಗಳ ಬಗ್ಗೆ ವಿಜ್ಞಾನಿಗಳು ಪ್ರಮುಖವಾಗಿ ಬೆಳಕು ಚೆಲ್ಲಿದ್ದಾರೆ. ಒಂದು ಥಾಲೇಟ್ (phthalate) ಮತ್ತು ಇನ್ನೊಂದು ಬಿಸ್ಫೆನಾಲ್ ಎ (ಬಿಪಿಎ). ಪ್ಲಾಸ್ಟಿಕ್ ಅನ್ನು ಮೆದುಗೊಳಿಸಲು ಥಾಲೇಟ್ ಬಳಸಲಾಗುತ್ತದೆ. ಗಟ್ಟಿಯಾದ ಪ್ಲಾಸ್ಟಿಕ್ ತಯಾರಿಸಲು ಬಿಪಿಎಯನ್ನು ಬಳಸಲಾಗುತ್ತದೆ. ಈ ಎರಡು ರಾಸಾಯನಿಕ ವಸ್ತುಗಳು ಮನುಷ್ಯನ ಆರೋಗ್ಯಕ್ಕೆ ಹೆಚ್ಚು ಹಾನಿಕಾರಕ. ಇವುಗಳು ದೇಹದ ಹಾರ್ಮೋನ್‌ಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಇದರಿಂದಾಗಿ ಹಾರ್ಮೋನ್‌ಗಳ ಅಸಮತೋಲನ ಉಂಟಾಗಿ, ಸಹಜ ಬೆಳವಣಿಗೆ, ಫಲವಂತಿಕೆ ಮತ್ತು ಸಂತಾನೋತ್ಪತ್ತಿಯ ಮೇಲೂ ಪರಿಣಾಮವಾಗುತ್ತದೆ.

ಪ್ಲಾಸ್ಟಿಕ್‌ನಲ್ಲಿರುವ ರಾಸಾಯನಿಕಗಳು ಜೀರ್ಣಾಂಗ ವ್ಯವಸ್ಥೆಗೂ ಹಾನಿ ಮಾಡುತ್ತವೆ. ನರವ್ಯೂಹ ವ್ಯವಸ್ಥೆಗೂ ಧಕ್ಕೆ ತರುತ್ತವೆ. ಅಲ್ಲದೇ, ಇವು ವಿವಿಧ ರೀತಿಯ ಕ್ಯಾನ್ಸರ್‌ಗೂ ಕಾರಣವಾಗಬಹುದು ಎಂದು ಎಚ್ಚರಿಸುತ್ತಾರೆ ತಜ್ಞರು.

ಎಫ್‌ಎಸ್‌ಎಸ್‌ಎಐ ನಿಯಮವೇನು?


ಆಹಾರ ಉದ್ಯಮದಲ್ಲಿ ಪ್ಲಾಸ್ಟಿಕ್ ಬಳಕೆ ಬಗ್ಗೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ತನ್ನ 2011, 2018ರ ನಿಯಮಾವಳಿಗಳಲ್ಲಿ ಉಲ್ಲೇಖಿಸಿದೆ. ‘ಫುಡ್ ಗ್ರೇಡ್’ ವಸ್ತುಗಳನ್ನು ಬಳಸಬೇಕು ಎಂದು ಅದು ಹೇಳುತ್ತದೆ. ಏಕ ಬಳಕೆ ಪ್ಲಾಸ್ಟಿಕ್ ಬಳಕೆ ನಿರ್ಬಂಧಿಸುತ್ತದೆ. ಪ್ಲಾಸ್ಟಿಕ್ ವಸ್ತುಗಳನ್ನು ಪ್ಯಾಕೇಜಿಂಗ್‌ಗೆ ಮಾತ್ರ ಬಳಸಬೇಕು ಎಂದಿರುವ ಪ್ರಾಧಿಕಾರ, ಯಾವ ಪ್ಲಾಸ್ಟಿಕ್ ವಸ್ತುಗಳನ್ನು ಬಳಸಬಹುದು ಎಂದೂ ಹೇಳಿದೆ.

ಅವುಗಳೆಂದರೆ, ಪಾಲಿಎಥಿಲೀನ್ (ಪಿಇ), ಪಾಲಿವಿನೈಲ್ ಕ್ಲೋರೈಡ್ (ಪಿವಿಸಿ), ಪಾಲಿಆಲ್ಕೈಲೀನ್ ಟೆರೆಥಾಲೇಟ್ (ಪಿಇಟಿ ಆಂಡ್ ಪಿಬಿಟಿ), ಪಾಲಿ ಸ್ಟೈರೀನ್, ಪಾಲಿಪ್ರೊಪೈಲೀನ್ (ಪಿಪಿ), ಲೀನಿಯರ್ ಲೋ ಡೆನ್ಸಿಟಿ ಪಾಲಿಎಥಿಲೀನ್ (ಎಲ್‌ಎಲ್‌ಡಿಪಿಇ) ಫಿಲ್ಮ್, ಹೈ ಡೆನ್ಸಿಡಿ ಪಾಲಿಎಥಿಲೀನ್ (ಎಚ್‌ಡಿಇಐ), ಎಥಿಲೀನ್ ಆಕ್ರಿಲಿಕ್ ಆ್ಯಸಿಡ್ (ಇಎಎ) ಕೋಪೊಲಿಮರ್ಸ್, ಎಥಿಲೀನ್ ವಿನೈಲ್ ಅಸಿಟೇಟ್ ಕೊಪೋಲಿಮರ್ಸ್, ಪಾಲಿಕಾರ್ಬೋನೇಟ್ ರೆಸಿನ್ಸ್.

ಈ ಪ್ಲಾಸ್ಟಿಕ್ ವಸ್ತುಗಳು ಆಹಾರದ ಸಂಪರ್ಕಕ್ಕೆ ಬಂದಾಗ ಅವುಗಳಿಂದ ಬಿಡುಗಡೆಯಾಗುವ ರಾಸಾಯನಿಕ ಅಥವಾ ಇತರ ದ್ರವ್ಯಗಳ (ಬೇರಿಯಂ, ಕಬ್ಬಿಣ, ತಾಮ್ರ, ಕೋಬಾಲ್ಟ್ ಇತ್ಯಾದಿ) ಪ್ರಮಾಣದ ಬಗ್ಗೆಯೂ ಅದು ಮಿತಿ ಹೇರಿದೆ.

ಸಿನಿ ಬಿಟ್ಸ್

‘ಬಿಂಗೊ’ ಶೀಘ್ರದಲ್ಲಿ ತೆರೆಗೆ



ರಾಗಿಣಿ

ಈ ಹಿಂದೆ ‘ಶಂಭೋ ಶಿವಶಂಕರ’ ಚಿತ್ರ ನಿರ್ದೇಶಿಸಿದ್ದ ಶಂಕರ್ ಕೋನಮಾನಹಳ್ಳಿ ನಿರ್ದೇಶಿಸಿರುವ ‘ಬಿಂಗೊ’ ಶೀಘ್ರದಲ್ಲಿ ತೆರೆಗೆ ಬರಲಿದೆ. ಆರ್.ಕೆ.ಚಂದನ್ ಹಾಗೂ ರಾಗಿಣಿ ದ್ವಿವೇದಿ ಜೋಡಿಯಾಗಿ ನಟಿಸಿದ್ದಾರೆ.

‘ಈಗಾಗಲೇ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಕ್ತಾಯಗೊಂಡಿವೆ. ಆಡಿಯೊ ಹಕ್ಕು ಕೂಡ ಮಾರಾಟಗೊಂಡಿದ್ದು, ಸದ್ಯದಲ್ಲೇ ಹಾಡುಗಳನ್ನು ಬಿಡುಗಡೆಗೊಳಿಸುತ್ತೇವೆ’ ಎಂದಿದ್ದಾರೆ ನಿರ್ದೇಶಕರು.

ಹಿತನ್ ಹಾಸನ್ ಸಂಗೀತ ನೀಡಿದ್ದು, ಮೂರು ಹಾಡುಗಳಿವೆ. ಆರ್.ಕೆ ಸ್ಟುಡಿಯೊಸ್ ಮತ್ತು ಮುತರಾ ವೆಂಚರ್ಸ್ ಚಿತ್ರವನ್ನು ನಿರ್ಮಿಸಿದೆ. ರಾಜೇಶ್ ನಟರಂಗ, ಪವನ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ನಟರಾಜ್ ಮುದ್ದಾಲ್ ಛಾಯಾಚಿತ್ರಗ್ರಹಣವಿದೆ.

‘ಓಂ ಸತ್ಯಂ ಶಿವಂ’ ಶೀರ್ಷಿಕೆ ಅನಾವರಣ



ಶೀರ್ಷಿಕೆ ಅನಾವರಣಗೊಳಿಸಿದ ಮನೋಹರ್

ಗೌತಮ್ ರವಿ ನಿರ್ದೇಶಿಸಿ ನಿರ್ಮಾಣ ಮಾಡುತ್ತಿರುವ ಸಿನಿಮಾದ ಶೀರ್ಷಿಕೆಯನ್ನು ಸಂಗೀತ ನಿರ್ದೇಶಕ ವಿ.ಮನೋಹರ್ ಇತ್ತೀಚೆಗೆ ಅನಾವರಣಗೊಳಿಸಿದರು.

ಚಿತ್ರಕ್ಕೆ ‘ಓಂ ಸತ್ಯಂ ಶಿವಂ’ ಎಂಬ ಟೈಟಲ್ ಇಡಲಾಗಿದೆ. ಚಿತ್ರದಲ್ಲಿ ಆದಿಯೋಗಿ ಶಿವನ ಪುತ್ಥಳಿ ಅತ್ಯಂತ ಪ್ರಮುಖ ಪಾತ್ರವಾಗಿದೆ. ಈ ಸಿನಿಮಾ ಫ್ಯಾಂಟಸಿ ಹಾಗೂ ಸೈನ್ಸ್ ಫಿಕ್ಷನ್ ಜಾನರ್‌ನಲ್ಲಿದೆ ಎಂದಿದೆ ಚಿತ್ರತಂಡ. ಕಿರುತೆರೆ ಹಾಗೂ ಕಿರುಚಿತ್ರಗಳಲ್ಲಿ ಕಾರ್ಯನಿರ್ವಹಿಸಿ ಅನುಭವ ಹೊಂದಿರುವ ಗೌತಮ್ ನಿರ್ದೇಶಿಸುತ್ತಿರುವ ಚೊಚ್ಚಲ ಸಿನಿಮಾ ಇದಾಗಿದೆ.

ಚಿತ್ರದ ತಾರಾಬಳಗ ಇನ್ನಷ್ಟೇ ಅಂತಿಮವಾಗ ಬೇಕಿದ್ದು, ಜೂನ್‌ನಿಂದ ಚಿತ್ರೀಕರಣ ಆರಂಭಿಸುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆ. ಬೆಂಗಳೂರು, ಮೈಸೂರು ಹಾಗೂ ಉಡುಪಿಯಲ್ಲಿ ಚಿತ್ರದ ಚಿತ್ರೀಕರಣ ನಡೆಯಲಿದೆ. ತರುಣ್ ಸೈಮಂಡ್ಸ್ ಸಂಗೀತ ಚಿತ್ರಕ್ಕಿರಲಿದೆ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕಲ್ಲಂಗಡಿ ಹಣ್ಣಿಗೆ ಸೂಜಿಯ ಮೂಲಕ ರಾಸಾಯನಿಕಗಳನ್ನು ಸೇರಿಸುತ್ತಿರುವ ಯುವಕನೊಬ್ಬನ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಘಟನೆಯ ಸಂಬಂಧ ಆಯುಷ್ ವರ್ಮಾ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಪ್ರಚಾರ ಮಾಡಲಾಗುತ್ತಿದೆ. ಪೋಸ್ಟ್ ಹಂಚಿಕೊಳ್ಳುತ್ತಿರುವ ಕೆಲವರು, ಹಿಂದೂ ಯುವಕನೊಬ್ಬ ರಂಜಾನ್ ಸಂದರ್ಭದಲ್ಲಿ ಕಲ್ಲಂಗಡಿ ಹಣ್ಣಿಗೆ ರಾಸಾಯನಿಕ ಸೇರಿಸುತ್ತಿದ್ದು, ಮುಸ್ಲಿಮರು ಎಚ್ಚರಿಕೆಯಿಂದ ಇರಬೇಕು ಎಂದು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಅದರ ಕೀಫ್ರೇಮ್‌ಗಳು ‘ಇಂಡಿಯಾ ಟುಡೆ’ ಪತ್ರಿಕೆಯಲ್ಲಿ 2024ರ ಮೇನಲ್ಲಿ ಪ್ರಕಟವಾಗಿರುವ ವರದಿಗೆ ಸಂಪರ್ಕ ಕಲ್ಪಿಸಿದವು. ವರದಿಯ ಪ್ರಕಾರ, ಕಲ್ಲಂಗಡಿ ಹಣ್ಣಿಗೆ ರಾಸಾಯನಿಕಗಳನ್ನು ಸೇರಿಸುವ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ‘ದಿ ಸೋಷಿಯಲ್ ಜಂಕ್ಷನ್’ ಎನ್ನುವ ಯು ಟ್ಯೂಬ್ ವಾಹಿನಿಯು ಈ ವಿಡಿಯೊ ಅನ್ನು ಸೃಷ್ಟಿಸಿದೆ ಎಂದು ಉಲ್ಲೇಖಿಸಲಾಗಿದೆ. ಮತ್ತಷ್ಟು ಹುಡುಕಿದಾಗ, ಯು ಟ್ಯೂಬ್ ವಾಹಿನಿಯಲ್ಲಿ ಈ ವಿಡಿಯೊ 2024ರ ಏ.29ರಂದು ಅಪ್‌ಲೋಡ್ ಆಗಿರುವುದು ಕಂಡುಬಂತು. ‘ಈ ವಿಡಿಯೊ ಅನ್ನು ಜನಜಾಗೃತಿಯ ಸಲುವಾಗಿ ರೂಪಿಸಲಾಗಿದ್ದು, ಇದರಲ್ಲಿ ಬರುವ ಘಟನೆಗಳು ಕಾಲ್ಪನಿಕ’ ಎಂದು ವಿಡಿಯೊದಲ್ಲಿ ಉಲ್ಲೇಖಿಸಲಾಗಿದೆ. ಹಳೆಯ ವಿಡಿಯೊಕ್ಕೆ ಧ್ವನಿಯನ್ನು ಸೇರಿಸಿ, ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಬದಲಾವಣೆ ಜಗದ ನಿಯಮ



ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

146

ನೀವು ಸಂಜೆ ಹೊತ್ತಿಗೆ ಎಲ್ಲೋ ಹೊರಟಿದ್ದೀರಿ. ಮಬ್ಬುಗತ್ತಲು. ದಾರಿಯಲ್ಲಿ ಏನೋ ಅಂಕುಡೊಂಕಾಗಿ ಬಿದ್ದಿದ್ದು ಕಂಡು ಹೌಹಾರಿದಿರಿ. ಮೈಯಲ್ಲಿ ಬೆವರು ಬಂತು. ಆಗಲೇ ಅದೇ ದಾರಿಯಲ್ಲಿ ಬರುತ್ತಿದ್ದ ವ್ಯಕ್ತಿಯೊಬ್ಬ ಬ್ಯಾಟರಿ ಬಿಟ್ಟು ನೋಡಿ ‘ಲೇ ಹುಚ್ಚಾ ಅದು ಹಾವಲ್ಲ. ಹಗ್ಗ’ ಎಂದರು. ಹಗ್ಗ ಹಾವಿನಂತೆ ಕಂಡಿದ್ದು ಸುಳ್ಳಲ್ಲ. ನೀವು ಬೆದರಿದ್ದೂ ಸುಳ್ಳಲ್ಲ. ಬೆವರು ಬಂದಿದ್ದೂ ಹೌದು. ಕಂಡಿಲ್ಲೇನು? ಕಂಡೈತಿ. ಐತೇನು? ಇಲ್ಲ. ಅಂದರ ಇಲ್ಲಿ ಯಾವುದು ಕಾಣತೈತಿ ಅದು ಇರೋದಿಲ್ಲ. ಯಾವುದು ಕಾಣೋದಿಲ್ಲ ಅದು ಇರತೈತಿ. ಇದು ಜಗತ್ತಿನ ವೈಶಿಷ್ಟ್ಯ.

ನೀವು ಆಡುಭಾಷೆಯಲ್ಲಿಯೂ ಹೇಳುತ್ತೀರಿ ನೋಡಿ. ‘ಅವರು ಹಾಂಗ ಕಾಣುತ್ತಾರೆ. ಆದರೆ ಅವರು ಹಾಂಗೆ ಇಲ್ಲ’ ಅಂತ. ಅವರು ಅಂತ ಅಲ್ಲ. ಜಗತ್ತೇ ಹೀಗೆ. ಒಬ್ಬರು ಅಂತ ಅಲ್ಲ. ಎಲ್ಲರದ್ದೂ ಅಷ್ಟೆ. ಕಂಡಂಗೆ ಯಾರೂ ಇರೋದಿಲ್ಲ. ಝೆನ್ ಬುದ್ಧಿಸಂ ನಲ್ಲಿ ಒಬ್ಬ ಶಿಷ್ಯ ಗುರುಗಳ ಬಳಿಗೆ ಹೋಗಿ ಪ್ರಶ್ನೆ ಮಾಡಿದ. ‘ಗುರುಗಳೇ ಏನಿದು ಜೀವನ? ಎಷ್ಟು ತಾಪತ್ರಯಗಳು, ದುಃಖಗಳು ಈ ಜಗತ್ತಿನಲ್ಲಿ? ಒಮ್ಮೆ ಸುಖ ಅನ್ನಿಸುತ್ತದೆ. ಇನ್ನೊಮ್ಮೆ ದುಃಖ ಅನಿಸುತ್ತದೆ. ಏನು ಮಾಡಬೇಕು ಅಂತ ಗೊತ್ತಾಗೋದಿಲ್ಲ. ನಾನು ವ್ಯವಹಾರ ಮಾಡೋ ಮನುಷ್ಯ. ನಿಮ್ಮ ಹಾಗೆ ದಿನಾ ಓದುತ್ತಾ ಕುಳಿತುಕೊಳ್ಳಲು ಆಗಲ್ಲ. ಅದಕ್ಕೆ ಒಂದು ಮಾತು ಹೇಳಿ. ನನಗೆ ಅತ್ಯಂತ ದುಃಖ ಆದಾಗ ನಿಮ್ಮ ಮಾತನ್ನು ನೆನಪಿಸಿಕೊಂಡರೆ ಸುಖ ಆಗಬೇಕು. ಸುಖದಲ್ಲಿಯೂ ನಿಮ್ಮ ಮಾತನ್ನು ನೆನಪಿಸಿಕೊಂಡರೂ ಸಮಾಧಾನ ಆಗಬೇಕು. ಆ ರೀತಿಯ ಒಂದೇ ಒಂದು ಮಾತು ಹೇಳಬೇಕು’ ಎಂದು ಕೇಳಿದ. ಅದಕ್ಕೆ ಗುರುಗಳು ‘ನಿನಗೆ ಸುಖ ಆದರೂ ಬರಲಿ, ದುಃಖ ಆದರೂ ಬರಲಿ. ಸಮಾಧಾನಕ್ಕೆ ಮಂತ್ರ ಒಂದೆ. ‘ಇದು ಬದಲಾಗುತ್ತದೆ. ಏನಿದೆಯೋ ಇದು ಬದಲಾಗುತ್ತದೆ. ಇಷ್ಟೇ ಸೂತ್ರ’ ಎಂದು ಹೇಳಿದರು.

ವೇದ, ಮಂತ್ರ, ವಚನ ಯಾವುದನ್ನು ನೆನಪಿನಲ್ಲಿಡಬೇಕಾಗಿಲ್ಲ. ‘ಇದು ಬದಲಾಗುತ್ತದೆ’ ಅನ್ನೋದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಯಾರಾದರೂ ನಿಮ್ಮನ್ನು ನೋಡಿ ಕೈಮುಗಿದರು ಎಂದರೆ ಅದು ಬದಲಾಗುತ್ತದೆ. ಯಾರಾದರೂ ನಿಮ್ಮ ಜೊತೆ ಜಗಳವಾಡಿದರೂ ಇದು ಬದಲಾಗುತ್ತದೆ ಅಂದುಕೊಳ್ಳಬೇಕು. ಎಲ್ಲದಕ್ಕೂ ಇದು ಮಂತ್ರ. ಯಾಕೆಂದರೆ ಬದಲಾವಣೆಯೇ ಜಗದ ನಿಯಮ. ಈ ಜಗತ್ತಿನಲ್ಲಿ ಸತ್ಯ ಅನ್ನುವುದು ಇಲ್ಲ. ಬದಲಾವಣೆ ಮಾತ್ರ ಸತ್ಯ. ಇದನ್ನು ಅರಿತು ಬದುಕುವವರಿಗೆ ಶರಣರು ಎನ್ನುತ್ತಾರೆ. ಮರೆತು ಬದುಕಿದರೆ ಮಾನವರಾಗುತ್ತಾರೆ.

ಜೀವನ ಅಂದರೆ ಜೋಕಾಲಿ ಇದ್ದಂಗೆ. ಒಮ್ಮೆ ಈ ಕಡೆ ಒಮ್ಮೆ ಆ ಕಡೆ. ಜೋಕಾಲಿಗೆ ಇವ ಶ್ರೀಮಂತ, ಅವ ಬಡವ ಅನ್ನುವುದು ಇಲ್ಲ. ತೂಗುವುದಷ್ಟೇ ಕೆಲಸ ಅದರದ್ದು. ಕಷ್ಟದಿಂದ ಸುಖದ ಕಡೆ, ಮಾನದಿಂದ ಅಪಮಾನದ ಕಡೆ, ಅಪಮಾನದಿಂದ ಸನ್ಮಾನದ ಕಡೆ, ಹುಟ್ಟಿನಿಂದ ಸಾವಿನ ಕಡೆ, ಸಾವಿನಿಂದ ಹುಟ್ಟಿನ ಕಡೆ ತಿರುಗಾಡುವ ಜೀವನವೇ ಒಂದು ಉಯ್ಯಾಲೆ. ಈ ಆವರ್ತನ ಗೊತ್ತಿರಬೇಕು. ಜೀವನ ಎಂದ ಮೇಲೆ ಹೆಚ್ಚು ಕಡಿಮೆ ಆಗತೈತಿ. ಧೀರನಂತೆ ಬದುಕಬೇಕು. ಧೀರ ಎಂದರೆ ಜ್ಞಾನಿ, ಸಂತ. ತಿಳಿದು ಬದುಕಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಮಾರ್ಚ್ 6, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಸಪ್ತಮಿ ಗಂ. 10-51 ನಕ್ಷತ್ರ: ರೋಹಿಣಿ ಗಂ. 24-06 ಯೋಗ: ವಿಷ್ಕಂಭ ಗಂ. 20-29 ಕರಣ: ವಣಿಜ ಗಂ. 10-51, ಕುಂಭ ಮಾಸದ 22 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 1.

ರಾಹುಕಾಲ: ಮಧ್ಯಾಹ್ನ 01-30 – 03-00

ಸೂರ್ಯೋದಯ: 06-47 **ಸೂರ್ಯಾಸ್ತ:** 06-37

ಮುಸ್ಲಿಂ ದಿನಾಂಕ: 05 ರಂಜಾನ್

ದಿನ ವಿಶೇಷ: ಹೋಲಾಷ್ಟಕ, ಅದೃಷ್ಟ ಸಂಖ್ಯೆ: 2, 6

ಮೇಷ: ಸಾಮಾಜಿಕ ಕ್ಷೇತ್ರದಲ್ಲಿ ಸಮರ್ಥ ಕಾರ್ಯನಿರ್ವಹಣೆ ಕೆಟ್ಟ ಜನರ ದೃಷ್ಟಿ ದೋಷಕ್ಕೆ ಕಾರಣವಾಗುವುದು. ಉದ್ವೇಗ ಹಾಗೂ ಕೆಲ ವೈಮನಸ್ಯಗಳು ದೂರಾಗುವುದು. ಸಗಟು ವ್ಯಾಪಾರಿಗಳಿಗೆ ಒಳ್ಳೆಯ ಸಮಯ.

ವೃಷಭ: ಮರಗೆಲಸ ಮಾಡುವ ವಿಶ್ವಕರ್ಮರಿಗೆ ಉದ್ಯೋಗದಲ್ಲಿ ಕೀರ್ತಿ, ಹೆಸರು ಸಂಪಾದನೆಯಾಗುವುದು. ಏಜೆನ್ಸಿಯಂಥ ಉದ್ಯೋಗ ತೆರೆಯಲು ಸೂಕ್ತ ಸ್ಥಳದ ಹುಡುಕಾಟದ ಕೆಲಸ ಆರಂಭಿಸುವಿರಿ.

ಮಿಥುನ: ಕುಟುಂಬದಲ್ಲಿ ನಡೆಯುವ ಶುಭಸಮಾರಂಭಗಳ ಸಂಭ್ರಮವು ಹಿರಿಯರ ಮನಸ್ಸಿಗೆ ಸಂತೋಷ, ನೆಮ್ಮದಿ ತರುತ್ತದೆ. ಹವ್ಯಾಸಿ ಬರಹಗಾರರಿಗೆ ಹೇರಳ ಅವಕಾಶಗಳು ಇರುವುದು. ಸಂಜೆ ಶಿರೋವೇದನ ಕಾಡಲಿದೆ.

ಕರ್ಕಾಟಕ: ಕೆಲಸಕ್ಕೆ ಇಂದು ಹತ್ತಿರದವರಿಂದ ಅಡೆತಡೆ ಉಂಟಾಗಲಿದ್ದು, ಭಕ್ತಿಯಿಂದ ಮಹಾಗಣಪತಿಯನ್ನು ಆರಾಧಿಸಿದಲ್ಲಿ ನಿವಾರಿಸಿಕೊಳ್ಳಬಹುದು. ಕೌಟುಂಬಿಕ ಕಲಹಗಳು ಎದುರಾಗದಂತೆ ನೋಡಿಕೊಳ್ಳಿ.

ಸಿಂಹ: ಪಾಕಪ್ರವೀಣರಿಗೆ ವೃತ್ತಿಯಲ್ಲಿ ಹೆಸರು ಸಂಪಾದನೆ ಮಾಡುವ ಕಾಲ ಒದಗಿಬರಲಿದೆ. ಈ ದಿನ ನಿಮ್ಮ ಕೆಲಸಕಾರ್ಯಗಳಿಗೆ ಅಪೇಕ್ಷಿಸಿದ ಬೆಂಬಲ ದೊರೆಯಲಿದೆ. ಮದುವೆ ಕೆಲಸಗಳಿಗಾಗಿ ಓಡಾಟ ನಡೆಸುವಿರಿ.

ಕನ್ಯಾ: ವ್ಯವಹಾರಿಕ ಜೀವನದ ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಸೂಕ್ತ ದಿನ. ಹಿಂದೆ ಮಾಡಿದ ತಪ್ಪು ಪುನರಾವರ್ತನೆ ಆಗದಂತೆ ಎಚ್ಚರ ವಹಿಸಿದರೆ ಲೇಸು.

ತುಲಾ: ಭೂಮಿಯ ಅದರಲ್ಲೂ ಕೃಷಿ ಭೂಮಿಯ ಖರೀದಿ, ಮಾರಾಟದಂತಹ ವ್ಯವಹಾರದಿಂದ ಅಧಿಕ ಲಾಭ. ದಾರಿಗೆದುರಾಗಿ ಉತ್ತಮ ಅವಕಾಶಗಳು ನಿಮ್ಮನ್ನು ಹುಡುಕಿ ಬರಲಿವೆ. ತ್ಯಾಗದ ಮನೋಭಾವ ಬೆಳೆಸಿಕೊಳ್ಳುವಿರಿ.

ವೃಶ್ಚಿಕ: ವೈದ್ಯರು ನೀಡಿದ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸುವುದರಿಂದ ಆರೋಗ್ಯವನ್ನು ಹಿಡಿತದಲ್ಲಿ ಇರಿಸಿಕೊಳ್ಳಬಹುದು. ಯಶಸ್ಸಿಗೆ ಇನ್ನೊಂದಿಷ್ಟು ಪೂರಕ ವಾತಾವರಣ ಮೂಡಿಬರಲಿದೆ. ನೆಮ್ಮದಿ ಇರಲಿದೆ.

ಧನು: ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹಾಗೂ ಪಕ್ಷನಿಷ್ಠೆ, ಸೇವಾ ಮನೋಭಾವದಿಂದ ಅಧಿಕಾರ ಪಡೆದುಕೊಳ್ಳುವಿರಿ. ಅಧಿಕಾರದ ಮದದಲ್ಲಿ ಹಿರಿಯರಿಗೆ ಅಗೌರವ ಉಂಟುಮಾಡುವ ಮಾತುಗಳನ್ನು ಆಡದಿರಿ.

ಮಕರ: ದಾನ-ಧರ್ಮ ಪ್ರವೃತ್ತಿಯಿಂದ ಕೆಲವು ಶುಭ ಫಲಗಳು ಅನುಭವಕ್ಕೆ ಬರಲಿವೆ. ಲೋಹ, ಪ್ಲಾಸ್ಟಿಕ್ ವಸ್ತುಗಳ ವ್ಯಾಪಾರ ನಡೆಸುವವರಿಗೆ ಅಧಿಕ ಮಾರಾಟ ಮತ್ತು ವ್ಯವಹಾರದಲ್ಲಿ ಲಾಭ ಇರಲಿದೆ.

ಕುಂಭ: ಮಾತಿನಿಂದ ಕಾರ್ಯ ಸಾಧಿಸುವ ಗುಣದಿಂದ ಅನುಕೂಲಕರ ವಾತಾವರಣ ಕಾಣುವಿರಿ. ವ್ಯಕ್ತಿಯ ರೂಪವನ್ನು ನೋಡಿ ಮರುಳುಗೊಂಡು,- ಗುಣದ ಪರಿಚಯವನ್ನು ಹೊಂದಿ ಅವರಿಂದ ಅಂತರ ಕಾಯ್ದುಕೊಳ್ಳುವಿರಿ.

ಮೀನ: ಬುದ್ಧಿವಂತಿಕೆಯ ಅಥವಾ ಕ್ಷಿಪ್ರ ನಡವಳಿಕೆಯ ಕೊರತೆಯಿಂದ ಸಮಸ್ಯೆಯಲ್ಲಿ ಸಿಲುಕುವ ಸಂಭವವಿರುವುದು. ಸರ್ಕಾರಿ ಗುತ್ತಿಗೆದಾರರಿಗೆ ಬಹಳ ದಿನದಿಂದ ಬಾಕಿ ಇದ್ದ ಕಾಮಗಾರಿ ಹಣ ಮಂಜೂರಾಗಲಿದೆ.

ಪದಬಂಧ 5973


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ಅಮೋನಿಯಾ ಮತ್ತು ಕ್ಲೋರಿನ್ ಸಂಯೋಗದಿಂದಾದ ಕ್ಷಾರ (5)
5.ಮುನಿದು ಕುಳಿತಿರುವ ಅಜ್ಜ (3)
7.ಸರಸ ವಿರಸ ಸಮನಾಗಿರುವಿಕೆ (4)
9.ಯುದ್ಧ ಭೂಮಿಯಿದು (4)
10.ಆನೆ ನಡೆಸುವವನು (3)
11.ಬಹಿರಂಗವಲ್ಲ!ಒಳಮನಸ್ಸು! (4)
13.ಮನಸ್ಸಿನ ಬಯಕೆ (4)
15.ಪ್ರಾಧಿಕಾರದ ಸುತ್ತವಿರುವ ಪೌಳಿ (3)
16.ರಜದಲ್ಲಿ ಆಚರಿಸಿದ ಬೆಳ್ಳಿ ಹಬ್ಬ (5)

ಮೇಲಿಂದ ಕೆಳಕ್ಕೆ

1.ಅದೇ ತಾನೆ ಬಿರಿದ ಹೂವು (4)
2.ಹಗುರವಲ್ಲದ್ದು ಇದು (2)
3.ಚತುರರಾಡುವ ಒಳಾಂಗಣದ ಆಟ (4)
6. ತಮ್ಮನಿಗೆ ಈ ತರಹ ಬೇಧಭಾವವೇ? (4)
8.ಗಮ ಗಮ ಎನ್ನುತ್ತಲೇ ಸೇರುವಿಕೆ (4)
12.ತರತರದ ಕಾಯಿಪಲ್ಲೆ (4)
14.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
16.ವಿರಮಿಸುವಾಗ ಮೂಡಿದ ಸೂರ್ಯ (2)



5972ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮೂರ್ತಿ 2.ಚಕ್ಕುಬಂದಿ
4.ಕಡಿವಾಣ 6.ರುದ್ರಭೂಮಿ
8.ರಾವುತ 9.ಸಂಹಿತೆ
11.ಸಮಂಜಸ 13.ಮಧುಕರ
14.ಮಹತ್ತರ 15.ಗಣಿ

ಮೇಲಿಂದ ಕೆಳಕ್ಕೆ:
1.ಮೂಷಿಕ 2.ಚರಣ
3.ಬಂದರು 5.ಡಿಕಾವು
7.ಮಿಡಿತ 8.ರಾಯಸ
10.ಹಿರೀಕ 12.ಸನಿಹ
13.ಮಸೂರ 14.ಮಣೆ

ಸುಡೊಕು 6358

	3		4			2		7
7		4		3				
			1			8		3
				4				
3		2	9		1			
				6				2
1		8	3		4		2	
						9		8
6		9		2			3	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6357 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

ಷೇರುಪೇಟೆ ವಹಿವಾಟು 740



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,082
ಇಂದಿನ ಅಂತ್ಯ	22,337
▲	254
ದಿನದ ಗರಿಷ್ಠ	22,394

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹430

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1420 (1430)
ಸೋಯಾ (ರಿಫೈನ್ಡ್)	₹1315 (1325)
ಸೂರ್ಯಕಾಂತಿ (ರಿಫೈನ್ಡ್)	₹1425 (1430)
ಪಾಮೋಲಿನ್	₹1360 (1360)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹189
ಆರ್‌ಎಸ್‌ಎಸ್-5	₹183
ಗುಡ್ ಲಾಟ್	₹178

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹550-695
ದ್ವಿತಳಿ (ಬಿ.ವಿ)	₹333-860

ಸೇವಾ ಚಟುವಟಿಕೆ ಸದೃಢ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಯು ಫೆಬ್ರುವರಿ ತಿಂಗಳಲ್ಲಿ ಸದೃಢವಾದ ಬೆಳವಣಿಗೆ ದಾಖಲಿಸಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ ವರದಿ ಬುಧವಾರ ತಿಳಿಸಿದೆ.

ಜನವರಿಯಲ್ಲಿ ಸೂಚ್ಯಂಕವು 56.5 ದಾಖಲಾಗಿತ್ತು. ಫೆಬ್ರುವರಿಯಲ್ಲಿ 59.0 ದಾಖಲಾಗಿದೆ. ದೇಶೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿದ ಬೇಡಿಕೆಯು ಈ ವಲಯದ ವಿಸ್ತರಣೆಗೆ ಉತ್ತೇಜನ ನೀಡಿದೆ. ಇದು ನೇಮಕಾತಿ ಹೆಚ್ಚಳಕ್ಕೂ ಕಾರಣವಾಗಿದೆ ಎಂದು ತಿಳಿಸಿದೆ.

ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು (ಪಿಎಂಐ) 50ರ ಮೇಲಿದ್ದರೆ ಬೆಳವಣಿಗೆಯು ಸದೃಢವಾಗಿದೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಬೆಳವಣಿಗೆಯು ಕುಂಠಿತವಾಗಿದೆ ಎಂದರ್ಥ.

'ಜನವರಿಯಲ್ಲಿ ಸೂಚ್ಯಂಕವು 26 ತಿಂಗಳ ಕನಿಷ್ಠ ಮಟ್ಟಕ್ಕೆ ದಾಖಲಾಗಿತ್ತು. ಫೆಬ್ರುವರಿಯಲ್ಲಿ ಚೇತರಿಕೆ ಕಂಡಿದೆ. ಹೊಸ ಆರ್ಡರ್‌ಗಳು ಹೆಚ್ಚಿವೆ. ಹೆಚ್ಚಿದ ಬೇಡಿಕೆಯಿಂದಾಗಿ ಕಂಪನಿಗಳಿಂದ ಹೊಸ ನೇಮಕಾತಿ ನಡೆದಿದೆ' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಭದ್ರಾವತಿ			
ಕೋಕ	20000-27500	ರಾಶಿ	30000-30000	ಚಿಪ್ಪು	16869-25089
ಹೊಸತು	30000-38000	ಕುಮಟ		ಕೋಕ	6099-16019
ಹಳತು	45200-49200	ಚಾಲಿ	34699-36499	ಫ್ಯಾಕ್ಟರಿ	3569-23749
				ಹೊಸಚಾಲಿ	34699-36499

ಬೆಳೆಗಾರರಿಗೆ ಆತಂಕ; ಮಾರುಕಟ್ಟೆಯಲ್ಲಿ ಆವಕ ಇಳಿಕೆ

ಕಾಳುಮೆಣಸು ಇಳುವರಿ ಕುಸಿತ

• ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು ಜಿಲ್ಲೆ): ತಾಲ್ಲೂಕಿನಲ್ಲಿ ಕಾಳುಮೆಣಸಿನ ಕೊಯ್ಲು ಆರಂಭವಾಗಿದೆ. ಕಳೆದ ವರ್ಷಕ್ಕಿಂತ ಈ ಬಾರಿ ಇಳುವರಿ ಕಡಿಮೆಯಾಗಿದ್ದು, ಬೆಳೆಗಾರರು ಆತಂಕಗೊಂಡಿದ್ದಾರೆ.

ಜಾಗತಿಕ ಮಟ್ಟದಲ್ಲೂ ಕಾಳುಮೆಣಸಿನ ಇಳುವರಿ ಪ್ರಮಾಣ ಕುಸಿದಿದ್ದು, ಧಾರಣೆ ಏರಿಕೆಯಾಗಲಿದೆ ಎಂದು ಬೆಳೆಗಾರರು ಮತ್ತು ವ್ಯಾಪಾರಿಗಳು ನಿರೀಕ್ಷೆ ಹೊಂದಿದ್ದಾರೆ.

ಕಳೆದ ಬೇಸಿಗೆ ವೇಳೆ ಕಾಡಿದ ಅಧಿಕ ಉಷ್ಣಾಂಶ ಮತ್ತು ಮಳೆಗಾಲದಲ್ಲಿನ ಹೆಚ್ಚು ತೇವಾಂಶದಿಂದಾಗಿ ಬಳ್ಳಿಗಳಲ್ಲಿ ಫಸಲು ವಿರಳವಾಗಿದೆ. ಅಲ್ಲದೆ, ಮಳೆಗಾಲದ ನಂತರ ತಗುಲಿದ ಕೀಟಗಳ ಹಾವಳಿಯಿಂದ ಹಲವಾರು ಬಳ್ಳಿಗಳು ಜೀವ ಕಳೆದುಕೊಂಡಿವೆ. ಹಾಗಾಗಿ, ಇಳುವರಿ ಪ್ರಮಾಣ ಕುಸಿದಿದೆ ಎಂದು ಬೆಳೆಗಾರರು ಹೇಳುತ್ತಾರೆ.

ಜಗತ್ತಿನ ಒಟ್ಟು ಉತ್ಪಾದನೆಯ ಪೈಕಿ ಶೇ 38ರಷ್ಟು ಕಾಳುಮೆಣಸು ವಿಯೆಟ್ನಾಂ ದೇಶದಲ್ಲಿ ಉತ್ಪಾದನೆ ಆಗುತ್ತದೆ. ಈ ಬಾರಿ ಅಲ್ಲಿಯೂ ಹವಾಮಾನ ವೈಪರೀತ್ಯದಿಂದ ಫಸಲು ಕುಂಠಿತವಾಗಿದೆ. ಕಾಫಿ ಮತ್ತು ಡೂರಿಯನ್ ಬೆಳೆಗಳ ಬೆಲೆ ಏರಿಕೆಯಿಂದ ಆ ದೇಶದಲ್ಲಿ ಕಾಳುಮೆಣಸಿನ ಬಗ್ಗೆ ರೈತರಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ ಎನ್ನುತ್ತಾರೆ ಮಾರುಕಟ್ಟೆ ತಜ್ಞರು.

> **ನಮ್ಮ ತೋಟದಲ್ಲಿ ಕಳೆದ ವರ್ಷ 20 ಕಾರ್ಮಿಕರು 21 ದಿನ ಕಾಳುಮೆಣಸು ಕೊಯ್ದಿದ್ದರು. ಈ ವರ್ಷ 20 ಜನರು ಒಂದು ವಾರದಲ್ಲೇ ಕೊಯ್ದು ಮುಗಿಸಿದ್ದಾರೆ**
> **ಚಂದ್ರಶೇಖರ್,** ಲಿಂಬೆಕೊಂಡದ ಬೆಳೆಗಾರ

ಬ್ರೆಜಿಲ್ ದೇಶವು ಜಗತ್ತಿನ ಶೇ 18ರಷ್ಟು ಕಾಳುಮೆಣಸು ಬೆಳೆಯುತ್ತದೆ. ಆದರೆ, ಅಲ್ಲಿ ಕಾಳುಮೆಣಸಿನ ಉತ್ಪಾದನೆ ಕಡಿಮೆ ಆಗುತ್ತಿದೆ. ಭಾರತದಲ್ಲಿ ಜಗತ್ತಿನ ಒಟ್ಟು ಉತ್ಪಾದನೆ ಪೈಕಿ ಶೇ 12ರಷ್ಟು ಕಾಳುಮೆಣಸು ಬೆಳೆದರೂ ಆಂತರಿಕ ಬಳಕೆಗೆ ಇದು ಸಾಕಾಗುತ್ತಿಲ್ಲ.

ಕಳೆದ ಎರಡು ವರ್ಷಗಳಲ್ಲಿ ಇಂಡೋನೇಷ್ಯಾ ಮತ್ತು ಶ್ರೀಲಂಕಾದಲ್ಲಿ ಉತ್ತಮ ಫಸಲು ಬಂದಿತ್ತು. ಈ ವರ್ಷ ಫಸಲಿನ ಪ್ರಮಾಣ ಕಡಿಮೆ ಆಗಿದೆ. ಅಲ್ಲಿನ ಬೆಳೆಗಾರರ ಬಳಿ ಕಳೆದ ವರ್ಷದ ಸರಕು ಕೂಡ ಉಳಿದಿಲ್ಲ. ಕೊಕ್ಕೊ ಬೆಳೆ ಬಗ್ಗೆ ಅಲ್ಲಿ ಆಕರ್ಷಣೆ ಶುರು ಆಗಿದೆ.

ಚೀನಾದಲ್ಲಿ ಅಲ್ಪ ಪ್ರಮಾಣದಲ್ಲಿ ಬೆಳೆಯುವ ಕಾಳುಮೆಣಸು ಆಂತರಿಕ ಬಳಕೆಗೆ ಸಾಕಾಗುತ್ತಿಲ್ಲ. ಹಾಗಾಗಿ, ಆ ದೇಶ ಕೂಡ ಆಮದು ಮಾಡಿಕೊಳ್ಳುತ್ತಿದೆ. ಈ ವರ್ಷವೂ ಆ ದೇಶದ ಆಮದು ಪ್ರಮಾಣ ಆಧಾರದ ಮೇಲೆ ಕಾಳುಮೆಣಸಿನ ಧಾರಣೆ ಏರಿಕೆಯಾಗುವ ನಿರೀಕ್ಷೆ ಇದೆ ಎಂಬುದು ತಜ್ಞರ ವಿಶ್ಲೇಷಣೆ.

2015ರಲ್ಲಿ 5.87 ಲಕ್ಷ ಟನ್ ಇದ್ದ ಜಾಗತಿಕ ಕಾಳುಮೆಣಸಿನ ಉತ್ಪಾದನೆ ಈ ವರ್ಷ 4.86 ಲಕ್ಷ ಟನ್‌ಗೆ ಕುಸಿಯುವ ಅಂದಾಜಿದೆ. ಹೀಗಾಗಿ, ಧಾರಣೆ ಏರಬಹುದು ಎಂದು ಬೆಳೆಗಾರರು ನಂಬಿದ್ದಾರೆ. ಆದ್ದರಿಂದ ಮಾರುಕಟ್ಟೆಗೆ ಬರುವ ಕಾಳುಮೆಣಸಿನ ಆವಕವೂ ಕಡಿಮೆಯಾಗಿದೆ ಎಂಬುದು ವ್ಯಾಪಾರಸ್ಥರ ಅಭಿಪ್ರಾಯ.



ರೂಪಾಯಿ ಮೌಲ್ಯ ಏರಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 13 ಪೈಸೆ ಏರಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹87.06 ಆಗಿದೆ.

ಸತತವಾಗಿ ಕುಸಿತದ ಹಾದಿಯಲ್ಲಿದ್ದ ದೇಶೀಯ ಷೇರುಪೇಟೆ ಚೇತರಿಕೆ ಕಂಡಿದೆ. ಮತ್ತೊಂದೆಡೆ ಕಚ್ಚಾ ತೈಲದ ಬೆಲೆಯಲ್ಲಿ ಇಳಿಕೆಯಾಗಿರುವುದು ರೂಪಾಯಿ ಬಲವರ್ಧನೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ. ಟ್ರಂಪ್ ಅವರ ಸುಂಕ ನೀತಿಗೆ ಕೆನಡಾ, ಮೆಕ್ಸಿಕೊ, ಚೀನಾ ತಿರುಗೇಟು ನೀಡಿವೆ. ಈ ಬೆಳವಣಿಗೆಯು ಡಾಲರ್ ಮೌಲ್ಯದ ಮೇಲೆ ಪರಿಣಾಮ ಬೀರಿದೆ ಎಂದು ತಿಳಿಸಿದ್ದಾರೆ.

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹2400-3200
ಮಧ್ಯಮ	₹1600-2400
ಸಣ್ಣ	₹1000-1600

ಗೂಳಿ ನಾಗಾಲೋಟ



ಮುಂಬೈ (ಪಿಟಿಐ): ದೇಶೀಯ ಷೇರುಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಕರಡಿ ಕುಣಿತಕ್ಕೆ ತಡೆ ಬಿದ್ದಿತು. ಗೂಳಿಯ ನಾಗಾಲೋಟದಿಂದಾಗಿ ಸೂಚ್ಯಂಕಗಳು ಚೇತರಿಕೆಯ ಹಳಿಗೆ ಮರಳಿವೆ.

ಯುಟಿಲಿಟಿ ಷೇರುಗಳ ಖರೀದಿ ಹೆಚ್ಚಳವು ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆಯಲು ನೆರವಾಯಿತು. ಹೂಡಿಕೆದಾರರ ಸಂಪತ್ತು ₹8 ಲಕ್ಷ ಕೋಟಿ ಏರಿಕೆಯಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 740 ಅಂಶ ಏರಿಕೆ ಕಂಡು 73,730 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಸತತ ಹತ್ತು ವಹಿವಾಟುಗಳಲ್ಲಿ ಇಳಿಕೆ ಕಂಡಿದ್ದ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಏರಿಕೆ ದಾಖಲಿಸಿದೆ. 254 ಅಂಶ ಏರಿಕೆ ಕಂಡು, 22,337 ಅಂಶಗಳಲ್ಲಿ ಸ್ಥಿರಗೊಂಡಿತು.

ಅದಾನಿ ಪೋರ್ಟ್ಸ್, ಟಾಟಾ ಸ್ಟೀಲ್, ಪವರ್ ಗ್ರಿಡ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎನ್‌ಟಿಪಿಸಿ, ಟೆಕ್ ಮಹೀಂದ್ರ, ಟಾಟಾ ಮೋಟರ್ಸ್, ಐಟಿಸಿ, ನೆಸ್ಲೆ ಇಂಡಿಯಾ, ಎಚ್‌ಸಿಎಲ್ ಟೆಕ್ನಾಲಜೀಸ್, ಭಾರ್ತಿ ಏರ್‌ಟೆಲ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಏಷ್ಯನ್ ಪೇಂಟ್ಸ್, ಕೋಟಕ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಬಜಾಜ್ ಫೈನಾನ್ಸ್, ಇಂಡಸ್ ಇಂಡ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಜೊಮಾಟೊ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಟೋಕಿಯೊ, ಶಾಂಘೈ, ಹಾಂಗ್‌ಕಾಂಗ್ ಮತ್ತು ಸೋಲ್ ಮಾರುಕಟ್ಟೆಗಳು ಏರಿಕೆ ಕಂಡಿವೆ. ಅಲ್ಲದೆ, ಫೆಬ್ರುವರಿ ತಿಂಗಳಿನಲ್ಲಿ ಸೇವಾ ವಲಯದ ಬೆಳವಣಿಗೆಯು ಹೆಚ್ಚಳವಾಗಿದೆ. ಇದು ಷೇರು ಸೂಚ್ಯಂಕಗಳು ಏರಿಕೆಗೆ ಸಹಕಾರಿಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ವಂತಾರ ಕೇಂದ್ರ ಲೋಕಾರ್ಪಣೆ

ನವದೆಹಲಿ (ಪಿಟಿಐ): ಗುಜರಾತ್‌ನ ಜಾಮ್‌ನಗರದಲ್ಲಿರುವ ವಂತಾರ ವನ್ಯಜೀವಿ ರಕ್ಷಣೆ, ಪುನರ್ವಸತಿ ಮತ್ತು ಸಂರಕ್ಷಣಾ ಕೇಂದ್ರವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು.

ವಂತಾರವು ಎರಡು ಸಾವಿರಕ್ಕೂ ಹೆಚ್ಚು ಪ್ರಭೇದದ ಪ್ರಾಣಿ, ಪಕ್ಷಿಗಳಿಗೆ ಆಶ್ರಯ ನೀಡಿದೆ. ಒಂದೂವರೆ ಲಕ್ಷಕ್ಕೂ ಹೆಚ್ಚು ರಕ್ಷಿಸಲಾದ, ಅಳಿವಿನಂಚಿನಲ್ಲಿನ ಪ್ರಾಣಿಗಳಿಗೆ ನೆಲಯಾಗಿದೆ. ಇಲ್ಲಿನ ವಿವಿಧ ಸೌಲಭ್ಯದ ಬಗ್ಗೆ ಮೋದಿ ಅವರು ಮಾಹಿತಿ ಪಡೆದರು. ಬಳಿಕ ಪ್ರಾಣಿಗಳೊಂದಿಗೆ ಕೆಲಹೊತ್ತು ಕಳೆದರು.

ವನ್ಯಜೀವಿ ಆಸ್ಪತ್ರೆಗೆ ಭೇಟಿ ನೀಡಿದ ಅವರು, ಎಂಆರ್‌ಐ, ಸಿಟಿ ಸ್ಕ್ಯಾನ್‌ಗಳು, ಐಸಿಯು ಸೌಲಭ್ಯ ಸೇರಿ ಪಶು ವೈದ್ಯಕೀಯ ಸೌಲಭ್ಯಗಳನ್ನು ವೀಕ್ಷಿಸಿದರು. ವನ್ಯಜೀವಿ ಅರಿವಳಿಕೆ, ಹೃದಯಶಾಸ್ತ್ರ, ಮೂತ್ರಪಿಂಡ ಶಾಸ್ತ್ರ, ಎಂಡೊಸ್ಕೋಪಿ, ದಂತ ವೈದ್ಯಶಾಸ್ತ್ರ, ಆಂತರಿಕ ಔಷಧ ಇತ್ಯಾದಿ ವಿಭಾಗಗಳಿಗೆ ಭೇಟಿ ನೀಡಿದರು.



ಗುಜರಾತ್‌ನ ಜಾಮ್‌ನಗರದಲ್ಲಿ ವಂತಾರ ವನ್ಯಜೀವಿ ರಕ್ಷಣೆ, ಪುನರ್ವಸತಿ ಮತ್ತು ಸಂರಕ್ಷಣಾ ಕೇಂದ್ರ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಗಾಜಿನ ಮನೆಯಲ್ಲಿದ್ದ ಸಿಂಹವನ್ನು ವೀಕ್ಷಿಸಿದರು —ಪಿಟಿಐ ಚಿತ್ರ

ಏಷ್ಯಾಟಿಕ್ ಸಿಂಹದ ಮರಿಗಳು, ಬಿಳಿ ಸಿಂಹದ ಮರಿ, ಅಳಿವಿನಂಚಿನಲ್ಲಿರುವ ಹಿಮಾಲಯದ ಚಿರತೆ ಮರಿ, ಕ್ಯಾರಕಲ್ (ವಿಶಿಷ್ಟ ಬಗೆಯ ಕಾಡು ಬೆಕ್ಕು) ಸೇರಿದಂತೆ ವಿವಿಧ ಪ್ರಾಣಿಗಳಿಗೆ ಆಹಾರ ನೀಡಿದರು. ವಿಶ್ವದ ಅತಿದೊಡ್ಡ ಆನೆ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು, ಸಿಬ್ಬಂದಿ, ಕಾರ್ಮಿಕರೊಂದಿಗೆ ಸಂವಾದ ನಡೆಸಿದರು.

ಕೋಟ್ಯಧೀಶರ ಸಂಖ್ಯೆ ಶೇ 6ರಷ್ಟು ಏರಿಕೆ

ನವದೆಹಲಿ (ಪಿಟಿಐ): ಕಳೆದ ವರ್ಷ ಭಾರತದಲ್ಲಿ 10 ಮಿಲಿಯನ್ ಅಮೆರಿಕನ್ ಡಾಲರ್‌ಗಿಂತ (₹87 ಕೋಟಿ) ಹೆಚ್ಚು ಸಂಪತ್ತು ಹೊಂದಿರುವ ಕೋಟ್ಯಧೀಶರ ಸಂಖ್ಯೆಯಲ್ಲಿ ಶೇ 6ರಷ್ಟು ಹೆಚ್ಚಳವಾಗಿದೆ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ ನೈಟ್ ಫ್ರಾಂಕ್ ವರದಿ ಬುಧವಾರ ತಿಳಿಸಿದೆ.

2023ರಲ್ಲಿ 80,686 ಇದ್ದ ಕೋಟ್ಯಧೀಶರ ಸಂಖ್ಯೆಯು 2024ರಲ್ಲಿ 85,698ಕ್ಕೆ ಮುಟ್ಟಿದೆ. 2028ರ ವೇಳೆಗೆ ಈ ಸಂಖ್ಯೆಯು 93,753ಕ್ಕೆ ತಲುಪುವ ನಿರೀಕ್ಷೆಯಿದೆ ಎಂದು ಹೇಳಿದೆ.

ಶತಕೋಟ್ಯಧಿಪತಿಗಳ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ. ಕಳೆದ ವರ್ಷ ಈ ಪಟ್ಟಿಗೆ ಹೊಸದಾಗಿ 26 ಮಂದಿ ಸೇರ್ಪಡೆಯಾಗಿದ್ದು, ಒಟ್ಟು ಶತಕೋಟ್ಯಧಿಪತಿಗಳ ಸಂಖ್ಯೆ 191 ಆಗಿದೆ. ಇವರ ಒಟ್ಟು ಸಂಪತ್ತಿನ ಮೌಲ್ಯ ₹82.53 ಲಕ್ಷ ಕೋಟಿ ಆಗಿದೆ ಎಂದು ತಿಳಿಸಿದೆ.

ಅತಿಹೆಚ್ಚು ಶತಕೋಟ್ಯಧಿಪತಿಗಳನ್ನು ಹೊಂದಿರುವ ಪಟ್ಟಿಯಲ್ಲಿ ಭಾರತವು ಮೂರನೇ ಸ್ಥಾನದಲ್ಲಿದೆ. ಅಮೆರಿಕ ಮೊದಲ ಸ್ಥಾನದಲ್ಲಿದ್ದರೆ, ಚೀನಾ ಎರಡನೇ ಸ್ಥಾನದಲ್ಲಿದೆ ಎಂದು ವಿವರಿಸಿದೆ.

ಚಿನ್ನ, ಬೆಳ್ಳಿ ಧಾರಣೆ ಮತ್ತೆ ಹೆಚ್ಚಳ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಮತ್ತೆ ಹಳದಿ ಲೋಹ ಮತ್ತು ಬೆಳ್ಳಿ ಬೆಲೆಯಲ್ಲಿ ಏರಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

10 ಗ್ರಾಂ ಚಿನ್ನದ ಬೆಲೆಯು (ಶೇ 99.9 ಪರಿಶುದ್ಧತೆ) ₹300 ಏರಿಕೆಯಾಗಿದ್ದು, ₹89,300 ಆಗಿದೆ. ಫೆಬ್ರುವರಿ 20ರಂದು 10 ಗ್ರಾಂ ಚಿನ್ನದ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹89,450ಕ್ಕೆ ತಲುಪಿತ್ತು. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹88,900ಕ್ಕೆ ತಲುಪಿದೆ. ಬೆಳ್ಳಿ ದರವು ಪ್ರತಿ ಕೆ.ಜಿಗೆ ₹1 ಸಾವಿರ ಹೆಚ್ಚಳವಾಗಿದ್ದು, ₹99 ಸಾವಿರ ಆಗಿದೆ.

'ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಇಳಿದಿದೆ. ಹಾಗಾಗಿ, ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನದತ್ತ ಚಿತ್ತ ನೆಟ್ಟಿದ್ದಾರೆ. ಇದರಿಂದ ಹಳದಿ ಲೋಹದ ಬೆಲೆಯು ಏರಿಕೆಯಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ತಿಳಿಸಿದ್ದಾರೆ.

ತೊಗರಿ ಪರಿಹಾರಕ್ಕೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ತೊಗರಿ ಬೆಳೆ ಹಾನಿಗೆ ಪರಿಹಾರ ನೀಡಬೇಕು. ಕ್ವಿಂಟಲ್ ತೊಗರಿಗೆ ಕನಿಷ್ಠ ₹10 ಸಾವಿರ ಬೆಂಬಲ ಬೆಲೆ ನೀಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ರೈತರು ನೂರಾರು ಎತ್ತಿನ ಗಾಡಿ ಹಾಗೂ ಟ್ರ್ಯಾಕ್ಟರ್‌ಗಳಲ್ಲಿ ಬುಧವಾರ ಬಂದು ಜಿಲ್ಲಾಧಿಕಾರಿ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿದರು.

ಜಿಲ್ಲಾ ರೈತ ಹೋರಾಟ ಸಮಿತಿ ನೇತೃತ್ವದಲ್ಲಿ ಮಧ್ಯಾಹ್ನ ಪ್ರತಿಭಟನೆ ಆರಂಭಿಸಿದ ರೈತರು, ಜಿಲ್ಲಾಧಿಕಾರಿ ಕಚೇರಿ ಎದುರು ಎತ್ತಿನ ಗಾಡಿಗಳು ಹಾಗೂ ಟ್ರ್ಯಾಕರ್‌ಗಳನ್ನು ನಿಲ್ಲಿಸಿದ್ದರಿಂದ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು.

ಜಿಲ್ಲಾಧಿಕಾರಿ ಕಚೇರಿ ಆವರಣದ ಒಳಗೆ ಎತ್ತಿನ ಗಾಡಿ ಹಾಗೂ ಟ್ರ್ಯಾಕ್ಟರ್‌ಗಳನ್ನು ಒಯ್ಯಲು ಮುಂದಾದರು. ಈ ವೇಳೆ ಪೊಲೀಸರು ಮತ್ತು ರೈತರ ನಡುವೆ ವಾಗ್ವಾದ ನಡೆಯಿತು. ಬಳಿಕ ಒತ್ತಡಕ್ಕೆ ಮಣಿದ ಪೊಲೀಸರು, ರೈತರನ್ನು ಕಚೇರಿ ಆವರಣದೊಳಗೆ ಬಿಟ್ಟರು.

ಕಚೇರಿ ಎದುರಿನ ರಸ್ತೆಯಲ್ಲಿ ಬಂಡಿಗಳನ್ನು ನಿಲ್ಲಿಸಿದ ರೈತರು, ಅಲ್ಲಿಯೇ ಎತ್ತುಗಳನ್ನು ಕಟ್ಟಿಹಾಕಿ ಮೇವು ನೀಡಿದರು. ಮನೆಯಿಂದ ತಂದಿದ್ದ ಸಜ್ಜೆರೊಟ್ಟಿ, ಪುಂಡಿಪಲ್ಯ, ಶೇಂಗಾ ಚಟ್ನಿಯನ್ನು ರೈತರು ಜಿಲ್ಲಾಧಿಕಾರಿ ಕಚೇರಿ ಆವರಣ ಹಾಗೂ ರಸ್ತೆಯಲ್ಲೇ ಕುಳಿತು ತಿಂದರು.

ರಾತ್ರಿಯೂ ರೈತರ ಪ್ರತಿಭಟನೆ ಮುಂದುವರಿದಿತ್ತು.

ಕಾಬೂಲ್ ವಿಮಾನ ನಿಲ್ದಾಣದಲ್ಲಿ ಆತ್ಮಾಹುತಿ ಬಾಂಬ್ ದಾಳಿ ಪ್ರಕರಣ

ಐಎಸ್ ಉಗ್ರನ ಬಂಧನ: ಟ್ರಂಪ್

ವಾಷಿಂಗ್ಟನ್ (ಎಎಫ್‌ಪಿ): ಅಫ್ಗಾನಿಸ್ತಾನದಿಂದ ಅಮೆರಿಕ ಸೇನೆಯನ್ನು 2021ರಲ್ಲಿ ವಾಪಸ್ ಕರೆಸಿಕೊಳ್ಳುವಾಗ ಕಾಬೂಲ್ ವಿಮಾನ ನಿಲ್ದಾಣದ ಸಮೀಪ ನಡೆದಿದ್ದ ಆತ್ಮಾಹುತಿ ಬಾಂಬ್ ದಾಳಿಯ ಸೂತ್ರಧಾರಿ, ಐ.ಎಸ್ ಉಗ್ರನನ್ನು ಬಂಧಿಸಲಾಗಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ತಿಳಿಸಿದ್ದಾರೆ.

ಕಾಂಗ್ರೆಸ್ ಉದ್ದೇಶಿಸಿ ಮಾಡಿದ ಮೊದಲ ಭಾಷಣದ ವೇಳೆ ಅವರು, 'ಆ ದಾಳಿಗೆ ಕಾರಣವಾದ ಪ್ರಮುಖ ಭಯೋತ್ಪಾದಕನ ಬಂಧನಕ್ಕೆ ಪಾಕಿಸ್ತಾನ ನಮಗೆ ಸಹಾಯ ಮಾಡಿದೆ' ಎಂದು ಹೇಳಿದರು.

ಕಾಬೂಲ್‌ನ ಹಮೀದ್ ಕರ್ಜೈ ಅಂತರರಾಷ್ಟ್ರೀಯ ವಿಮಾನದ ನಿಲ್ದಾಣದ ಸಮೀಪ 2021ರ ಆಗಸ್ಟ್ 26ರಂದು ಆತ್ಮಾಹುತಿ ಬಾಂಬ್ ದಾಳಿ ನಡೆದಿತ್ತು. ಇದರಲ್ಲಿ 170 ಮಂದಿ ಅಫ್ಗಾನಿಸ್ತಾನಿಯರು ಮತ್ತು 13 ಮಂದಿ ಅಮೆರಿಕ ಸೈನಿಕರು ಹತರಾಗಿದ್ದರು.



ಸಿಐಎ ನೀಡಿದ ಸುಳಿವು ಆಧರಿಸಿ, ಪಾಕಿಸ್ತಾನದ ಐಎಸ್‌ಐ, ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಮತ್ತು ಆಶ್-ಶಾಮ್-ಖೋರಾಸನ್ ಪ್ರಾಂತ್ಯದ (ಐಎಸ್‌ಐಎಸ್-ಕೆ) ಕಾರ್ಯಾಚರಣೆಯ ಪ್ರಮುಖ ಕಮಾಂಡರ್ ಆಗಿರುವ ಮೊಹಮ್ಮದ್ ಷರೀಫುಲ್ಲಾನನ್ನು ಬಂಧಿಸಿದೆ. ಈತ ಆತ್ಮಾಹುತಿ ಬಾಂಬ್ ಸ್ಫೋಟ ಯೋಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ. ಅಫ್ಗಾನಿಸ್ತಾನದ ಪ್ರಜೆಯಾಗಿರುವ ಷರೀಫುಲ್ಲಾನನ್ನು ಪಾಕಿಸ್ತಾನದಿಂದ ಗಡೀಪಾರು ಮಾಡುವ ಪ್ರಕ್ರಿಯೆ ನಡೆಯುತ್ತಿದೆ.

ಕಾಬೂಲ್‌ನಲ್ಲಿನ ಕೆನಡಾದ ರಾಯಭಾರ ಕಚೇರಿಯ ಮೇಲೆ ನಡೆದ ಭಯೋತ್ಪಾದಕ ದಾಳಿ, 2024ರ ಮಾರ್ಚ್ 22ರಂದು ರಷ್ಯಾದ ಮಾಸ್ಕೊದಲ್ಲಿನ ಕ್ರೋಕಸ್ ಸಿಟಿ ಹಾಲ್ ಮೇಲೆ ಭಯೋತ್ಪಾದಕ ದಾಳಿ ನಡೆಸಿ, ಬಂಧಿತರಾದ ನಾಲ್ವರು ಉಗ್ರರ ಪೈಕಿ ಇಬ್ಬರಿಗೆ ತರಬೇತಿ ನೀಡಿದ ಆರೋಪ ಷರೀಫುಲ್ಲಾ ಮೇಲಿದೆ.

'ಅಫ್ಗಾನಿಸ್ತಾನದಲ್ಲಿ ಭಯೋತ್ಪಾದನಾ ನಿಗ್ರಹದ ಪ್ರಯತ್ನಗಳಲ್ಲಿ ಪಾಕಿಸ್ತಾನದ ಪಾತ್ರ ಮತ್ತು ಬೆಂಬಲವನ್ನು ಟ್ರಂಪ್ ಪ್ರಶಂಸಿಸಿದ್ದಾರೆ. ಟ್ರಂಪ್ ಅವರಿಗೆ ಧನ್ಯವಾದ' ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ 'ಎಕ್ಸ್' ಮಾಡಿದ್ದಾರೆ.

ಅಮೆರಿಕ: ತೆಲಂಗಾಣದ ವಿದ್ಯಾರ್ಥಿ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣದ ಶಾದನಗರದ ವಿದ್ಯಾರ್ಥಿ ಗುಂಪ ಪ್ರವೀಣ್ ಎನ್ನುವವರು ಅಮೆರಿಕದಲ್ಲಿ ಬುಧವಾರ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ. ಪ್ರವೀಣ್ ಅವರು ಉನ್ನತ ವ್ಯಾಸಂಗಕ್ಕಾಗಿ 2023ರಲ್ಲಿ ಅಮೆರಿಕಕ್ಕೆ ಹೋಗಿದ್ದರು ಎಂದು ಕುಟುಂಬದ ಮೂಲಗಳು ಹೇಳಿವೆ.

'ಮಧ್ಯರಾತ್ರಿ ಕರೆಯೊಂದು ಬಂದಾಗ ನಾವು ಸ್ವೀಕರಿಸಲಿಲ್ಲ. ಬೆಳಿಗ್ಗೆ ಆ ಸಂಖ್ಯೆಗೆ ತಿರುಗಿ ಕರೆ ಮಾಡಿದಾಗ, ಅವರು ಪ್ರವೀಣ್‌ನ ವಿವರಗಳನ್ನು ಕೇಳಿದರು. ಇದು ವಂಚನೆಯ ಕರೆ ಇರಬಹುದು ಎಂದುಕೊಂಡೆವು. ಆದರೆ ನಂತರ ಆತನ ಸ್ನೇಹಿತರಿಗೆ ಕರೆ ಮಾಡಿದಾಗ, ಅವರು ಪ್ರವೀಣ್ ಎಲ್ಲಿದ್ದಾನೆ ಗೊತ್ತಿಲ್ಲ ಎಂದರು. ನಂತರ, ಪ್ರವೀಣ್‌ನನ್ನು ಗುಂಡಿಕ್ಕಿ ಸಾಯಿಸಿರುವುದು ಅವರಿಗೆ ಗೊತ್ತಾಗಿದೆ' ಎಂದು ಕುಟುಂಬದ ಸದಸ್ಯರೊಬ್ಬರುಹೇಳಿದ್ದಾರೆ.

ಸುಂಕ ಸಮರ: ಭಾರತಕ್ಕೂ ಬಿಸಿ

ಒಂದನೇ ಪುಟದಿಂದ...

'ಅಮೆರಿಕದ ಕೆಲ ಸರಕುಗಳ ಮೇಲೆ ಭಾರತ ಶೇ 30ರಿಂದ ಶೇ 60ರಷ್ಟು ಹಾಗೂ ಕೆಲವು ಸರಕುಗಳ ಮೇಲೆ ಶೇ 70ರಷ್ಟು ಸುಂಕ ವಿಧಿಸುತ್ತಿದೆ. ಇದು ನಿಜವಾಗಿಯೂ ದೊಡ್ಡ ಸಮಸ್ಯೆ' ಎಂದು ಹೇಳಿದ್ದಾರೆ.

'ಉದಾಹರಣೆಗೆ, ಅಮೆರಿಕದಿಂದ ಆಮದು ಮಾಡಿಕೊಳ್ಳುವ ಕಾರುಗಳ ಮೇಲೆ ಭಾರತ ಶೇ 70ರಷ್ಟು ಸುಂಕ ವಿಧಿಸುತ್ತಿದೆ. ಹೀಗಾಗಿ, ಭಾರತದಲ್ಲಿ ಆ ಕಾರುಗಳನ್ನು ಮಾರಾಟ ಮಾಡುವುದು ಅಸಾಧ್ಯ' ಎಂದು ಟ್ರಂಪ್ ವಿವರಿಸಿದ್ದಾರೆ.

ಭಾರತ ಹಾಗೂ ಚೀನಾ ಸೇರಿದಂತೆ ಇತರ ದೇಶಗಳಿಗೆ ಪ್ರತಿ ಸುಂಕ ವಿಧಿಸುವುದಾಗಿ ಫೆಬ್ರುವರಿಯಲ್ಲಿ ಟ್ರಂಪ್ ಹೇಳಿದ್ದರು. ಕಳೆದ ತಿಂಗಳು ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ಟ್ರಂಪ್ ಈ ಮಾತನ್ನು ಪುನರುಚ್ಚರಿಸಿದ್ದರು.

'ಅಮೆರಿಕದಲ್ಲಿ ನಿಮ್ಮ ಉತ್ಪನ್ನಗಳನ್ನು ತಯಾರಿಸುತ್ತಿಲ್ಲ ಎಂದಾದರೆ, ನೀವು ಸುಂಕ ಪಾವತಿಸಬೇಕಾಗುತ್ತದೆ. ಕೆಲ ಪ್ರಕರಣಗಳಲ್ಲಿ ಈ ಸುಂಕ ಅಧಿಕವೂ ಆಗಿರಲಿದೆ' ಎಂದು ಟ್ರಂಪ್ ಹೇಳಿದಾಗ, ರಿಪಬ್ಲಿಕನ್ ಸಂಸದರು ಜೋರಾಗಿ ಚಪ್ಪಾಳೆ ತಟ್ಟಿ ಬೆಂಬಲ ಸೂಚಿಸಿದರು.

ಎರಡನೇ ಅವಧಿಗೆ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ, ಟ್ರಂಪ್ ಅವರು ಸಂಸತ್ತನ್ನು ಉದ್ದೇಶಿಸಿ ಮಾಡುತ್ತಿರುವ ಮೊದಲ ಭಾಷಣ ಇದಾಗಿದೆ. 'ಹಲವು ದಶಕಗಳಿಂದ ಇತರ ದೇಶಗಳು ಅಮೆರಿಕ ಮೇಲೆ ಸುಂಕ ವಿಧಿಸುತ್ತಾ ಬಂದಿವೆ. ಈಗ, ಇತರ ದೇಶಗಳಿಗೆ ಪ್ರತಿ ಸುಂಕ ವಿಧಿಸುವ ಸರದಿ ನಮ್ಮದು' ಎಂದು ಟ್ರಂಪ್ ಹೇಳಿದ್ದಾರೆ.

'ಐರೋಪ್ಯ ಒಕ್ಕೂಟ, ಚೀನಾ, ಬ್ರೆಜಿಲ್, ಭಾರತ, ಮೆಕ್ಸಿಕೊ ಮತ್ತು ಕೆನಡಾ ದೇಶಗಳು ಎಷ್ಟು ಸುಂಕ ವಿಧಿಸುತ್ತಿವೆ ಎಂಬುದು ನಿಮಗೆ ಗೊತ್ತೇ? ಇನ್ನೂ ಕೆಲವು ದೇಶಗಳು, ನಾವು ಹೇರಿಕೆ ಮಾಡುವುದಕ್ಕಿಂತ ಅಧಿಕ ಸುಂಕಗಳನ್ನು ನಮಗೆ ವಿಧಿಸುತ್ತಿವೆ' ಎಂದಿದ್ದಾರೆ.

'ಅಮೆರಿಕ ನಡೆಸುವ ವ್ಯಾಪಾರ–ವಹಿವಾಟಿನ ಮೇಲೆ ಅಡ್ಡಪರಿಣಾಮ ಬೀರುವಂತಹ ಇಲ್ಲವೇ ಅಂತರ-ರಾಷ್ಟ್ರೀಯ ಮಾರುಕಟ್ಟೆಯಿಂದ ಅಮೆರಿಕವನ್ನು ದೂರ ಇಡುವಂತಹ ಯಾವುದೇ ಕ್ರಮಗಳನ್ನು ಕೈಗೊಳ್ಳುವ ದೇಶಗಳಿಗೆ, ಅಂಥದೇ ಕ್ರಮಗಳ ಮೂಲಕ ನಾವು ಉತ್ತರ ನೀಡುತ್ತೇವೆ' ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ.

'ಚೀನಾ ಹಾಗೂ ಇತರ ಕೆಲ ದೇಶಗಳ ವಿರುದ್ಧ ನಮ್ಮ ಸರ್ಕಾರ ಇಂತಹ ಕ್ರಮ ತೆಗೆದುಕೊಂಡಿದೆ. ಈ ಹಿಂದಿನ ಜೋ ಬೈಡನ್ ಸರ್ಕಾರ ಇಂತಹ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ಇತರ ದೇಶಗಳೊಂದಿಗಿನ ವ್ಯಾಪಾರವು ಭಾರಿ ಪ್ರಮಾಣದ ಹಣ ಒಳಗೊಂಡಿತ್ತು. ಇದೇ ಕಾರಣಕ್ಕೆ, ಬೈಡನ್ ಸರ್ಕಾರ ಯಾವುದೇ ಕ್ರಮ ಕೈಗೊಂಡಿರಲಿಲ್ಲ' ಎಂದು ಟ್ರಂಪ್ ಹೇಳಿದ್ದಾರೆ.

ಸೌಹಾರ್ದ ಪರಿಹಾರಕ್ಕೆ ಭಾರತ ಯತ್ನ

ಒಂದನೇ ಪುಟದಿಂದ...

ಕೆಲ ನಿರ್ದಿಷ್ಟ ಕ್ಷೇತ್ರಗಳಿಗೆ ಸಂಬಂಧಿಸಿದ ಸುಂಕಗಳನ್ನು ತಗ್ಗಿಸುವ ಸಂದೇಶವನ್ನು ಅಮೆರಿಕಕ್ಕೆ ರವಾನಿಸುವ ಪ್ರಯತ್ನದ ಭಾಗವಾಗಿ ಭಾರತ ಇಂತಹ ಕ್ರಮಗಳನ್ನು ಬಜೆಟ್‌ನಲ್ಲಿ ಪ್ರಕಟಿಸಿತ್ತು.

ಇನ್ನೊಂದೆಡೆ, ತೈಲ, ನೈಸರ್ಗಿಕ ಅನಿಲ, ಸೇನಾ ಸಲಕರಣೆಗಳನ್ನು ತನ್ನಿಂದ ಖರೀದಿಸುವಂತೆ ಭಾರತದ ಮೇಲೆ ಒತ್ತಡ ಹೇರುವ ತಂತ್ರಕ್ಕೂ ಅಮೆರಿಕ ಮೊರೆ ಹೋಗಿದೆ. ಈ ಮೂಲಕ, ಭಾರತದೊಂದಿಗಿನ ವ್ಯಾಪಾರ ಕೊರತೆಯನ್ನು ತಗ್ಗಿಸುವ ಪ್ರಯತ್ನ ಮಾಡುತ್ತಿದೆ. ಪ್ರಸ್ತುತ, ವ್ಯಾಪಾರ ಕೊರತೆಯು ₹3.9 ಲಕ್ಷ ಕೋಟಿ ಇದೆ. ಭಾರತೀಯ ಕೈಗಾರಿಕಾ ಮಹಾಸಂಘ (ಸಿಐಐ), 2023ರ ಏಪ್ರಿಲ್‌ನಲ್ಲಿ ಬಿಡುಗಡೆ ಮಾಡಿರುವ ವರದಿ ಪ್ರಕಾರ, ಭಾರತದ 163 ಕಂಪನಿಗಳು ಅಮೆರಿಕದಲ್ಲಿ ₹3 ಲಕ್ಷ ಕೋಟಿ ಹೂಡಿಕೆ ಮಾಡಿದ್ದು, 4.25 ಲಕ್ಷ ಉದ್ಯೋಗ ಸೃಷ್ಟಿಸಿವೆ.

ಡಬ್ಲ್ಯುಟಿಒಗೆ ಕೆನಡಾ ದೂರು

ಜಿನೀವಾ (ಎಎಫ್‌ಪಿ): ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸುಂಕ ಹೆಚ್ಚಳ ಮಾಡಿರುವುದಕ್ಕೆ ಸಂಬಂಧಿಸಿ, ಅಮೆರಿಕ ವಿರುದ್ಧ ಕೆನಡಾ, ವಿಶ್ವ ವ್ಯಾಪಾರ ಸಂಘಟನೆಗೆ (ಡಬ್ಲ್ಯುಟಿಒ) ದೂರು ನೀಡಿದೆ.

ಡಬ್ಲ್ಯುಟಿಒದಲ್ಲಿ ಕೆನಡಾ ರಾಯಭಾರಿ ನಾದಿಯಾ ಥಿಯೋಡರ್ ಅವರು ಈ ಕುರಿತು ತಮ್ಮ ಲಿಂಕ್ಡ್‌ಇನ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದು, 'ಅಮೆರಿಕ ಕೈಗೊಂಡಿರುವ ನಿರ್ಧಾರದ ವಿರುದ್ಧ ದೂರು ನೀಡದೇ ನಮಗೆ ಬೇರೆ ಆಯ್ಕೆಯೇ ಇರಲಿಲ್ಲ' ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹಸೀನಾ ಹಸ್ತಾಂತರ ಇನ್ನೂ ಪ್ರತಿಕ್ರಿಯಿಸದ ಭಾರತ–ಯೂನುಸ್

ಢಾಕಾ (ಪಿಟಿಐ): 'ಭಾರತದಲ್ಲಿ ನೆಲಸಿರುವ ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರನ್ನು ದೇಶದ ಸುಪರ್ದಿಗೆ ಒಪ್ಪಿಸುವಂತೆ ಕೋರಿ ಬರೆದಿರುವ ಪತ್ರಕ್ಕೆ, ಭಾರತ ಸರ್ಕಾರದಿಂದ ಅಧಿಕೃತವಾಗಿ ಯಾವುದೇ ಪ್ರತಿಕ್ರಿಯೆ ಬಂದಿಲ್ಲ' ಎಂದು ಮಧ್ಯಂತರ ಸರ್ಕಾರದ ಮುಖ್ಯಸ್ಥರಾದ ಮೊಹಮ್ಮದ್ ಯೂನುಸ್ ಹೇಳಿದ್ದಾರೆ.

ಬ್ರಿಟನ್ ಮೂಲದ 'ಸ್ಕೈ ನ್ಯೂಸ್' ನೀಡಿರುವ ಸಂದರ್ಶನದಲ್ಲಿ ಅವರು, ಮಾನವೀಯತೆ ವಿರುದ್ಧದ ಅಪರಾಧಗಳಿಗೆ ಹಸೀನಾ ವಿಚಾರಣೆ ಎದುರಿಸಬೇಕಾಗಿದೆ ಎಂದು ಹೇಳಿದ್ದಾರೆ.

ಪೈಲಟ್‌ಗಳ ಜೀವರಕ್ಷಕ ವ್ಯವಸ್ಥೆಯ ಪರೀಕ್ಷೆ ಯಶಸ್ವಿ

ನವದೆಹಲಿ (ಪಿಟಿಐ): ತೇಜಸ್ ವಿಮಾನ ಹಾರಿಸುವ ಪೈಲಟ್‌ಗಳ ಜೀವರಕ್ಷಣೆಗೆ ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಪರಿಕರಗಳ ಪರೀಕ್ಷೆಯನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮಂಗಳವಾರ ಯಶಸ್ವಿಯಾಗಿ ನಡೆಸಿದೆ.

ಅತಿ ಎತ್ತರದಲ್ಲಿ ವಿಮಾನ ಹಾರಾಟದಲ್ಲಿರುವಾಗಲೇ ರಕ್ಷಣಾ ಪರಿಕರಗಳಗಳ ಪರೀಕ್ಷೆಯನ್ನು ಸಂಸ್ಥೆ ನಡೆಸಿತು.

ಪೈಲಟ್‌ಗಳು ಅತಿ ಎತ್ತರದಲ್ಲಿ ವಿಮಾನ ಹಾರಾಟ ನಡೆಸುವಾಗಲೂ ಅವರ ಉಸಿರಾಟವು ಸರಾಗವಾಗಿ ಇರುವಂತೆ ಮಾಡಬಲ್ಲ ಪರಿಕರಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಸಿಲಿಂಡರ್ ಆಧರಿತ ಆಮ್ಲಜನಕ ಸಾಂಪ್ರದಾಯಿಕ ವ್ಯವಸ್ಥೆ ಮೇಲಿನ ಅವಲಂಬನೆಯನ್ನು ತಪ್ಪಿಸಲಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಗಣಿಯಲ್ಲಿ ಅವಘಡ: ಇಬ್ಬರು ಕಾರ್ಮಿಕರ ಸಾವು

ಭಂಡಾರಾ (ಪಿಟಿಐ): ಮಹಾರಾಷ್ಟ್ರದ ಭಂಡಾರಾ ಜಿಲ್ಲೆಯ ಸರ್ಕಾರಿ ಸ್ವಾಮ್ಯದ ಮ್ಯಾಂಗನೀಸ್ ಅದಿರು (ಭಾರತ) ಲಿಮಿಟೆಡ್‌ನ ಚಿಖ್ಲಾ ಗಣಿಯಲ್ಲಿ ಚಪ್ಪಡಿ ಕುಸಿದು ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ. ಒಬ್ಬರು ಗಾಯಗೊಂಡಿದ್ದಾರೆ.

ಮೊದಲ ಪಾಳಿಯ ಕೆಲಸದ ವೇಳೆ ಬೆಳಿಗ್ಗೆ 9 ಗಂಟೆ ಸುಮಾರಿಗೆ ಈ ಅವಘಡ ಸಂಭವಿಸಿದ್ದು, ಗಣಿಯ 100 ಮೀಟರ್ ಆಳದಲ್ಲಿ ಚಪ್ಪಡಿ ಕುಸಿದಿದೆ. ಮೂವರು ಕಾರ್ಮಿಕರು ಚಪ್ಪಡಿಯ ಅಡಿ ಸಿಲುಕಿದರು. ಮಹಾರಾಷ್ಟ್ರದ ವಿಜಯ್ ನಂದಲಾಲ್ (50) ಮತ್ತು ಅರುಣ್ ಚೊರ್‌ಮಾರ್ (41) ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಭಂಡಾರಾ ಜಿಲ್ಲೆಯ ವಿಪತ್ತು ನಿರ್ವಹಣಾ ಕಚೇರಿ ಪ್ರಕಟಣೆ ತಿಳಿಸಿದೆ.

ಉಕ್ರೇನ್‌ನಿಂದ ಸಕಾರಾತ್ಮಕ ಹೆಜ್ಜೆ: ರಷ್ಯಾ

ಮಾಸ್ಕೊ (ಎಎಫ್‌ಪಿ): ಮೂರು ವರ್ಷಗಳಿಂದ ನಡೆಯುತ್ತಿರುವ ಯುದ್ಧಕ್ಕೆ ಅಂತ್ಯ ಹಾಡುವುದಕ್ಕಾಗಿ ಮಾತುಕತೆ ನಡೆಸಲು ಸಿದ್ಧ ಎಂಬುದಾಗಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿರುವುದು ಈ ನಿಟ್ಟಿನಲ್ಲಿನ 'ಸಕಾರಾತ್ಮಕ ಹೆಜ್ಜೆ' ಎಂದು ರಷ್ಯಾ ಬುಧವಾರ ಹೇಳಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಕ್ರೆಮ್ಲಿನ್ ವಕ್ತಾರ ಡಿಮಿತ್ರಿ ಪೆಸ್ಕೋವ್, 'ಸಾಮಾನ್ಯವಾಗಿ, ಶಾಂತಿ ಸ್ಥಾಪನೆ ಉದ್ದೇಶಕ್ಕೆ ಇಂತಹ ವಿಧಾನದ ಮೊರೆ ಹೋಗಲಾಗುತ್ತದೆ. ಇದು ಸಕಾರಾತ್ಮಕವಾದ ಹೆಜ್ಜೆ' ಎಂದಿದ್ದಾರೆ.

ಔರಂಗಜೇಬ್‌ನನ್ನು ಶ್ಲಾಘಿಸಿದ ಅಬೂ ಆಜ್ಮಿ ವಿರುದ್ಧ ಉತ್ತರ ಪ್ರದೇಶ ಸಿ.ಎಂ ಯೋಗಿ ಕಿಡಿ

‘ನಮ್ಮಲ್ಲಿಗೆ ಕಳಿಸಿ ನೋಡಿಕೊಳ್ಳುತ್ತೇವೆ’

ಪ್ರಜಾವಾಣಿ ವಾರ್ತೆ

ಲಖನೌ: ‘ಮೊಘಲ್ ದೊರೆ ಔರಂಗಜೇಬ್‌ನನ್ನು ಹೊಗಳಿದ ಮಹಾರಾಷ್ಟ್ರದ ಶಾಸಕ ಅಬೂ ಆಜ್ಮಿ ಅವರನ್ನು ಸಮಾಜವಾದಿ ಪಕ್ಷದಿಂದ ಉಚ್ಚಾಟನೆ ಮಾಡಿ ಉತ್ತರ ಪ್ರದೇಶಕ್ಕೆ ಕಳುಹಿಸಿ.



ಯೋಗಿ ಆದಿತ್ಯನಾಥ

ಇಂಥವರಿಗೆ ಹೇಗೆ ಪಾಠ ಕಲಿಸಬೇಕು ಎಂದು ನಮ್ಮ ಸರ್ಕಾರಕ್ಕೆ ಗೊತ್ತು’ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಬುಧವಾರ ಹೇಳಿದರು.

ವಿಧಾನಸಭೆಯಲ್ಲಿ ಮಾತನಾಡಿದ ಅವರು, ‘ಅವರನ್ನು ಇಲ್ಲಿಗೆ ಕರೆತನ್ನಿ, ಇಲ್ಲಿ ‘ಚೆನ್ನಾಗಿ’ ನೋಡಿಕೊಳ್ಳುತ್ತೇವೆ’ ಎಂದು ಮಾರ್ಮಿಕವಾಗಿ ಹೇಳಿದರು.

ಸಮಾಜವಾದಿ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ‘ಹಿಂದೂಗಳ ಮೇಲೆ ಜಜಿಯಾ ತೆರಿಗೆ ವಿಧಿಸುತ್ತಿದ್ದ, ಬಾಯಾರಿದ ತಂದೆಗೇ ಗುಟುಕು ನೀರು ನೀಡದ ಔರಂಗಜೇಬ್‌ನನ್ನು ಆ ಪಕ್ಷವು ಮಾದರಿಯಾಗಿ ಪರಿಗಣಿಸಿದೆ’ ಎಂದು ಹರಿಹಾಯ್ದರು.

‘ಸಮಾಜವಾದಿ ಪಕ್ಷಕ್ಕೆ ತನ್ನ ಶಾಸಕರ ಮೇಲೆ ನಿಯಂತ್ರಣ ಇಲ್ಲ. ಅದು ಆಜ್ಮಿ ಅವರ ಹೇಳಿಕೆಯನ್ನು ಖಂಡಿಸಿ, ಅವರನ್ನು ಉಚ್ಚಾಟನೆ ಮಾಡಬೇಕು’ ಎಂದರು.

‘ಪಕ್ಷವು ಸಮಾಜವಾದಿ ನಾಯಕ ರಾಮ ಮನೋಹರ್ ಲೋಹಿಯಾ ಅವರ ಸಿದ್ಧಾಂತದಿಂದ ವಿಮುಖವಾಗುತ್ತಿದೆ. ಭಾರತದ ಪರಂಪರೆಯನ್ನು ಹೆಮ್ಮೆಯಾಗಿ ಸ್ವೀಕರಿಸದಿದ್ದರೂ ಅಡ್ಡಿಯಿಲ್ಲ. ಆದರೆ, ಲೋಹಿಯಾ ಅವರ ಸಿದ್ಧಾಂತವನ್ನಾದರೂ ಪಾಲಿಸಲಿ’ ಎಂದು ಹೇಳಿದರು.

ಕ್ಷೇತ್ರದ ಜನರಿಗೆ ಮಾಡಿರುವ ಅನ್ಯಾಯ: ಆಜ್ಮಿ



ಅಮಾನತು ಬೆನ್ನಲ್ಲೇ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿರುವ ಆಜ್ಮಿ, ‘ಇದು ನನಗೆ ಮಾತ್ರ ಅಲ್ಲ, ನಾನು ಪ್ರತಿನಿಧಿಸುವ ಕ್ಷೇತ್ರದ ಲಕ್ಷಾಂತರ ಜನರಿಗೆ ಮಾಡಿರುವ ಅನ್ಯಾಯ. ಸದನದ ಒಳಗೆ ಯಾವುದೇ ಹೇಳಿಕೆ ನೀಡಿಲ್ಲ; ಹೊರಗೆ ನೀಡಿದ್ದೇನೆ. ಆದರೂ ಅಮಾನತು ಮಾಡಲಾಗಿದೆ’ ಎಂದು ಹೇಳಿದ್ದಾರೆ.

‘ಸ್ಪೀಕರ್ ರಾಹುಲ್ ನಾರ್ವೇಕರ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸುತ್ತೇನೆ. ಅಗತ್ಯ ಬಿದ್ದರೆ ನ್ಯಾಯಾಲಯಕ್ಕೂ ಹೋಗುತ್ತೇನೆ’ ಎಂದಿದ್ದಾರೆ.

ಇದಕ್ಕೂ ಮುನ್ನ ‘ಎಕ್ಸ್’ನಲ್ಲಿ, ‘ನನ್ನ ಹೇಳಿಕೆಯನ್ನು ತಿರುಚಲಾಗಿದೆ. ಇತಿಹಾಸಕಾರರು ಮತ್ತು ಲೇಖಕರು ಹೇಳಿದ್ದನ್ನೇ ನಾನೂ ಹೇಳಿದ್ದೇನೆ. ಶಿವಾಜಿ ಮಹಾರಾಜ, ಸಂಭಾಜಿ ಮಹಾರಾಜರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿಲ್ಲ. ಆದಾಗ್ಯೂ ಹೇಳಿಕೆಯಿಂದ ಯಾರಿಗಾದರೂ ನೋವಾಗಿದ್ದರೆ ಅದನ್ನು ವಾಪಸ್ ಪಡೆಯುತ್ತೇನೆ’ ಎಂದು ಹೇಳಿದ್ದಾರೆ.

ವಿಧಾನಸಭೆಯಿಂದ ಆಜ್ಮಿ ಅಮಾನತು

ಮುಂಬೈ (ಪಿಟಿಐ): ಔರಂಗಜೇಬ್‌ನನ್ನು ಹೊಗಳಿದ ಆರೋಪಕ್ಕೆ ಸಂಬಂಧಿಸಿದಂತೆ, ಸಮಾಜವಾದಿ ಪಕ್ಷದ ಶಾಸಕ ಅಬೂ ಆಜ್ಮಿ ಅವರನ್ನು ಮಹಾರಾಷ್ಟ್ರ ವಿಧಾನಸಭೆಯಿಂದ ಹಾಲಿ ಬಜೆಟ್ ಅಧಿವೇಶದ ಅಂತ್ಯದವರೆಗೆ ಅಮಾನತು ಮಾಡಲಾಗಿದೆ.

ಬಜೆಟ್ ಅಧಿವೇಶನವು ಮಾ.26ರಂದು ಮುಕ್ತಾಯಗೊಳ್ಳಲಿದೆ.

ಔರಂಗಜೇಬ್ ಕಾಲದಲ್ಲಿ ಭಾರತದ ಗಡಿಯು ಅಫ್ಗಾನಿಸ್ತಾನ ಮತ್ತು ಬರ್ಮಾವರೆಗೆ (ಮ್ಯಾನ್ಮಾರ್) ವಿಸ್ತರಿಸಿತ್ತು ಎಂದು ಆಜ್ಮಿ ಹೇಳಿದ್ದರು.

‘ದ್ವೇಷ ಮಿತಿಮೀರಿದೆ’

ಪಣಜಿ: ಗೋವಾದಲ್ಲಿ ಮಹಾರಾಷ್ಟ್ರದ ಮೇಲಿನ ದ್ವೇಷವು ನಂಬಲಾಗದ ಸ್ಥಿತಿಗೆ ತಲುಪಿದೆ ಎಂದು ಆಜ್ಮಿ ಸೊಸೆ, ಅಬೂ ಫರ್ಹಾನ್ ಆಜ್ಮಿ ಅವರ ಪತ್ನಿ, ನಟಿ ಆಯೇಶಾ ಟಾಕಿಯಾ ಹೇಳಿದರು.

ಸೂಪರ್‌ಮಾರ್ಕೆಟ್ ಪ್ರದೇಶದಲ್ಲಿ ಹೊಡೆದಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಅಬೂ ಫರ್ಹಾನ್ ಅವರ ವಿರುದ್ಧ ಪ್ರಕರಣ ದಾಖಲಾದ ಬೆನ್ನಲ್ಲೇ ಈ ಹೇಳಿಕೆ ನೀಡಿದರು. ಇನ್‌ಸ್ಟಾಗ್ರಾಂನಲ್ಲಿ ಸರಣಿ ಪೋಸ್ಟ್ ಮಾಡಿರುವ ಆಯೇಶಾ, ಸ್ಥಳೀಯ ಗೂಂಡಾಗಳು ಪತಿ ಮತ್ತು ಪುತ್ರನಿಗೆ ಬೆದರಿಸಿದ್ದಾರೆ, ಹಲವು ಗಂಟೆ ಚಿತ್ರಹಿಂಸೆ ನೀಡಿದ್ದಾರೆ ಎಂದರು.

ಜೆನೆರಿಕ್ ಪಶು ಔಷಧ ಪೂರೈಕೆಗೆ ಸಂಪುಟ ಒಪ್ಪಿಗೆ

ಜಾನುವಾರು ರೋಗ ನಿಯಂತ್ರಣಕ್ಕೆ ₹3,880 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ (ಎಲ್‌ಎಚ್‌ಡಿಸಿಪಿ) ಬದಲಾವಣೆ ಮಾಡಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಈ ಕಾರ್ಯಕ್ರಮದಡಿ ರೈತರಿಗೆ ಉತ್ತಮ ಗುಣಮಟ್ಟದ ಹಾಗೂ ಕೈಗೆಟಕುವ ಜೆನೆರಿಕ್ ಪಶು ವೈದ್ಯಕೀಯ ಔಷಧ ವಿತರಿಸಲಾಗುತ್ತದೆ. ಈ ಯೋಜನೆಗೆ 2024-25 ಮತ್ತು 2025-26ರಲ್ಲಿ ₹3,880 ಕೋಟಿ ಒದಗಿಸಲಾಗುವುದು ಎಂದು ಕೇಂದ್ರ ವಾರ್ತಾ ಹಾಗೂ ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಜಾನುವಾರುಗಳ ಆರೋಗ್ಯಕ್ಕೆ ಸಂಬಂಧಿಸಿದ ಮಹತ್ವದ ನಿರ್ಧಾರವನ್ನು ಸಂಪುಟದಲ್ಲಿ ತೆಗೆದುಕೊಳ್ಳಲಾಗಿದೆ. ಯೋಜನೆಯ ಪಶು ಔಷಧ ಘಟಕದಡಿಯಲ್ಲಿ ಉತ್ತಮ ಗುಣಮಟ್ಟದ ಔಷಧಗಳನ್ನು ಒದಗಿಸಲಾಗುವುದು. ಪಶು ಔಷಧವು ಜನೌಷಧ ಯೋಜನೆಯಂತೆಯೇ ಇರುತ್ತದೆ. ಜೆನೆರಿಕ್ ಪಶುವೈದ್ಯಕೀಯ ಔಷಧಗಳನ್ನು ಪ್ರಧಾನ ಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರಗಳು ಮತ್ತು ಸಹಕಾರಿ ಸಂಸ್ಥೆಗಳ ಮೂಲಕ ವಿತರಿಸಲಾಗುವುದು’ ಎಂದು ಅವರು ಹೇಳಿದರು.



ಜೆನೆರಿಕ್ ಪಶುವೈದ್ಯಕೀಯ ಔಷಧ ಪೂರೈಸಲು ಮತ್ತು ಪಶು ಔಷಧ ಘಟಕದ ಅಡಿಯಲ್ಲಿ ಔಷಧಗಳ ಮಾರಾಟಕ್ಕೆ ಪ್ರೋತ್ಸಾಹಧನ ನೀಡಲು ₹75 ಕೋಟಿ ಒದಗಿಸಲಾಗುತ್ತದೆ ಎಂದರು.

‘ಈ ಯೋಜನೆಯು ರಾಷ್ಟ್ರೀಯ ಪ್ರಾಣಿ ರೋಗ ನಿಯಂತ್ರಣ ಕಾರ್ಯಕ್ರಮ, ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಮತ್ತು ಪಶು ಔಷಧ ಘಟಕಗಳನ್ನು ಒಳಗೊಂಡಿದೆ. ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದ ಮೂಲಕ ಕಾಲುಬಾಯಿ ರೋಗ ಸೇರಿದಂತೆ ವಿವಿಧ ಕಾಯಿಲೆಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತದೆ. ಕರ್ನಾಟಕ ಸೇರಿದಂತೆ ಒಂಬತ್ತು ರಾಜ್ಯಗಳು ಕಾಲುಬಾಯಿ ರೋಗ ಮುಕ್ತವೆಂದು ಘೋಷಿಸಲು ಸಿದ್ಧವಾಗಿದೆ’ ಎಂದು ಅವರು ತಿಳಿಸಿದರು.

ಕೇದರನಾಥಕ್ಕೆ ರೋಪ್‌ವೇ: ‘ಉತ್ತರಾಖಂಡದಲ್ಲಿ ಎರಡು ರೋಪ್‌ವೇ ಯೋಜನೆಗಳಿಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ₹4,081 ಕೋಟಿ ವೆಚ್ಚದಲ್ಲಿ ಸೋನ್ ಪ್ರಯಾಗ್‌ನಿಂದ ಕೇದಾರನಾಥಕ್ಕೆ (12.9 ಕಿಮೀ) ಮತ್ತು ₹2,730 ಕೋಟಿ ವೆಚ್ಚದಲ್ಲಿ ಗೋವಿಂದಘಾಟ್‌ನಿಂದ ಹೇಮಕುಂಡ್ ಸಾಹಿಬ್ ಜಿ (12.4 ಕಿಮೀ) ವರೆಗೆ ರೋಪ್‌ವೇ ನಿರ್ಮಿಸಲಾಗುವುದು. ಇವುಗಳ ಕಾಮಗಾರಿ 4-6 ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಸಚಿವರು ಮಾಹಿತಿ ನೀಡಿದರು. ಪ್ರಸ್ತುತ ಈ ಪ್ರದೇಶಗಳಿಗೆ ಕಾಲ್ನಡಿಗೆ, ಕುದುರೆ, ಪಲ್ಲಕ್ಕಿ ಅಥವಾ ಹೆಲಿಕಾಪ್ಟರ್ ಮೂಲಕ ಯಾತ್ರಾರ್ಥಿಗಳು ಸಾಗುತ್ತಾರೆ.

ರೈತನ ಕೊಂದ ಕಾಡಾನೆ ಹಿಂಡು

ರಾಮಗಢ (ಜಾರ್ಖಂಡ್) (ಪಿಟಿಐ): ಜಾರ್ಖಂಡ್‌ನ ರಾಮಗಢ ಜಿಲ್ಲೆಯಲ್ಲಿ ಕಾಡಾನೆಗಳ ಹಿಂಡೊಂದು ರೈತರೊಬ್ಬರ ಮೇಲೆ ಬುಧವಾರ ದಾಳಿ ಮಾಡಿದ್ದು, ತುಳಿದು ಸಾಯಿಸಿವೆ.

ರಾಮಗಢ ಜಿಲ್ಲೆಯ ಅರಣ್ಯವೊಂದರಲ್ಲಿ ಈ ಘಟನೆ ಜರುಗಿದೆ. ಮೃತರನ್ನು ಮೇಘನಾಥ ಮುಂಡಾ (30) ಎಂದು ಗುರುತಿಸಲಾಗಿದೆ.

‘ರೈತ ಮೇಘನಾಥ ಅವರು ಅರಣ್ಯಕ್ಕೆ ತೆರಳಿದ್ದ ವೇಳೆ, ಕಾಡಾನೆಗಳ ಗುಂಪು ಅವರ ಮೇಲೆ ದಾಳಿ ಮಾಡಿದೆ. ಘಟನೆ ಜರುಗಿದ ನಂತರ, ಆರು ಆನೆಗಳಿರುವ ಹಿಂಡು ಅರಣ್ಯದಲ್ಲಿ ಪತ್ತೆಯಾಗಿದೆ. ಅರಣ್ಯ ರಕ್ಷಣಾ ಸಿಬ್ಬಂದಿ ಹಾಗೂ ಸ್ಥಳೀಯ ಆಡಳಿತವು ಈ ಹಿಂಡಿನ ಚಲನವಲನಗಳ ಮೇಲೆ ಕಣ್ಣಿಟ್ಟಿವೆ’ ಎಂದು ರಾಮಗಢ ವಿಭಾಗೀಯ ಅರಣ್ಯ ಅಧಿಕಾರಿ ನಿತಿನ್ ಕುಮಾರ್ ತಿಳಿಸಿದ್ದಾರೆ.



ರೈತರ ಪ್ರತಿಭಟನೆ...

ಕೃಷಿ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಚಂಡೀಗಢದಲ್ಲಿ ಪ್ರತಿಭಟನೆ ನಡೆಸಲು ಹೊರಟಿದ್ದ ಸಂಯುಕ್ತ ಕಿಸಾನ್ ಮೋರ್ಚಾದ ಸದಸ್ಯರನ್ನು ಪೊಲೀಸರು ಅಮೃತಸರದಲ್ಲಿ ಬುಧವಾರ ತಡೆದರು. ಈ ವೇಳೆ ಪ್ರತಿಭಟನೆನಿರತ ರೈತರು ಪಂಜಾಬ್ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು – ಪಿಟಿಐ ಚಿತ್ರ

ದಕ್ಷಿಣದ ಸಂಸದರ ಜಂಟಿ ಕ್ರಿಯಾ ಸಮಿತಿ ರಚಿಸಲು ಸ್ಟಾಲಿನ್ ಸಲಹೆ

ಕ್ಷೇತ್ರ ಮರುವಿಂಗಡಣೆ: ಜಾಗೃತಿಗೆ ಕರೆ

ಚೆನ್ನೈ (ಪಿಟಿಐ): ‘ಲೋಕಸಭೆ ಕ್ಷೇತ್ರಗಳ ಮರುವಿಂಗಡಣೆಗೆ 1971ರ ಜನಗಣತಿಯೇ ಆಧಾರ ಆಗಿರಬೇಕು’ ಎಂಬ ಹಕ್ಕೊತ್ತಾಯ ಮಂಡಿಸಲು ದಕ್ಷಿಣ ರಾಜ್ಯಗಳ ಸಂಸದರು ಮತ್ತು ಪಕ್ಷಗಳ ಪ್ರತಿನಿಧಿಗಳ ಜಂಟಿ ಕ್ರಿಯಾ ಸಮಿತಿ ರಚಿಸಬೇಕು ಎಂದು ತಮಿಳುನಾಡು ಸಲಹೆ ಮಾಡಿದೆ.

ಕ್ಷೇತ್ರ ಪುನರ್‌ವಿಂಗಡಣೆ ಕುರಿತು ಚರ್ಚೆಗೆ ಬುಧವಾರ ಇಲ್ಲಿ ನಡೆದ ಸರ್ವಪಕ್ಷಗಳ ಸಭೆಯಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಈ ಕುರಿತ ನಿರ್ಣಯ ಮಂಡಿಸಿದರು.

1971ರ ಜನಗಣತಿಯೇ ಆಧಾರವಾಗಿರಬೇಕು ಎಂದು ಸಂವಿಧಾನಕ್ಕೆ ತಿದ್ದುಪಡಿ ತರಬೇಕು. ಮುಂದಿನ 30 ವರ್ಷಗಳಲ್ಲಿ (2056ರವರೆಗೆ) ಕ್ಷೇತ್ರ ಪುನರ್‌ವಿಂಗಡಣೆಗೆ 1971ರ ಗಣತಿ ಅಂಕಿಅಂಶಗಳೇ ಆಧಾರ ಎಂದು ಪ್ರಧಾನಿ ಸಂಸತ್ತಿನಲ್ಲೇ ಭರವಸೆ ನೀಡಬೇಕು ಎಂದೂ ಒತ್ತಾಯಿಸಿದರು.

ದಕ್ಷಿಣ ರಾಜ್ಯಗಳ ಸಂಸದರು ಹಾಗೂ ವಿವಿಧ ಪಕ್ಷಗಳ ಪ್ರತಿನಿಧಿಗಳಿರುವ ಜಂಟಿ ಕ್ರಿಯಾ ಸಮಿತಿಯನ್ನು ರಚಿಸಿ, ಈ ಸಮಿತಿಯು ಬೇಡಿಕೆ ಅನುಷ್ಠಾನಕ್ಕೆ ಒತ್ತು ನೀಡಬೇಕು ಹಾಗೂ ಸಮಾಜದಲ್ಲೂ ಈ ಕುರಿತಂತೆ ಜಾಗೃತಿ ಮೂಡಿಸಬೇಕು ಎಂದು ಸಲಹೆ ಮಾಡಿದರು.

ರಾಜ್ಯದ ಪ್ರಮುಖ ವಿರೋಧಪಕ್ಷ ಎಐಎಡಿಎಂಕೆ, ಕಾಂಗ್ರೆಸ್, ಎಡಪಕ್ಷಗಳು, ನಟ– ರಾಜಕಾರಣಿ ವಿಜಯ್ ಅವರ ಟಿವಿಕೆ ಪಕ್ಷಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಬಿಜೆಪಿ, ತಮಿಳ್ ರಾಷ್ಟ್ರೀಯ ನಾಮ್ ತಮಿಳರ್ ಕಚ್ಚಿ (ಎನ್‌ಟಿಕೆ), ಮಾಜಿ ಕೇಂದ್ರ ಸಚಿವ ಜಿ.ಕೆ.ವಾಸನ್ ಅವರ ತಮಿಳ್ ಮಾನಿಲಾ ಕಾಂಗ್ರೆಸ್ (ಮೂಪನಾರ್) ಸಭೆಯನ್ನು ಬಹಿಷ್ಕರಿಸಿದ್ದವು.

ಮುಖ್ಯಾಂಶಗಳು

- ಸರ್ವಪಕ್ಷ ಸಭೆಗೆ ಬಿಜೆಪಿ ಸೇರಿ ಕೆಲ ಪಕ್ಷಗಳ ಬಹಿಷ್ಕಾರ
- ಈಗಿನ ಜನಸಂಖ್ಯೆ ಆಧರಿಸಿ ಪುನರ್‌ವಿಂಗಡಣೆಗೆ ವಿರೋಧ
- ದಕ್ಷಿಣ ರಾಜ್ಯಗಳಿಗೆ ‘ಶಿಕ್ಷೆ’ ಆಗುವುದು ಬೇಡ ಎಂದು ಪ್ರತಿಪಾದನೆ



ಕ್ಷೇತ್ರ ಮರುವಿಂಗಡಣೆ ಎಂಬ ತೂಗುಗತ್ತಿ ದಕ್ಷಿಣ ರಾಜ್ಯಗಳು ಮತ್ತು ತಮಿಳುನಾಡಿನ ಮೇಲೆ ತೂಗಾಡುತ್ತಿದೆ. ಕ್ಷೇತ್ರಗಳ ಸಂಖ್ಯೆ ತಗ್ಗಿದರೆ ಪ್ರತಿಕೂಲ ಪರಿಣಾಮವಾಗಲಿದೆ

ಎಂ.ಕೆ.ಸ್ಟಾಲಿನ್
ತಮಿಳುನಾಡು ಮುಖ್ಯಮಂತ್ರಿ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇತ್ತೀಚೆಗೆ, ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಯಿಂದ ದಕ್ಷಿಣರಾಜ್ಯಗಳ ಮೇಲೆ ನಕಾರಾತ್ಮಕ ಪರಿಣಾಮಆಗುವುದಿಲ್ಲ.ಈ ವಿಷಯದಲ್ಲಿ ಸ್ಟಾಲಿನ್ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದರು. ತಮಿಳುನಾಡು ಅಲ್ಲದೆ, ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ತೆಲಂಗಾಣದ ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ಅವರೂ ಶಾ ಹೇಳಿಕೆ ಬಗೆಗೆ ಶಂಕೆ ವ್ಯಕ್ತಪಡಿಸಿದ್ದಾರೆ.

ಡಿಎಂಕೆ ಕೌನ್ಸಿಲರ್‌ನಿಂದ ಬಳೆ ಕಳವಿಗೆ ಯತ್ನ?

ಚೆನ್ನೈ: ಹಿಂದಿ ಭಾಷೆಯ ಹೇರಿಕೆ ವಿರೋಧಿಸಿ ಪ್ರತಿಜ್ಞಾವಿಧಿ ಸ್ವೀಕರಿಸುವ ವೇಳೆ ಡಿಎಂಕೆ ನಾಯಕ ಜಾಕೀರ್ ಹುಸೇನ್, ಮಹಿಳೆಯೊಬ್ಬರು ಧರಿಸಿದ್ದ ಚಿನ್ನದ ಕಳವಿಗೆ ಯತ್ನಿಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ರಾಜ್ಯ ಬಿಜೆಪಿ ಅಧ್ಯಕ್ಷ ಕೆ.ಅಣ್ಣಾಮಲೈ ಈ ಆರೋಪ ಮಾಡಿದ್ದು, ಪೂರಕವಾಗಿ ಬುಧವಾರ ‘ಎಕ್ಸ್’ನಲ್ಲಿ ವಿಡಿಯೊ ಹಂಚಿಕೊಂಡಿದ್ದಾರೆ.

ಪ್ರತಿಜ್ಞಾವಿಧಿ ಸ್ವೀಕರಿಸಲು ಎಲ್ಲ ಕೈ ಮುಂದೆ ಚಾಚಿದ್ದಾಗ, ವ್ಯಕ್ತಿಯೊಬ್ಬರು ಮಹಿಳೆ ಕೈನಿಂದ ಬಳೆ ತೆಗೆಯಲು ಯತ್ನಿಸುತ್ತಿರುವುದು ವಿಡಿಯೊದಲ್ಲಿದೆ.

ಸಂಕ್ಷಿಪ್ತ ಸುದ್ದಿ

‘ಎಸ್‌ಸಿ, ಎಸ್‌ಟಿ ಹಾಸ್ಟೆಲ್‌ಗೆ ಅಂಬೇಡ್ಕರ್ ಹೆಸರು’

ಲಖನೌ (ಉತ್ತರ ಪ್ರದೇಶ) (ಪಿಟಿಐ): ರಾಜ್ಯದಲ್ಲಿನ ಎಲ್ಲ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿದ ವಿದ್ಯಾರ್ಥಿ ನಿಲಯಗಳಿಗೆ ‘ಬಾಬಾ ಸಾಹೇಬ್ ಅಂಬೇಡ್ಕರ್’ ಅವರ ಹೆಸರಿಡಲಾಗುವುದು ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಬಜೆಟ್ ಚರ್ಚೆಯ ಸಂದರ್ಭದಲ್ಲಿ ಮಾತಾನಾಡಿದ ಆದಿತ್ಯನಾಥ ಅವರು, ‘ಸಂವಿಧಾನವನ್ನು ರಕ್ಷಿಸುವುದಾಗಿ ಹೇಳಿದ್ದ ವಿರೋಧ ಪಕ್ಷವು, ಅಂಬೇಡ್ಕರ್ ಮತ್ತು ಇತರ ದಲಿತ ಮತ್ತು ಹಿಂದುಳಿದ ನಾಯಕರನ್ನು ಗೌರವಿಸಲು ವಿಫಲವಾಗಿದೆ’ ಎಂದು ಆರೋಪಿಸಿದರು.

ನಕ್ಸಲ್ ಮಹಿಳೆ ಬಂಧನ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನೆಲಸಿ, ನಕಲಿ ಹೆಸರಿಟ್ಟುಕೊಂಡು ಮನೆಗೆಲಸ ವೃತ್ತಿ ಮಾಡುತ್ತಿದ್ದ 23 ವರ್ಷದ ನಕ್ಸಲ್ ಮಹಿಳೆಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದರು.



ಮಹಿಳೆ ಮೂಲತಃ ಜಾರ್ಖಂಡ್‌ನ ಕುದಾಬೂರು ಗ್ರಾಮದವರು. ಹಲವು ಎನ್‌ಕೌಂಟರ್ ಪ್ರಕರಣಗಳಲ್ಲಿ ಈಕೆ ಪೊಲೀಸರಿಗೆ ಬೇಕಾಗಿದ್ದರು. ಐಪಿಸಿಯ ವಿವಿಧ ಸೆಕ್ಷನ್, ಸಶಸ್ತ್ರ ಕಾಯ್ದೆ, ಸ್ಫೋಟಕ ಕಾಯ್ದೆಗಳಡಿ ಈಕೆ ವಿರುದ್ಧ ಪ್ರಕರಣ ದಾಖಲಾಗಿವೆ ಎಂದು ಅವರು ತಿಳಿಸಿದರು.

ಜಾರ್ಖಂಡ್‌ನ ನ್ಯಾಯಾಲಯವೊಂದು 2023 ಮಾರ್ಚ್ 26ರಂದು ಇವರ ವಿರುದ್ಧ ಜಾಮೀನುರಹಿತ ವಾರಂಟ್ ಜಾರಿ ಮಾಡಿತ್ತು.

‘ಗುಪ್ತಚರ ಮಾಹಿತಿ ಆಧರಿಸಿ ಮಾ.4ರಂದು ನಕ್ಸಲ್ ಮಹಿಳೆಯನ್ನು ಬಂಧಿಸಲಾಯಿತು’ ಎಂದು ರಾಷ್ಟ್ರ ರಾಜಧಾನಿ ಪ್ರದೇಶದ ಉಪ ಪೊಲೀಸ್ ಆಯುಕ್ತ ವಿಕ್ರಂ ಸಿಂಗ್ ತಿಳಿಸಿದರು.

ರೈತ ಕುಟುಂಬದಲ್ಲಿ ಜನಿಸಿದ್ದ ಮಹಿಳೆ, 10ನೇ ವಯಸ್ಸಿನಲ್ಲಿಯೇ ನಕ್ಸಲ್ ಸಂಘಟನೆ ಸೇರಿದ್ದರು. ಐದು ವರ್ಷ ಇವರಿಗೆ ತರಬೇತಿ ನೀಡಲಾಗಿತ್ತು ಎಂದು ಮಾಹಿತಿ ನೀಡಿದರು.

ಬೊಫೋರ್ಸ್ ಹಗರಣ: ಅಮೆರಿಕದ ವ್ಯಕ್ತಿಯಿಂದ ಮಾಹಿತಿ ಕೋರಿದ ಸಿಬಿಐ

ನವದೆಹಲಿ (ಪಿಟಿಐ): ₹64 ಕೋಟಿ ಮೊತ್ತದ ಬೊಫೋರ್ಸ್ ಲಂಚ ಪ್ರಕರಣಕ್ಕೆ ಸಂಬಂಧಿಸಿದ ಮಹತ್ವದ ಮಾಹಿತಿಯನ್ನು ಖಾಸಗಿ ತನಿಖಾ ವ್ಯಕ್ತಿ ಮೈಕೆಲ್ ಹರ್ಷ್‌ಮನ್ ಅವರಿಂದ ಕೊಡಿಸಬೇಕು ಎಂಬ ಮನವಿಯನ್ನು ಸಿಬಿಐ ಅಧಿಕಾರಿಗಳು ಅಮೆರಿಕದ ಮುಂದೆ ಇರಿಸಿದ್ದಾರೆ.

1980ರ ದಶಕದ ಈ ಹಗರಣಕ್ಕೆ ಸಂಬಂಧಿಸಿದ ಮಹತ್ವದ ಕೆಲವು ಮಾಹಿತಿಯನ್ನು ಭಾರತದ ತನಿಖಾ ಸಂಸ್ಥೆಗಳ ಜೊತೆ ಹಂಚಿಕೊಳ್ಳುವ ಇಂಗಿತವನ್ನು ಹರ್ಷ್‌ಮನ್ ಅವರು ಈ ಹಿಂದೆ ವ್ಯಕ್ತಪಡಿಸಿದ್ದರು. ಹರ್ಷ್‌ಮನ್ ಅವರು ಫೇರ್‌ಫ್ಯಾಕ್ಸ್ ಗ್ರೂಪ್‌ನ ಮುಖ್ಯಸ್ಥ. ಇವರು 2017ರಲ್ಲಿ ಭಾರತದಲ್ಲಿ ನಡೆದ ಖಾಸಗಿ ಪತ್ತೇದಾರರ ಸಮಾವೇಶದಲ್ಲಿ ಭಾಗಿಯಾಗಿದ್ದರು.

ಭಾರತದಲ್ಲಿ ಇದ್ದಾಗ ಅವರು ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ಹಿಂದೆ ಕಾಂಗ್ರೆಸ್ ನೇತೃತ್ವದ ಸರ್ಕಾರವು ಹಗರಣದ ತನಿಖೆಯ ಹಳಿತಪ್ಪಿಸಿತ್ತು ಎಂದು ದೂರಿದ್ದರು.

ವಿದೇಶಗಳಲ್ಲಿ ಇರುವ ಭಾರತೀಯರು ಕರೆನ್ಸಿ ನಿಯಂತ್ರಣ ಕಾನೂನುಗಳನ್ನು ಉಲ್ಲಂಘಿಸಿದ್ದರೆ, ಹಣದ ಅಕ್ರಮ ವರ್ಗಾವಣೆಯಲ್ಲಿ ತೊಡಗಿದ್ದರೆ ಅದರ ಬಗ್ಗೆ ತನಿಖೆ ನಡೆಸಲು ಮತ್ತು ಅಂತಹ ಆಸ್ತಿಗಳ ಮೇಲೆ ಕಣ್ಣಿಡಲು ತಮ್ಮನ್ನು ಕೇಂದ್ರ ಹಣಕಾಸು ಸಚಿವಾಲಯವು 1986ರಲ್ಲಿ ನೇಮಿಸಿತ್ತು. ಆ ಪೈಕಿ ಕೆಲವು ಆಸ್ತಿಗಳು ಬೊಫೋರ್ಸ್ ಒಪ್ಪಂದಕ್ಕೆ ಸಂಬಂಧಿಸಿದವು ಎಂದು ಸಂದರ್ಶನವೊಂದರಲ್ಲಿ ಅವರು ಹೇಳಿದ್ದರು.

ಹರ್ಷ್‌ಮನ್ ಅವರನ್ನು ಈ ಕೆಲಸಕ್ಕೆ ಗೊತ್ತುಮಾಡಿದ್ದರ ಬಗ್ಗೆ ಮತ್ತು ಅವರು ಯಾವುದಾದರೂ ವರದಿಯನ್ನು ಸಲ್ಲಿಸಿದ್ದರೆ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ಸಿಬಿಐ ಅಧಿಕಾರಿಗಳು ಹಣಕಾಸು ಸಚಿವಾಲಯವನ್ನು ಕೋರಿದ್ದರು. ಆದರೆ ಆಗಿನ ದಾಖಲೆಗಳು ಸಿಬಿಐಗೆ ಸಿಕ್ಕಿರಲಿಲ್ಲ.


ಅಮೆರಿಕದ ಅಧಿಕಾರಿಗಳಿಗೆ 2023, 2024ರಲ್ಲಿ ಕಳುಹಿಸಿದ ಮನವಿಗಳಿಗೆ ಸ್ಪಂದನ ದೊರೆತಿರದ ಕಾರಣಕ್ಕೆ ಈಗ ನ್ಯಾಯಾಂಗದ ಮೂಲಕ ಮನವಿ ಮಾಡಲಾಗಿದೆ.

‘ಮೋದಿ ಆಡಳಿತದಲ್ಲಿ ಚಿನ್ನ ಅಡಮಾನ ಹೆಚ್ಚಳ’

ನವದೆಹಲಿ: ‘ಮಂಗಳ ಸೂತ್ರಗಳನ್ನು ಕಳ್ಳತನ ಮಾಡುತ್ತಾರೆ ಎಂಬ ಪ್ರಧಾನಿ ನರೇಂದ್ರ ಮೋದಿಯವರ ಮಾತು ನಿಜವಾಗಿದೆ. ಅವರ ಆಡಳಿತದಲ್ಲಿ ಹಣದುಬ್ಬರದಿಂದ ಮಹಿಳೆಯರು ತಮ್ಮ ಚಿನ್ನದ ಆಭರಣಗಳನ್ನು ಅಡಮಾನ ಇಡುತ್ತಿರುವ ಪ್ರಮಾಣ ಏರಿಕೆಯಾಗಿದೆ’ ಎಂದು ಕಾಂಗ್ರೆಸ್ ರಾಷ್ಟ್ರೀಯ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘2019ರಿಂದ 2024ರ ಅವಧಿಯಲ್ಲಿ 4 ಕೋಟಿ ಮಹಿಳೆಯರು ತಮ್ಮ ಚಿನ್ನಅಡಮಾನವಿಟ್ಟು ₹4.7 ಲಕ್ಷ ಕೋಟಿ ಸಾಲ ತೆಗೆದುಕೊಂಡಿದ್ದಾರೆ. 2024ರಲ್ಲಿ ಮಹಿಳೆಯರು ತೆಗೆದುಕೊಂಡ ಒಟ್ಟು ಸಾಲದಲ್ಲಿ ಶೇ38ರಷ್ಟು ಸಾಲವನ್ನು ಚಿನ್ನದಿಂದಲೇ ತೆಗೆದುಕೊಂಡಿದ್ದಾರೆ. ಆರ್‌ಬಿಐನ ಅಂಕಿ ಅಂಶಗಳ ಪ್ರಕಾರ ಒಂದು ವರ್ಷದ ಚಿನ್ನದ ಸಾಲದ ಪ್ರಮಾಣವು ಶೇ 71.13ರಷ್ಟು ಏರಿಕೆಯಾಗಿದೆ’ ಎಂದು ಬರೆದಿದ್ದಾರೆ. ಲೋಕಸಭೆ ಅಧಿವೇಶನದ ವೇಳೆ ಮೋದಿ ಅವರು ‘ಕಾಂಗ್ರೆಸ್ ಮಂಗಳ ಸೂತ್ರಗಳನ್ನೂ ಕಿತ್ತುಕೊಂಡು ಸಂಪತ್ತಿನ ಸಮಾನ ಹಂಚಿಕೆಗೆ ಮುಂದಾಗುತ್ತದೆ’ ಎಂದಿದ್ದರು.

‘ವೇದಗಳಲ್ಲೇ ಗುರುತ್ವಾಕರ್ಷಣ ನಿಯಮ ಉಲ್ಲೇಖ’



ಜೈಪುರ (ಪಿಟಿಐ): 1687ರಲ್ಲಿ ಐಸಾಕ್ ನ್ಯೂಟನ್ ಪ್ರತಿಪಾದಿಸುವುದಕ್ಕಿಂತ ಮೊದಲೇ ಗುರುತ್ವಾಕರ್ಷಣ ನಿಯಮವನ್ನು ವೇದ ಪಠ್ಯಗಳಲ್ಲಿ ಉಲ್ಲೇಖಿಸಲಾಗಿತ್ತು ಎಂದು ರಾಜಸ್ಥಾನದ ರಾಜ್ಯಪಾಲ ಹರಿಭಾವೂ ಬಾಗಡೆ ಬುಧವಾರ ಹೇಳಿದರು.

ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ (ಇಗ್ನೋ) ಜೈಪುರ ಪ್ರಾದೇಶಿಕ ಕೇಂದ್ರದಲ್ಲಿ ನಡೆದ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ‘ಭಾರತವು ಪ್ರಾಚೀನ ಕಾಲದಿಂದಲೂ ಜ್ಞಾನಕೇಂದ್ರವಾಗಿದೆ. ನಳಂದ ವಿಶ್ವವಿದ್ಯಾಲಯವು ವಿಶ್ವದ ಅನೇಕ ಭಾಗಗಳ ವಿದ್ಯಾರ್ಥಿಗಳನ್ನು ಆಕರ್ಷಿಸಿತ್ತು. ನ್ಯೂಟನ್‌ಗಿಂತ ಮೊದಲೇ ವೇದಗಳಲ್ಲಿ ಗುರುತ್ವಾಕರ್ಷಣ ನಿಯಮವನ್ನು ಉಲ್ಲೇಖಿಸಲಾಗಿತ್ತು’ ಎಂದು ಅಭಿಪ್ರಾಯಪಟ್ಟರು.

ವಿಧಾನಸಭೆಯಲ್ಲಿ ಗುಟ್ಕಾ ನಿಷೇಧ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಯ ಆವರಣದಲ್ಲಿ ಗುಟ್ಕಾ ಮತ್ತು ಪಾನ್ ಮಸಾಲಾವನ್ನು ನಿಷೇಧಿಸಲಾಗಿದೆ ಎಂದು ವಿಧಾನಸಭಾ ಸ್ಪೀಕರ್ ಸತೀಶ್ ಮಹಾನಾ ಅವರು ಬುಧವಾರ ಘೋಷಿಸಿದ್ದಾರೆ.



ಬುಧವಾರ ಪ್ರಶ್ನೋತ್ತರ ಅವಧಿಯ ನಂತರ ಮಾತನಾಡಿದ ಅವರು, ‘ತಕ್ಷಣದಿಂದಲೇ ಜಾರಿಗೆ ಬರುವಂತೆ ಉದ್ಯೋಗಿಗಳು, ಅಧಿಕಾರಿಗಳು ಸೇರಿದಂತೆ ಯಾರೇ ವಿಧಾನಸಭೆಯ ಆವರಣದಲ್ಲಿ ಗುಟ್ಕಾ ಮತ್ತು ಪಾನ್ ಮಸಾಲಾ ಸೇವಿಸಿದ್ದು ಕಂಡಲ್ಲಿ, ಅವರಿಗೆ ₹1000 ದಂಡ ವಿಧಿಸಲಾಗುವುದು ಮತ್ತು ನಿಯಮಾನುಸಾರ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದ್ದಾರೆ.

ಕ್ರಿಮಿನಲ್ ಪ್ರಕರಣಗಳಲ್ಲಿ ಅಪರಾಧ ತೀರ್ಮಾನ • ಸುಪ್ರೀಂ ಕೋರ್ಟ್ ವಿವರಣೆ

‘ಮರಣಪೂರ್ವ ಹೇಳಿಕೆಯೊಂದೇ ಆಧಾರ ಅಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ವ್ಯಕ್ತಿಯೊಬ್ಬ ಸಾಯುವ ಸಂದರ್ಭದಲ್ಲಿ ಆಡಿದ ಮಾತುಗಳಲ್ಲಿ ಸಾಮ್ಯತೆ ಇಲ್ಲದಿದ್ದರೆ, ಆ ಮಾತುಗಳ ಪೈಕಿ ಯಾವುದು ಸತ್ಯ ಎಂಬುದನ್ನು ತಿಳಿಯಲು ನ್ಯಾಯಾಲಯವು ಸಮರ್ಥಿಸುವ ಸಾಕ್ಷ್ಯಗಳನ್ನು ಅರಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.



ಪತ್ನಿಯನ್ನು ಕೊಲೆ ಮಾಡಿದ ಆರೋಪ ಎದುರಿಸುತ್ತಿದ್ದ ಸತೀಶ್ ಎನ್ನುವವರನ್ನು ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರು ಇರುವ ವಿಭಾಗೀಯ ಪೀಠವು ದೋಷಮುಕ್ತಗೊಳಿಸಿದೆ. ಪತ್ನಿಯು ಸಾಯುವಾಗ ನೀಡಿದ್ದ ಹೇಳಿಕೆಯು ಅನುಮಾನ ಮೂಡಿಸುವಂತೆ ಇದೆ ಎಂದು ಪೀಠವು ಹೇಳಿದೆ.

‘ಸಾಯುವಾಗ ನೀಡಿದ ಹೇಳಿಕೆಯ ಬಗ್ಗೆ ಅನುಮಾನ ಇದ್ದಾಗ, ಸಮರ್ಥನೆಗೆ ಅಗತ್ಯವಾದ ಸಾಕ್ಷ್ಯಗಳು ಇಲ್ಲದೆ ಆರೋಪಿಯನ್ನು ಅಪರಾಧಿ ಎಂದು ಘೋಷಿಸುವುದು ಸರಿಯಲ್ಲ. ಸಾಯುವ ಮೊದಲು ವ್ಯಕ್ತಿಯು ತನ್ನ ಹೇಳಿಕೆಯನ್ನು ಮತ್ತೆ ಮತ್ತೆ ಬದಲಾಯಿಸಿದ್ದರೆ, ಹಿಂದಿನ ಹೇಳಿಕೆಗೆ ಸಂಪೂರ್ಣವಾಗಿ ಭಿನ್ನವಾದ ಹೇಳಿಕೆ ನೀಡಿದ್ದರೆ, ಸಮರ್ಥನೆಗೆ ಅಗತ್ಯವಾದ ಸಾಕ್ಷ್ಯಗಳು ಇಲ್ಲದಿದ್ದರೆ ಅಂತಹ ಮರಣಪೂರ್ವ ಹೇಳಿಕೆಯನ್ನು ಮಾತ್ರವೇ ನೆಚ್ಚಿಕೊಂಡು ಆರೋಪಿಯನ್ನು ಅಪರಾಧಿ ಎಂದು ಘೋಷಿಸಲಾಗದು’ ಎಂದು ಪೀಠವು ವಿವರಿಸಿದೆ.

ಸಾಯುವ ಮುನ್ನ ಮಹಿಳೆಯು ಮ್ಯಾಜಿಸ್ಟ್ರೇಟರ ಎದುರು ನೀಡಿದ್ದ ಹೇಳಿಕೆಯನ್ನೇ ಮುಖ್ಯ ಆಧಾರವಾಗಿ ಇರಿಸಿಕೊಂಡು ವಿಚಾರಣಾ ನ್ಯಾಯಾಲಯವು ಸತೀಶ್ ಅವರನ್ನು ಅಪರಾಧಿ ಎಂದು ಘೋಷಿಸಿತ್ತು.

ಸತೀಶ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಪೀಠವು, ಮೃತ ಮಹಿಳೆಯು ಬಹಳ ಭಿನ್ನವಾದ ಹೇಳಿಕೆಗಳನ್ನು ನೀಡಿದ್ದರು ಎಂಬುದಾಗಿ ಹೇಳಿದೆ.

‘ಮರಣಪೂರ್ವದಲ್ಲಿ ನೀಡುವ ಹೇಳಿಕೆಯು ಬಹಳ ಮುಖ್ಯವಾದ ಸಾಕ್ಷ್ಯವಾಗುತ್ತದೆ. ಕ್ರಿಮಿನಲ್ ಕಾನೂನುಗಳಲ್ಲಿ ಇದಕ್ಕೆ ಬಹಳ ಪ್ರಾಮುಖ್ಯ ಇರುವ ಕಾರಣ, ಈ ಹೇಳಿಕೆಯೊಂದನ್ನೇ ಆಧರಿಸಿ ಅಪರಾಧಿ ಯಾರೆಂಬುದನ್ನು ಘೋಷಿಸಬಹುದು. ಆದರೆ ಮರಣಪೂರ್ವ ಹೇಳಿಕೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಿ, ಪ್ರಕರಣದ ಅಷ್ಟೂ ಸಂಗತಿಗಳನ್ನು ಪರಿಗಣಿಸಿ ಆ ಕೆಲಸ ಮಾಡಬೇಕು’ ಎಂದು ಪೀಠವು ಹೇಳಿದೆ.

ಕೇಂದ್ರ, ದೆಹಲಿ ಸರ್ಕಾರದ ಬಗ್ಗೆ ಕೋರ್ಟ್ ಅಸಮಾಧಾನ

ವಿವಾಹ ನೋಂದಣಿ

ನವದೆಹಲಿ (ಪಿಟಿಐ): ವಿವಾಹಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಬೇಕು ಎಂಬ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಸೂಚನೆಯನ್ನು ಪಾಲಿಸಬೇಕು ಎಂದು ಕೇಂದ್ರ ಸರ್ಕಾರ ಮತ್ತು ದೆಹಲಿ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ಬುಧವಾರ ಆದೇಶ ನೀಡಿದೆ.

ವಿವಾಹಿತರು ಯಾವ ಧರ್ಮಕ್ಕೇ ಸೇರಿರಲಿ, ಅವರ ವಿವಾಹವನ್ನು ನೋಂದಣಿ ಮಾಡಿಸಬೇಕು ಎಂದು ಸುಪ್ರೀಂ ಕೋರ್ಟ್ 2006ರಲ್ಲಿ ನೀಡಿರುವ ತೀರ್ಪು ಈವರೆಗೂ ಅನುಷ್ಠಾನಕ್ಕೆ ಬಂದಿಲ್ಲದಿರುವುದು ಜುಗುಪ್ಸೆ ಮೂಡಿಸುವಂತಿದೆ ಎಂದು ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಉಪಾಧ್ಯಾಯ ಮತ್ತು ನ್ಯಾಯಮೂರ್ತಿ ತುಷಾರ ರಾವ್ ಗೆಡೆಲಾ ಅವರು ಇರುವ ವಿಭಾಗೀಯ ಪೀಠವು ಹೇಳಿತು.

ಮದುವೆಗಳ ನೋಂದಣಿಯ ಕೇಂದ್ರೀಕೃತ ದತ್ತಾಂಶಕೋಶ ರಚಿಸಲು ನಿಯಮ ಸಿದ್ಧಪಡಿಸುವಂತೆ ಕೇಂದ್ರ ಗೃಹ ಸಚಿವಾಲಯಕ್ಕೆ ಸೂಚಿಸಬೇಕು ಎಂಬ ಕೋರಿಕೆ ಇರುವ ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್, ಎರಡೂ ಸರ್ಕಾರಗಳಿಗೆ ನೋಟಿಸ್ ಜಾರಿಗೊಳಿಸಿದೆ.

ವಿವಾಹ ನೋಂದಣಿ ವಿಚಾರವಾಗಿ 2006ರ ಫೆಬ್ರುವರಿಯಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಈ ಬಗ್ಗೆ ಮೂರು ತಿಂಗಳಲ್ಲಿ ನಿಯಮ ರೂಪಿಸಿ ಅಧಿಸೂಚನೆಯಲ್ಲಿ ಪ್ರಕಟಿಸಬೇಕು ಎಂದು ಕೇಂದ್ರ ಸರ್ಕಾರ ಹಾಗೂ ಎಲ್ಲ ರಾಜ್ಯ ಸರ್ಕಾರಗಳಿಗೆ ಹೇಳಿತ್ತು.

ಕೋರ್ಟ್ ತೀರ್ಪಿನ ನಂತರ ದೆಹಲಿ ಸರ್ಕಾರವು 2014ರ ಏಪ್ರಿಲ್‌ನಲ್ಲಿ, ವಿವಾಹದ ಕಡ್ಡಾಯ ನೋಂದಣಿಗೆ ಆದೇಶ ಹೊರಡಿಸಿತ್ತು. ಆದರೆ, ಇದರಲ್ಲಿ ಹಲವು ಲೋಪಗಳಿವೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಸುಪ್ರೀಂ ಕೋರ್ಟ್ ಬಯಸಿದಂತಹ ಸೂಕ್ತವಾದ ಕಾನೂನು ಇಲ್ಲದಿರುವ ಕಾರಣ, ವಿವಾಹ ನೋಂದಣಿಗೆ ಇರುವ ವ್ಯವಸ್ಥೆಯು ಸಮರ್ಪಕವಾಗಿಲ್ಲ, ಅದು ನೋಂದಣಿ ಮಾಡಿಸಲು ಬಯಸುವವರಿಗೆ ಕಷ್ಟಕೊಡುವಂತಿದೆಎಂದು ಅರ್ಜಿದಾರ ಆಕಾಶ್ ಗೋಯಲ್ ದೂರಿದ್ದಾರೆ.

ಐಸಿಸಿ ಚಾಂಪಿಯನ್ಸ್ ಟ್ರೋಫಿ 2025

ಫೆಬ್ರುವರಿ 19ರಿಂದ ಮಾರ್ಚ್ 9

(ಪಾಕಿಸ್ತಾನ-ದುಬೈ)

ರಚಿನ್, ಕೇನ್ ಶತಕ • ಮಿಲ್ಲರ್ ಹೋರಾಟ • ಭಾರತಕ್ಕೆ ಫೈನಲ್‌ನಲ್ಲಿ ನ್ಯೂಜಿಲೆಂಡ್ ಎದುರಾಳಿ

ಕಿವೀಸ್ ಅಬ್ಬರಕ್ಕೆ ಮಣಿದ ದಕ್ಷಿಣ ಆಫ್ರಿಕಾ

ಲಾಹೋರ್ (ಪಿಟಿಐ): ರಚಿನ್ ರವೀಂದ್ರ (108, 101ಎ) ಮತ್ತು ಕೇನ್ ವಿಲಿಯಮ್ಸನ್ (102, 94ಎ) ಅವರು ಸೊಗಸಾದ ಶತಕಗಳನ್ನು ಬಾರಿಸಿ ನ್ಯೂಜಿಲೆಂಡ್ ತಂಡ ದಾಖಲೆ ಮೊತ್ತ ಪೇರಿಸಲು ನೆರವಾದರು. ಬಳಿಕ ಬೌಲರ್‌ಗಳು ದಕ್ಷಿಣ ಆಫ್ರಿಕಾ ತಂಡವನ್ನು ಕಟ್ಟಿಹಾಕಿದರು. ಬುಧವಾರ ನಡೆದ ಚಾಂಪಿಯನ್ಸ್ ಟ್ರೋಫಿಯ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ 50 ರನ್‌ಗಳಿಂದ ಜಯಗಳಿಸಿತು.

ಸ್ಯಾಂಟನರ್ ಪಡೆ, ದುಬೈನಲ್ಲಿ ಇದೇ 9ರಂದು ನಡೆಯುವ ಫೈನಲ್‌ನಲ್ಲಿ ಭಾರತ ತಂಡವನ್ನು ಎದುರಿಸಲಿದೆ. ಇದರೊಂದಿಗೆ ಆತಿಥೇಯ ಪಾಕ್‌ನಲ್ಲಿ ಟೂರ್ನಿಯ ಪಂದ್ಯಗಳು ಪೂರ್ಣಗೊಂಡವು.

ಗಡ್ಡಾಫಿ ಕ್ರೀಡಾಂಗಣದ ಬ್ಯಾಟಿಂಗ್ ಪಿಚ್‌ನಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 6 ವಿಕೆಟ್‌ಗೆ 362 ರನ್‌ಗಳ ಗಳಿಸಿ ಈ ಟೂರ್ನಿಯ ಸರ್ವಾಧಿಕ ಮೊತ್ತ ಗಳಿಸಿತು. ಈ ಬೃಹತ್ ಮೊತ್ತದ ಎದುರು ದಕ್ಷಿಣ ಆಫ್ರಿಕಾ ತಂಡ ಒತ್ತಡಕ್ಕೆ ಸಿಲುಕಿತು. ಅಂತಿಮವಾಗಿ 9 ವಿಕೆಟ್‌ಗೆ 312 ರನ್ ಗಳಿಸಿ ಓವರುಗಳನ್ನು ಪೂರೈಸಿತು. ಡೇವಿಡ್ ಮಿಲ್ಲರ್ ಪರಾಕ್ರಮ ಮೆರೆದು ಕೊನೆಯ ಎಸೆತದಲ್ಲಿ ಅಜೇಯ ಶತಕ (100*, 67ಎ, 4x10, 6x4) ಪೂರೈಸಿದರು. ಕೊನೆಯ ಆಟಗಾರ ಲುಂಗಿ ಗಿಡಿ (1, 2ಎ) ಅವರನ್ನು ಅಪಾಯಕ್ಕೊಡ್ಡದೇ ಆಲೌಟ್ ಆಗುವುದನ್ನೂ ತಡೆದರು. 56 ರನ್ ಜೊತೆಯಾಟವಾಡಿ ಸೋಲಿನ ಅಂತರವನ್ನೂ ಕುಗ್ಗಿಸಿದರು.

ನಾಯಕ ತೆಂಬಾ ಬವುಮಾ (56, 71 ಎಸೆತ) ಮತ್ತು ರಸಿ ವಾನ್‌ಡರ್ ಡಸೆ (69, 66 ಎಸೆತ) ಎರಡನೇ ವಿಕೆಟ್‌ಗೆ 105 ರನ್ ಸೇರಿಸಿದ್ದೇ ಇನಿಂಗ್ಸ್‌ನ ದೊಡ್ಡ ಜೊತೆಯಾಟ ಎನಿಸಿತು. ಇವರಿಬ್ಬರ ವಿಕೆಟ್‌ಗಳನ್ನು ಎದುರಾಳಿ ನಾಯಕ ಸ್ಯಾಂಟನರ್ (43ಕ್ಕೆ3) ಪಡೆದರು.

ರವೀಂದ್ರ, ಕೇನ್ ಅಬ್ಬರ: ಬ್ಯಾಟ್ ಮಾಡಲು ನಿರ್ಧರಿಸಿದ ನ್ಯೂಜಿಲೆಂಡ್ ತಂಡಕ್ಕೆ ವಿಲ್ ಯಂಗ್ (21, 23ಎ) ಮತ್ತು ರವೀಂದ್ರ ಜೋಡಿ 48 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಎಂಟನೇ ಓವರಿನಲ್ಲಿ ವೇಗದ ಬೌಲರ್ ಲುಂಗಿ ಗಿಡಿ ಈ ಜೊತೆಯಾಟ ಮುರಿದರೂ ರನ್ ವೇಗದ ಮೇಲೆ ಸ್ವಲ್ಪವೂ ಪರಿಣಾಮವಾಗಲಿಲ್ಲ.

ಎಡಗೈ ಬ್ಯಾಟರ್ ರವೀಂದ್ರ ಮತ್ತು ಬಲಗೈ ಆಟಗಾರ ವಿಲಿಯಮ್ಸನ್ ಅವರ ಸಂಯೋಜನೆ ದಕ್ಷಿಣ ಆಫ್ರಿಕಾ ಬೌಲರ್‌ಗಳ ಪಾಲಿಗೆ ತಲೆನೋವಾಯಿತು. ಇಬ್ಬರೂ ಆಕರ್ಷಕ ಹೊಡೆತಗಳನ್ನು ಪ್ರದರ್ಶಿಸಿದರು. ಎರಡನೇ ವಿಕೆಟ್‌ಗೆ 164 ರನ್ ಸೇರಿಸಿ, ಕೊನೆಯ 10 ಓವರುಗಳಲ್ಲಿ ಉಳಿದ ಬ್ಯಾಟರ್‌ಗಳಿಗೆ ತೋಳೇರಿಸಲು ವೇದಿಕೆ ಸಿದ್ಧಪಡಿಸಿಕೊಟ್ಟರು.

ಆ ಕೆಲಸವನ್ನು ಡೇರಿಲ್ ಮಿಚೆಲ್ (49, 37 ಎಸೆತ), ಗ್ಲೆನ್ ಫಿಲಿಪ್ಸ್ (49, 27 ಎಸೆತ), ಮೈಕೆಲ್ ಬ್ರೇಸ್‌ವೆಲ್ (16, 12ಎ) ಪರಿಪೂರ್ಣವಾಗಿ ಮಾಡಿದರು. ಕೊನೆಯ ಹತ್ತು ಓವರುಗಳಲ್ಲಿ ನ್ಯೂಜಿಲೆಂಡ್ ತಂಡ 112 ರನ್ ಬಾಚಿಕೊಂಡಿತು. ಇವುಗಳಲ್ಲಿ 66 ರನ್‌ಗಳು ಕೊನೆಯ ಐದು ಓವರುಗಳಲ್ಲೇ ಹರಿದುಬಂದವು.

ಕಗಿಸೊ ರಬಾಡ ಬೌಲಿಂಗ್‌ನಲ್ಲಿ ಎರಡು ರನ್ ಗಳಿಸುವ ಮೂಲಕ ರವೀಂದ್ರ ಐದನೇ ಏಕದಿನ ಶತಕ ಪೂರೈಸಿದರು. ಈ ಎಲ್ಲ ಶತಕಗಳು ಐಸಿಸಿ ಟೂರ್ನಿಗಳಲ್ಲೇ ಬಂದಿರುವುದು ವಿಶೇಷ. ಈ ಟೂರ್ನಿಯಲ್ಲಿ ಅವರು ಬಾಂಗ್ಲಾದೇಶ ವಿರುದ್ಧವೂ ಶತಕ (112) ಬಾರಿಸಿದ್ದರು. ಭಾರತದಲ್ಲಿ 2023ರಲ್ಲಿ ನಡೆದ ಏಕದಿನ ವಿಶ್ವ ಕಪ್‌ನಲ್ಲಿ ಅವರು ಮೂರು ಶತಕ ಹೊಡೆದಿದ್ದರು. ಸಂಯಮದಿಂದ ಆಡಿದ ವಿಲಿಯಮ್ಸನ್ ಏಕದಿನ ಪಂದ್ಯಗಳಲ್ಲಿ ತಮ್ಮ 15ನೇ ಶತಕ ದಾಖಲಿಸಿದರು. ದಕ್ಷಿಣ ಆಫ್ರಿಕಾ ವಿರುದ್ಧ ಇದು ಅವರ ಸತತ ಮೂರನೇ ಶತಕ.

ರಬಾಡ ಬೌಲಿಂಗ್‌ನಲ್ಲಿ ರವೀಂದ್ರ ಅವರು ವಿಕೆಟ್ ಕೀಪರ್‌ಗೆ ಕ್ಯಾಚ್ ನೀಡುವ ಮೂಲಕ ಈ ಜೊತೆಯಾಟ ಮುರಿಯಿತು. ಆದರೆ ದಕ್ಷಿಣ ಆಫ್ರಿಕಾ ಬವಣೆ ಮುಂದುವರಿಯಿತು.



ರಚಿನ್ ರವೀಂದ್ರ ಮತ್ತು ಕೇನ್ ವಿಲಿಯಮ್ಸನ್ –ಎಎಫ್‌ಪಿ ಚಿತ್ರಗಳು



ದಕ್ಷಿಣ ಆಫ್ರಿಕಾದ ಡೇವಿಡ್ ಮಿಲ್ಲರ್ ಬ್ಯಾಟಿಂಗ್

ಚಾಂಪಿಯನ್ಸ್ ಟ್ರೋಫಿ: ಮೊದಲ ಇನಿಂಗ್ಸ್‌ನಲ್ಲಿ ಗರಿಷ್ಠ ರನ್

ರನ್	ತಂಡ	ಎದುರಾಳಿ	ಸ್ಥಳ	ವರ್ಷ
6ಕ್ಕೆ362	ನ್ಯೂಜಿಲೆಂಡ್	ದಕ್ಷಿಣ ಆಫ್ರಿಕಾ	ಲಾಹೋರ್	2025
8ಕ್ಕೆ351	ಇಂಗ್ಲೆಂಡ್	ಆಸ್ಟ್ರೇಲಿಯಾ	ಲಾಹೋರ್	2025
4ಕ್ಕೆ347	ನ್ಯೂಜಿಲೆಂಡ್	ಅಮೆರಿಕ	ಒವಲ್	2017
4ಕ್ಕೆ338	ಪಾಕಿಸ್ತಾನ	ಭಾರತ	ಒವಲ್	2017
7ಕ್ಕೆ331	ಭಾರತ	ದಕ್ಷಿಣ ಆಫ್ರಿಕಾ	ಕಾರ್ಡಿಫ್	2013

ಸ್ಕೋರ್ ಕಾರ್ಡ್

ನ್ಯೂಜಿಲೆಂಡ್: 6ಕ್ಕೆ 362 (50 ಓವರ್‌ಗಳಲ್ಲಿ)

ಯಂಗ್ ಸಿ ಮರ್ಕರಂ ಬಿ ಗಿಡಿ 21 (23ಎ, 4x3)
ರಚಿನ್ ಸಿ ಕ್ಲಾಸೆನ್ ಬಿ ರಬಾಡ 108 (101ಎ, 4x13, 6x1)
ವಿಲಿಯಮ್ಸನ್ ಸಿ ಗಿಡಿ ಬಿ ಮುಲ್ಡರ್ 102 (94ಎ, 4x10, 6x2)
ಮಿಚೆಲ್ ಸಿ ರಬಾಡ ಬಿ ಗಿಡಿ 49 (37ಎ, 4x4, 6x1)
ಲೇಥಮ್ ಬಿ ರಬಾಡ 4 (5ಎ)
ಗ್ಲೆನ್ ಫಿಲಿಪ್ಸ್ ಔಟಾಗದೇ 49 (27ಎ, 4x6, 6x1)
ಬ್ರೇಸ್‌ವೆಲ್ ಸಿ ರಿಕಲ್ಟನ್ ಬಿ ಗಿಡಿ 16 (12ಎ, 4x2)
ಮಿಚೆಲ್ ಸ್ಯಾಂಟನರ್ ಔಟಾಗದೇ 2 (1ಎ)

ಇತರೆ: 11 (ಲೆಗ್‌ಬೈ 5, ವೈಡ್ 6)

ವಿಕೆಟ್ ಪತನ: 1-48 (ವಿಲ್ ಯಂಗ್, 7.5), 2-212 (ರಚಿನ್ ರವೀಂದ್ರ, 33.3), 3-251 (ಕೇನ್ ವಿಲಿಯಮ್ಸನ್, 39.5), 4-257 (ಟಾಮ್ ಲೇಥಮ್, 41.1), 5-314 (ಡ್ಯಾರಿಲ್ ಮಿಚೆಲ್, 46.1), 6-360 (ಮೈಕೆಲ್ ಬ್ರೇಸ್‌ವೆಲ್, 49.5)

ಬೌಲಿಂಗ್: ಮಾರ್ಕೊ ಯಾನ್ಸನ್ 10–0–79–0, ಲುಂಗಿ ಗಿಡಿ 10–0–72–3, ಕಗಿಸೊ ರಬಾಡ 10–1–70–2, ವಿಯಾನ್ ಮುಲ್ಡರ್ 6–0–48–1, ಕೇಶವ ಮಹಾರಾಜ್ 10–0–65–0, ಏಡನ್ ಮರ್ಕರಂ 4–0–23–0

ದಕ್ಷಿಣ ಆಫ್ರಿಕಾ:9ಕ್ಕೆ 312 (50 ಓವರ್‌ಗಳಲ್ಲಿ)

ರಿಕೆಲ್ಟನ್ ಸಿ ಬ್ರೇಸ್‌ವೆಲ್ ಬಿ ಹೆನ್ರಿ 17 (12ಎ, 4x4)
ತೆಂಬಾ ಸಿ ವಿಲಿಯಮ್ಸನ್ ಬಿ ಸ್ಯಾಂಟನರ್ 56 (71ಎ, 4x4, 6x1)
ಡೆರ್ ಡಸೆ ಬಿ ಸ್ಯಾಂಟನರ್ 69 (66ಎ, 4x4, 6x2)
ಮರ್ಕರಂ ಸಿ ಮತ್ತು ಬಿ ರಚಿನ್ 31 (29ಎ, 4x3)
ಕ್ಲಾಸೆನ್ ಸಿ ಹೆನ್ರಿ ಬಿ ಸ್ಯಾಂಟರ್ 3 (7ಎ)
ಮಿಲ್ಲರ್ ಔಟಾಗದೇ 100 (67ಎ, 4x10, 6x4)
ಮಿಲ್ಡರ್ ಸಿ ರಚಿನ್ ಬಿ ಬ್ರೇಸ್‌ವೆಲ್ 8 (13ಎ, 4x1)
ಯಾನ್ಸನ್ ಎಲ್‌ಬಿಡಬ್ಲ್ಯು ಬಿ ಫಿಲಿಪ್ಸ್ 3 (7ಎ)
ಮಹಾರಾಜ್ ಸಿ ಲೇಥಮ್ ಬಿ ಫಿಲಿಪ್ಸ್ 1 (4ಎ)
ರಬಾಡ ಸಿ ಫಿಲಿಪ್ಸ್ ಬಿ ಹೆನ್ರಿ 16 (22 ಎ)
ಲುಂಗಿ ಗಿಡಿ ಔಟಾಗದೇ 1 (2ಎ)

ಇತರೆ: 7 (ವೈಡ್ 7)

ವಿಕೆಟ್ ಪತನ: 1-20 (ರೆಯಾನ್ ರಿಕಲ್ಟನ್, 4.5), 2-125 (ತೆಂಬಾ ಬವುಮಾ, 22.2), 3-161 (ರಸಿ ವ್ಯಾನ್ ಡೆರ್ ಡಸೆ, 26.5), 4-167 (ಹೆನ್ರಿಚ್ ಕ್ಲಾಸೆನ್, 28.4), 5-189 (ಏಡೆನ್ ಮರ್ಕರಂ, 32.6), 6-200 (ವಿಯಾನ್ ಮುಲ್ಡರ್, 35.6), 7-212 (ಮಾರ್ಕೊ ಯಾನ್ಸೆನ್, 37.6), 8-218 (ಕೇಶವ ಮಹಾರಾಜ್, 39.3), 9–256 (ಕಗಿಸೊ ರಬಾಡ 45.3),

ಬೌಲಿಂಗ್: ಮ್ಯಾಟ್ ಹೆನ್ರಿ 7–0–43–2, ಕೈಲ್ ಜೇಮಿಸನ್ 7–1–57–0, ವಿಲ್ ಒ ರೂರ್ಕಿ 8–0–69–0, ಮೈಕೆಲ್ ಬ್ರೇಸ್‌ವೆಲ್ 10–0–53–1, ಮಿಚೆಲ್ ಸ್ಯಾಂಟನರ್ 10–0–43–3, ರಚಿನ್ ರವೀಂದ್ರ 5–0–20–1, ಗ್ಲೆನ್ ಫಿಲಿಪ್ಸ್ 3–0–27–2.

ಪಂದ್ಯದ ಆಟಗಾರ: ರಚಿನ್ ರವೀಂದ್ರ

ಫಲಿತಾಂಶ: ನ್ಯೂಜಿಲೆಂಡ್‌ಗೆ 50 ರನ್‌ಗಳ ಜಯ

ವಿರಾಟ್ ಆಟಕ್ಕೆ ಭರಪೂರ ಮೆಚ್ಚುಗೆ

ದುಬೈ (ಎಎಫ್‌ಪಿ): ಚೇಸಿಂಗ್ ವೇಳೆ ತಮ್ಮ ಎಂದಿನ ಶೈಲಿಯ ಆಟವಾಡಿ ಭಾರತವನ್ನು ಗೆಲ್ಲಿಸಿದ 'ಚೇಸಿಂಗ್ ಮಾಸ್ಟರ್' ವಿರಾಟ್ ಕೊಹ್ಲಿ ಆಟಕ್ಕೆ ಮೆಚ್ಚುಗೆ ಹರಿದುಬಂದಿದೆ. ಮಂಗಳವಾರ ಆಸ್ಟ್ರೇಲಿಯ ವಿರುದ್ಧ ಚಾಂಪಿಯನ್ಸ್ ಟ್ರೋಫಿ ಪಂದ್ಯದಲ್ಲಿ ಅವರು ಗಳಿಸಿದ 84 ರನ್‌ಗಳು ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದವು.

ಕೊಹ್ಲಿ ಆ ಸೆಮಿಫೈನಲ್ ಪಂದ್ಯದಲ್ಲಿ (ಏಕದಿನ ಪಂದ್ಯಗಳಲ್ಲಿ) ಚೇಸಿಂಗ್ ವೇಳೆ 8000 ರನ್‌ಗಳ ಮೈಲಿಗಲ್ಲು ದಾಟಿದ್ದರು.

'ಅವರು ಚೇಸಿಂಗ್ ವೇಳೆಯೇ 30–40 ಶತಕ ಬಾರಿಸಿದ್ದಾರೆ. ಚೇಸಿಂಗ್ ವೇಳೆಯೇ ಹೆಚ್ಚು ರನ್ ಬಾರಿಸಿದ್ದಾರೆ. ಅದಕ್ಕಾಗಿಯೇ ಅವರನ್ನು 'ಚೇಸ್ ಮಾಸ್ಟರ್' ಎನ್ನುತ್ತಾರೆ ಎಂದು ಭಾರತ ತಂಡದ ಮಾಜಿ ಆರಂಭ ಆಟಗಾರ ವಿರೇಂದ್ರ ಸೆಹ್ವಾಗ್, ಕ್ರಿಕ್‌ಬಝ್ ವೆಬ್‌ಸೈಟ್‌ಗೆ ತಿಳಿಸಿದ್ದಾರೆ.

'ಡಾಟ್‌ಬಾಲ್‌ಗಳನ್ನು ಕನಿಷ್ಠ ಪ್ರಮಾಣಕ್ಕಿಳಿಸಿ ಸ್ಕೋರ್‌ಬೋರ್ಡ್ ಏರುಗತಿಯಲ್ಲೇ ಇರುವಂತೆ ನೋಡಿಕೊಳ್ಳುವುದು ಕೊಹ್ಲಿ ಕೌಶಲ. ಒಂದು ಹಂತದಲ್ಲಿ ಅವರು 25 ಎಸೆತಗಳ ಪೈಕಿ 23ರಲ್ಲಿ ಒಂದು ರನ್ ಗಳಿಸಿದ್ದರು' ಎಂದು ಇಂಗ್ಲೆಂಡ್‌ನ ಮಾಜಿ ನಾಯಕ ನಾಸಿರ್ ಹುಸೇನ್ ಅಭಿಪ್ರಾಯಪಟ್ಟರು.

'ಕೊಹ್ಲಿ ಸಿಂಗಲ್ಸ್ ಗಳಿಸುವುದನ್ನು ತಡೆಯಲು ಎದುರಾಳಿ ನಾಯಕ ಒಬ್ಬ ಹೆಚ್ಚುವರಿ ಫೀಲ್ಡರ್‌ನನ್ನು ಮುಂದೆ ತಂದರೆ ಅವರು ಫೀಲ್ಡರ್ ತಲೆಯ ಮೇಲಿಂದ ಚೆಂಡನ್ನು ಹೊಡೆದಟ್ಟಲು ಶುರುಮಾಡುತ್ತಾರೆ' ಎಂದು ಹೇಳಿದರು.

'ನಾನು ನೋಡಿದ ಆಟಗಾರರ ಪೈಕಿ ಕೊಹ್ಲಿ ಅವರು ಈ ಆಟದಲ್ಲಿ ಶ್ರೇಷ್ಠ ಚೇಸರ್. ನಮ್ಮ ವಿರುದ್ಧ ಹಲವು ಬಾರಿ ಇಂಥ ಆಟವಾಡಿದ್ದಾರೆ' ಎಂದು ಆಸ್ಟ್ರೇಲಿಯಾದ ನಾಯಕ ಸ್ಟೀವ್ ಸ್ಮಿತ್ ಗುಣಗಾನ ಮಾಡಿದರು.

2008ರಲ್ಲಿ ಪದಾರ್ಪಣೆ ಮಾಡಿದ ನಂತರ 301 ಏಕದಿನ ಪಂದ್ಯಗಳಲ್ಲಿ ಕೊಹ್ಲಿ 74 ಅರ್ಧ ಶತಕಗಳನ್ನು ಬಾರಿಸಿದ್ದಾರೆ. ಮೂರೂ ಮಾದರಿಗಳಲ್ಲಿ ಒಟ್ಟು 82 ಶತಕಗಳನ್ನು ಬಾರಿಸಿದ್ದಾರೆ. ಆಟವನ್ನು ಅರ್ಥೈಸುವಲ್ಲಿ ಕೊಹ್ಲಿ ಅವರಿಗೆ ಇರುವ ಗ್ರಹಿಕೆಯ ಮಟ್ಟವನ್ನು ಭಾರತ ತಂಡದ ಕೋಚ್ ಗೌತಮ್ ಗಂಭೀರ್ ಶ್ಲಾಘಿಸಿದರು. 'ಅವರೊಬ್ಬ ಅಮೋಘ ಏಕದಿನ ಕ್ರಿಕೆಟಿಗ' ಎಂದು ಮೆಚ್ಚುಗೆ ಸೂಚಿಸಿದರು.

ಬ್ಯಾಟಿಂಗ್ ರ್‍ಯಾಂಕಿಂಗ್‌ನಲ್ಲಿ ಕೊಹ್ಲಿಗೆ ಬಡ್ತಿ



ದುಬೈ (ಪಿಟಿಐ): ಚಾಂಪಿಯನ್ಸ್ ಟ್ರೋಫಿಯ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ 84 ರನ್ ಗಳಿಸಿದ ಭಾರತದ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ (ಐಸಿಸಿ) ಏಕದಿನ ರ್‍ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

ಬುಧವಾರ ಪ್ರಕಟವಾದ ಬ್ಯಾಟಿಂಗ್ ಕ್ರಮಾಂಕದಲ್ಲಿ ಭಾರತ ತಂಡದ ಉಪನಾಯಕ, ಆರಂಭಿಕ ಆಟಗಾರ ಶುಭಮನ್ ಗಿಲ್ ಅಗ್ರಸ್ಥಾನವನ್ನು ಕಾಯ್ದುಕೊಂಡಿದ್ದಾರೆ. 36 ವರ್ಷ ವಯಸ್ಸಿನ ಕೊಹ್ಲಿ ಕಳೆದ ವಾರ ಪ್ರಕಟವಾದ ರ್‍ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿದ್ದರು.

ಆದರೆ, ರೋಹಿತ್ ಶರ್ಮಾ ಎರಡು ಸ್ಥಾನಗಳ ಇಳಿಕೆ ಕಂಡು ಐದನೇ ಸ್ಥಾನದಲ್ಲಿದ್ದಾರೆ. ಪಾಕಿಸ್ತಾನದ ಬಾಬರ್ ಆಜಂ ಮತ್ತು ದಕ್ಷಿಣ ಆಫ್ರಿಕಾದ ಹೆನ್ರಿಚ್ ಕ್ಲಾಸೆನ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ಭಾರತದ ಅಕ್ಷರ್ ಪಟೇಲ್ ಅವರು ಆಲ್‌ರೌಂಡರ್ ರ್‍ಯಾಂಕಿಂಗ್‌ನಲ್ಲಿ ಜೀವನಶ್ರೇಷ್ಠ 13ನೇ ಸ್ಥಾನಕ್ಕೆ ಏರಿದ್ದಾರೆ. ಅಫ್ಗಾನಿಸ್ತಾನದ ಅಜ್ಮತ್ ಉಲ್ಲಾ ಒಮರ್‌ಝೈ ಅವರು ಸ್ವದೇಶದ ಮೊಹಮ್ಮದ್ ನಬಿ ಅವರನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೆ ಏರಿದರು. ಅನುಭವಿ ವೇಗಿ ಮೊಹಮ್ಮದ್ ಶಮಿ ಅವರು ಮೂರು ಸ್ಥಾನಗಳ ಬಡ್ತಿಯೊಂದಿಗೆ 11ನೇ ಸ್ಥಾನಕ್ಕೇರಿದ್ದಾರೆ. ಅವರು ಚಾಂಪಿಯನ್ಸ್ ಟ್ರೋಫಿಯಲ್ಲಿ ಈತನಕ ಎಂಟು ವಿಕೆಟ್ ಪಡೆದಿದ್ದಾರೆ. ಶ್ರೀಲಂಕಾದ ಮಹೀಷ ತೀಕ್ಷಣ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ.

ಆಟಗಾರರ ಯಶಸ್ವಿ ರನ್ ಚೇಸಿಂಗ್ ದಾಖಲೆ (ಏಕದಿನ)

ಆಟಗಾರ	ಪಂದ್ಯ	ರನ್	ಸರಾಸರಿ	ಸ್ಟ್ರೈಕ್ ರೇಟ್	ಶತಕ/ಅರ್ಧಶತಕ
ವಿರಾಟ್ ಕೊಹ್ಲಿ	100	5997	89.51	96.57	24/26
ಸಚಿನ್ ತೆಂಡೂಲ್ಕರ್	124	5490	55.45	90.10	14/31
ರೋಹಿತ್ ಶರ್ಮಾ	98	4504	62.56	92.20	13/27
ರಿಕಿ ಪಾಂಟಿಂಗ್	104	4186	57.34	78.26	8/29
ಜಾಕ್ ಕಾಲಿಸ್	100	3950	56.43	71.71	3/34

ವಿರಾಟ್ ಕೊಹ್ಲಿ ರನ್ ಚೇಸ್ ದಾಖಲೆ

	ಪಂದ್ಯ	ರನ್	ಸರಾಸರಿ	ಶತಕ	ಅರ್ಧಶತಕ
ಯಶಸ್ವಿ ಚೇಸ್	100	5997	89.51	24	26
ರನ್ ಚೇಸ್ ವಿಫಲ ಸಂದರ್ಭ	56	2021	36.75	4	15

ಫುಟ್‌ಬಾಲ್: ಬೆಂಗಳೂರು ಸಿಟಿ ಎಫ್‌ಸಿಗೆ ಜಯ

ಪ್ರಜಾವಾರ್ತೆ

ಬೆಂಗಳೂರು: ಬೆಂಗಳೂರು ಸಿಟಿ ಎಫ್‌ಸಿ ತಂಡ ಎ ಡಿವಿಷನ್ ಲೀಗ್ ಪಂದ್ಯದಲ್ಲಿ ಬುಧವಾರ ಆದಾಯ ತೆರಿಗೆ ಎಫ್‌ಸಿ ವಿರುದ್ಧ 2–1 ಗೋಲುಗಳಿಂದ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಸಿಟಿ ತಂಡದ ಅನುರಾಗ್ (42ನೇ ನಿ.), ಆಯುಷ್ ಹಿಮಾಂಶು (55ನೇ ನಿ.) ಗೋಲುಗಳನ್ನು ಹೊಡೆದರು. ಆದಾಯ ತೆರಿಗೆ ತಂಡದ ಪಾಂಡ್ಯನ್ ಎಂ. (47ನೇ ನಿ.) ಒಂದು ಗೋಲು ಬಾರಿಸಿದರು.

ಇನ್ನೊಂದು ಪಂದ್ಯದಲ್ಲಿ ಸ್ನೈಪರ್ಸ್ ಎಫ್‌ಸಿ ತಂಡ 1–1ರಿಂದ ಬಿಟಿಎಂ ಎಫ್‌ಸಿ ತಂಡದ ಜೊತೆ ಡ್ರಾ ಸಾಧಿಸಿತು. ಸ್ನೈಪರ್ಸ್ ತಂಡದ ಶಾಹಿಲ್ ವಿ.ಪಿ. (72ನೇ ನಿ.) ಮತ್ತು ಬಿಟಿಎಂ ತಂಡದ ರೋಹನ್ ಜೊನಾಥನ್ (37ನೇ ನಿ.) ಗೋಲು ಗಳಿಸಿದರು.

ಇಂದು ಮುಂಬೈ ಇಂಡಿಯನ್ಸ್ ಎದುರಾಳಿ

ವಾರಿಯರ್ಸ್‌ಗೆ ಅಳಿವು ಉಳಿವಿನ ಪಂದ್ಯ

ಲಖನೌ (ಪಿಟಿಐ): ಕ್ಷೀಣವಾಗುತ್ತಿರುವ ಪ್ಲೇ ಆಫ್ ಅವಕಾಶವನ್ನು ಜೀವಂತ ವಾಗಿರಿಸಿಕೊಳ್ಳಬೇಕಾದರೆ ಯುಪಿ ವಾರಿಯರ್ಸ್ ತಂಡ, ಗುರುವಾರ ಇಲ್ಲಿ ನಡೆಯಲಿರುವ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡದ ಎದುರು ಗೆಲ್ಲಲೇಬೇಕಾದ ಅನಿವಾರ್ಯತೆ ಯಲ್ಲಿದೆ.

ಆತಿಥೇಯ ವಾರಿಯರ್ಸ್ ತಂಡ ಏಕನಾ ಕ್ರೀಡಾಂಗಣದಲ್ಲಿ ಎರಡು ದಿನ ಹಿಂದೆ ನಡೆದ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ಎದುರು 81 ರನ್‌ಗಳಿಂದ ಸೋಲನುಭವಿಸಿದ್ದು, ಐದು ತಂಡಗಳ ಪಾಯಿಂಟ್ಸ್ ಪಟ್ಟಿಯಲ್ಲಿ ಕೊನೆಯ ಸ್ಥಾನಕ್ಕೆ ಇಳಿದಿದೆ. ಅದರ ನೆಟ್ ರನ್ ರೇಟ್ ಕೂಡ ಕುಸಿದಿದೆ.

ಬೆತ್ ಮೂನಿ ಅವರ ಅಮೋಘ ಆಟವು, ಗುಜರಾತ್ ತಂಡ 5 ವಿಕೆಟ್‌ಗೆ 186 ರನ್‌ಗಳ ಉತ್ತಮ ಮೊತ್ತ ಪೇರಿಸಲು ನೆರವಾಗಿತ್ತು. ಇದನ್ನು ಬೆನ್ನಟ್ಟಿದ ವಾರಿಯರ್ಸ್ ಬ್ಯಾಟರ್‌ಗಳು ವೈಫಲ್ಯ ಕಂಡರು. ಪ್ರಮುಖ ಬ್ಯಾಟರ್‌ಗಳು ವಿಫಲರಾಗುತ್ತಿರುವುದು ತಂಡದ ಚಿಂತೆಗೆ ಕಾರಣವಾಗಿದೆ. ಇದ್ದುದರಲ್ಲಿ ಷಿನೆಲ್ ಹೆನ್ರಿ ಸ್ವಲ್ಪ ಯಶಸ್ಸು ಗಳಿಸಿದ್ದಾರೆ. ಅವರು ಈ ಬಾರಿ 34.50 ಸರಾಸರಿಯಲ್ಲಿ 138 ರನ್ ಗಳಿಸಿದ್ದಾರೆ.

ಮಹಿಳಾ ಬಿಗ್ ಬ್ಯಾಷ್‌ನಲ್ಲಿ ಆರಂಭ ಆಟಗಾರ್ತಿಯಾಗಿ ಉತ್ತಮ ಪ್ರದರ್ಶನ ನೀಡಿದ್ದ ಜಾರ್ಜಿಯಾ ವೋಲ್ ಅವರಿಗೆ ಇಲ್ಲೂ ಅದೇ ಸ್ಥಾನ ನೀಡುವ ಸಾಧ್ಯತೆಯೂ ಇದೆ. ಮಧ್ಯಮ ಕ್ರಮಾಂಕದಲ್ಲಿ ಗ್ರೇಸ್ ಹ್ಯಾರಿಸ್ ಅವರ ಹೊಣೆ ಹೆಚ್ಚು ಇದೆ. ನಾಯಕಿ ದೀಪ್ತಿ ಶರ್ಮಾ ಅವರು ತಮ್ಮ ಜವಾಬ್ದಾರಿಗೆ ತಕ್ಕಂತೆ ಉಪಯುಕ್ತ ಇನಿಂಗ್ಸ್ ಆಡಬೇಕಾಗಿದೆ.

ಒಂದೆಡೆ ವಾರಿಯರ್ಸ್ ಪರದಾಡುತ್ತಿದ್ದರೆ ಇನ್ನೊಂದು ಕಡೆ ಮುಂಬೈ ಇಂಡಿಯನ್ಸ್ ಬಹುತೇಕ ಉತ್ತಮ ಸ್ಥಿತಿಯಲ್ಲಿದೆ. ಹರ್ಮನ್‌ಪ್ರೀತ್ ಕೌರ್ ಪಡೆ, ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿ ನೇರವಾಗಿ ಫೈನಲ್‌ಗೆ ಅರ್ಹತೆ ಪಡೆಯುವ ಇರಾದೆಯಲ್ಲಿದೆ.

ಡಬ್ಲ್ಯುಪಿಎಲ್‌ನಲ್ಲಿ ಲೀಗ್ ನಂತರ ಅಗ್ರಸ್ಥಾನ ಪಡೆಯುವ ತಂಡ ನೇರವಾಗಿ ಫೈನಲ್‌ಗೆ ಅರ್ಹತೆ ಪಡೆಯುತ್ತದೆ. ಎರಡು ಮತ್ತು ಮೂರನೇ ಸ್ಥಾನ ಪಡೆಯುವ ತಂಡಗಳು ಪ್ಲೇ ಆಫ್ ಪಂದ್ಯ ಆಡಲಿದ್ದು, ಈ ಪಂದ್ಯದ ವಿಜೇತರು ಫೈನಲ್‌ಗೆ ತೇರ್ಗಡೆ ಆಗುತ್ತಾರೆ.

2023ರಲ್ಲಿ, ಮೊದಲ ವರ್ಷ ಚಾಂಪಿಯನ್ ಆಗಿದ್ದ ಮುಂಬೈ ಇಂಡಿಯನ್ಸ್‌ಗೆ ಮೂರು ಪಂದ್ಯಗಳು ಆಡಲು ಇದ್ದು, ಅಗ್ರಸ್ಥಾನದ ಅವಕಾಶ ಉತ್ತಮವಾಗಿದೆ. ಹೀಗಾಗಿ ಈ ತಂಡ ಪ್ರತಿ ಪಂದ್ಯವನ್ನು ಗಂಭೀರವಾಗಿ ತೆಗೆದುಕೊಳ್ಳಲಿದೆ.

ಹರ್ಮನ್‌ಪ್ರೀತ್ ಅವರು ಉತ್ತಮ ಆರಂಭವನ್ನು ದೊಡ್ಡ ಮೊತ್ತವಾಗಿ ಪರಿವರ್ತಿಸಲು ತಿಣುಕಾಡುತ್ತಿದ್ದಾರೆ. ಇಂಗ್ಲೆಂಡ್‌ನ ಆಲ್‌ರೌಂಡರ್ ನಾಟ್ ಶಿವರ್–ಬ್ರಂಟ್ ಸಹ ಲೀಲಾಜಾಲವಾಗಿ ಆಡುತ್ತಿಲ್ಲ. ಆದರೆ ತಂಡದ ಯಶಸ್ಸಿನಲ್ಲಿ ಅವರ ಪಾತ್ರ ಹಿರಿದು. ಐದು ಪಂದ್ಯಗಳಿಂದ ಮೂರು ಅರ್ಧ ಶತಕ ಸಹಿತ 272 ರನ್ ಗಳಿಸಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30, ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಮತ್ತು ಜಿಯೊ ಹಾಟ್‌ಸ್ಟಾರ್ ಆ್ಯಪ್



ದೀಪ್ತಿ ಶರ್ಮಾ



ಹರ್ಮನ್‌ಪ್ರೀತ್ ಕೌರ್

ಚೆಸ್: ಪ್ರಜ್ಞಾನಂದ, ಅರವಿಂದ್ ಮುನ್ನಡೆ ಅಬಾಧಿತ

ಪ್ರಾಗ್ (ಝೆಕ್ ರಿಪಬ್ಲಿಕ್), (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಮತ್ತು ಅರವಿಂದ ಚಿದಂಬರಮ್ ಅವರು ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ಆರನೇ ಸುತ್ತಿನ ನಂತರವೂ, ಸಮೀಪದ ಎದುರಾಳಿಗಳಿಗಿಂತ ಒಂದು ಪಾಯಿಂಟ್ ಮುನ್ನಡೆ ಕಾಪಾಡಿಕೊಂಡಿದ್ದಾರೆ.

ಪ್ರಜ್ಞಾನಂದ ಮತ್ತು ಅರವಿಂದ್ ತಲಾ ನಾಲ್ಕು ಪಾಯಿಂಟ್ಸ್ ಕಲೆಹಾಕಿದ್ದಾರೆ. ಪ್ರಜ್ಞಾನಂದ ಮಂಗಳವಾರ ನಡೆದ ಪಂದ್ಯದಲ್ಲಿ ಅಮೆರಿಕದ ಸ್ಯಾಮ್ ಶಂಕ್ಲಾಂಡ್ (2.5) ಜೊತೆ 43 ನಡೆಗಳಲ್ಲಿ ಡ್ರಾ ಮಾಡಿಕೊಂಡರೆ, ಅರವಿಂದ್ ಅವರು ವಿಯೆಟ್ನಾಮಿನ ಕ್ವಾಂಗ್ ಲೀಮ್ ಲಿ (3) ಜೊತೆ 32 ನಡೆಗಳ ನಂತರ ಡ್ರಾ ಮಾಡಿಕೊಂಡರು. ಆರನೇ ಸುತ್ತಿನ ಎಲ್ಲಾ ಐದೂ ಪಂದ್ಯಗಳು ಡ್ರಾ ಆದವು.

ಅಗ್ರ ಶ್ರೇಯಾಂಕದ ವೀ ಯಿ (ಚೀನಾ), ಹಾಲೆಂಡ್‌ನ ಅನಿಶ್ ಗಿರಿ, ಜರ್ಮನಿಯ ವಿನ್ಸೆಂಟ್ ಕೀಮರ್ ಮತ್ತು ಕ್ವಾಂಗ್ ಲೀಮ್ ತಲಾ ಮೂರು ಪಾಯಿಂಟ್ಸ್ ಗಳಿಸಿದ್ದಾರೆ.

ಗುಯೆನ್ ಥಾಯ್ ದೈ ವಾನ್ ಮತ್ತು ಡೇವಿಡ್ ನವಾರ, ಟರ್ಕಿಯ ಗುರೆಲ್ ಎಡಿರ್ಝ್ ಮತ್ತು ಶಂಕ್ಲಾಂಡ್ ತಲಾ 2.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಪ್ರಜ್ಞಾನಂದ ಏಳನೇ ಸುತ್ತಿನಲ್ಲಿ ವೀ ಯಿ ಅವರನ್ನು, ಅರವಿಂದ್ ಅವರು, ಅನಿಶ್ ಅವರನ್ನು ಎದುರಿಸಲಿದ್ದಾರೆ.

ಈ ಋತುವಿನಿಂದಲೇ ಅನ್ವಯ • ಎಲ್ಲ ತಂಡಗಳ ಮ್ಯಾನೇಜರ್‌ಗಳಿಗೆ ಪತ್ರ

ಐಪಿಎಲ್‌ಗೂ ಬಿಸಿಸಿಐನ ಭಾಗಶಃ ಮಾರ್ಗಸೂಚಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡಕ್ಕೆ ಈ ವರ್ಷದ ಆರಂಭದಲ್ಲಿ ಜಾರಿಗೊಳಿಸಿದ್ದ ಮಾರ್ಗಸೂಚಿಗಳನ್ನು (ಎಸ್‌ಒಪಿ) ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಐಪಿಎಲ್‌ನ 10 ಫ್ರಾಂಚೈಸಿಗಳಿಗೂ ಭಾಗಶಃ ಅನ್ವಯಗೊಳಿಸಿದೆ. ಇದರಲ್ಲಿ ಪ್ರಮುಖ ಎಂದರೆ ಎಲ್ಲ ಆಟಗಾರರೂ ಟೀಮ್ ಬಸ್‌ನಲ್ಲೇ ಪ್ರಯಾಣಿಸಬೇಕಾಗುತ್ತದೆ.

ಪಂದ್ಯದ ದಿನ ಮತ್ತು ಪಂದ್ಯವಿಲ್ಲದ ದಿನಗಳಲ್ಲೂ ಆಟಗಾರರ ಕುಟುಂಬ ಸದಸ್ಯರಿಗೆ ಡ್ರೆಸಿಂಗ್ ರೂಮ್‌ಗಳಿಗೆ ಪ್ರವೇಶಿಸುವುದನ್ನು ನಿರ್ಬಂಧಿಸಲಾಗಿದೆ. ಭಾರತ ತಂಡ, ಈ ವರ್ಷದ ಆರಂಭದಲ್ಲಿ ಆಸ್ಟ್ರೇಲಿಯಾಕ್ಕೆ ಸರಣಿ ಸೋತ ನಂತರ ಬಿಸಿಸಿಐ, ಭಾರತ ತಂಡಕ್ಕೆ ಕೆಲವು ಮಾರ್ಗಸೂಚಿಗಳನ್ನು ಜಾರಿಗೆ ತಂದಿತ್ತು.

ಆದರೆ ಅದೇ ಮಾರ್ಗಸೂಚಿಗಳನ್ನು ಯಥಾವತ್ತಾಗಿ ಬಹುತಂಡಗಳು ಇರುವ ಐಪಿಎಲ್‌ಗೆ ಅನ್ವಯಿಸುವುದು ಕಷ್ಟಸಾಧ್ಯವಾಗಿದ್ದು, ಕೆಲವನ್ನು ವಿಶ್ವದ ಅತಿ ಶ್ರೀಮಂತ ಟಿ20 ಲೀಗ್‌ನಲ್ಲಿ ಜಾರಿಗೊಳಿಸಲು ಬಿಸಿಸಿಐ ನಿರ್ಧರಿಸಿದೆ.

'ಆಟಗಾರರು ಪ್ರಾಕ್ಟೀಸ್‌ಗೆ ಬರುವಾಗ ಟೀಮ್ ಬಸ್‌ಅನ್ನೇ ಬಳಸಬೇಕು. ತಂಡಗಳು ಎರಡು ಬ್ಯಾಚ್‌ಗಳಲ್ಲಿ ಪ್ರಯಾಣಿಸಬಹುದು' ಎಂದು ಐಪಿಎಲ್‌ನ ಎಲ್ಲ ಟೀಮ್ ಮ್ಯಾನೇಜರ್‌ಗಳಿಗೆ ನೀಡಲಾಗಿರುವ ಪತ್ರದಲ್ಲಿ ತಿಳಿಸಲಾಗಿದೆ. ಕುಟುಂಬ ಸದಸ್ಯರು ತರಬೇತಿ ಅವಧಿಯಲ್ಲೂ ಡ್ರೆಸಿಂಗ್ ರೂಮ್ ಪ್ರವೇಶಿಸುವ ಹಾಗಿಲ್ಲ ಎಂದೂ ತಿಳಿಸಲಾಗಿದೆ.

'ತಾಲೀಮಿನ ದಿನ (ಟೂರ್ನಿಗೆ ಮೊದಲು ಮತ್ತು ಟೂರ್ನಿಯ ವೇಳೆ) ಕೇವಲ ಮಾನ್ಯತೆ ಪಡೆದ ಸಿಬ್ಬಂದಿ ಮಾತ್ರ ಡ್ರೆಸಿಂಗ್ ರೂಮ್ ಮತ್ತು ಅಂಗಳಕ್ಕೆ ಪ್ರವೇಶ ಮಾಡಬಹುದು. ಆಟಗಾರರ ಕುಟುಂಬ ಸದಸ್ಯರು ಅಥವಾ ಸ್ನೇಹಿತರು ಬೇರೆ ವಾಹನದಲ್ಲಿ ಬಂದು ಮೀಸಲಿರಿಸಿದ (ಹಾಸ್ಪಿಟಾಲಿಟಿ ಏರಿಯಾ) ಜಾಗದಿಂದ ಪ್ರಾಕ್ಟೀಸ್ ನೋಡಬಹುದು' ಎಂದು ತಿಳಿಸಲಾಗಿದೆ.

ಹೆಚ್ಚುವರಿ ನೆರವು ಸಿಬ್ಬಂದಿಯ ಪಟ್ಟಿಯನ್ನು (ಥ್ರೊ ಡೌನ್ ಸ್ಪೆಷಲಿಸ್ಟ್‌ಗಳು/ ನೆಟ್ ಬೌಲರ್‌ಗಳು) ಅನುಮೋದನೆಗಾಗಿ ಬಿಸಿಸಿಐಗೆ ಸಲ್ಲಿಸುವುದು ಕಡ್ಡಾಯ. ಅನುಮೋದನೆಯಾದ ಮೇಲೆ ಪಂದ್ಯವಿಲ್ಲದ ದಿನ ಅವರಿಗೆ ಅಕ್ರಡಿಟೇಷನ್ ನೀಡಲಾಗುತ್ತದೆ.

ಫ್ರಾಂಚೈಸಿಯೊಂದರ ಉನ್ನತ ಅಧಿಕಾರಿ, ಬಿಸಿಸಿಐನ ಕ್ರಮವನ್ನು ಸ್ವಾಗತಿಸಿದರು. 'ನಮ್ಮ ಫ್ರಾಂಚೈಸಿಯಲ್ಲಿ ಕುಟುಂಬ ಸದಸ್ಯರಿಗೆ ಮಾತ್ರವಲ್ಲ, ತಂಡದ ಮಾಲೀಕರಿಗೂ ಡ್ರೆಸಿಂಗ್ ರೂಮ್ ಪ್ರವೇಶಕ್ಕೆ ಅವಕಾಶ ನೀಡುತ್ತಿರಲಿಲ್ಲ. ಕೆಲವರು ಪಂದ್ಯದ ನಂತರ ಸ್ವಂತ ವಾಹನದಲ್ಲಿ ತೆರಳುತ್ತಿದ್ದರು. ಈ ಋತುವಿನಿಂದ ಅದಕ್ಕೂ ಅವಕಾಶ ಇರುವುದಿಲ್ಲ' ಎಂದು ಅವರು ಪಿಟಿಐಗೆ ತಿಳಿಸಿದರು.

ಪಂದ್ಯದ ದಿನ ಗುರುತು ಪತ್ರ (ಅಕ್ರಡಿಟೇಷನ್ ಕಾರ್ಡ್) ಮರೆತು ಬಂದ ಆಟಗಾರರಿಗೆ ಆರಂಭದಲ್ಲಿ ಎಚ್ಚರಿಕೆ, ನಂತರ ದಂಡ ವಿಧಿಸಲಾಗುತ್ತದೆ. ಅವರು ಪಂದ್ಯದ ನಂತರ ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಬರುವಾಗ ಸಡಿಲ ಮತ್ತು ಸ್ಲೀವ್‌ಲೆಸ್ ಧಿರಿಸು ಧರಿಸುವಂತಿಲ್ಲ ಎಂದೂ ತಿಳಿಸಲಾಗಿದೆ.

ಅಭ್ಯಾಸದ ವೇಳೆ ಬೌಂಡರಿಯಾಚೆಗಿನ ಎಲ್‌ಇಡಿ ಬೋರ್ಡ್‌ಗಳಿಗೆ ಚೆಂಡನ್ನು ಹೊಡೆಯುವಂತಿಲ್ಲ ಎಂದು ಬ್ಯಾಟರ್‌ಗಳಿಗೆ ಎಚ್ಚರಿಕೆ ನೀಡಲಾಗಿದೆ. 'ಇದಕ್ಕಾಗಿ ನೆಟ್‌ಗಳನ್ನು ನೀಡಿದ್ದರೂ, ಕೆಲವರು ಎಲ್‌ಇಡಿ ಬೋರ್ಡ್‌ಗಳಿಗೆ ಚೆಂಡನ್ನು ಹೊಡೆದಟ್ಟುತ್ತಿದ್ದಾರೆ. ತಂಡಗಳು ನಿಯಮಗಳಿಗೆ ಬದ್ಧವಾಗಿರಬೇಕು. ಜೊತೆಗೆ ಆಟಗಾರರು ಮತ್ತು ನೆರವು ಸಿಬ್ಬಂದಿ ಎಲ್‌ಇಡಿ ಬೋರ್ಡ್‌ಗಳ ಎದುರು ಕುಳಿತುಕೊಳ್ಳಬಾರದು' ಎಂದೂ ತಿಳಿಸಲಾಗಿದೆ.

ಏಕದಿನ ಕ್ರಿಕೆಟ್‌ಗೆ ಸ್ಮಿತ್ ವಿದಾಯ

ಸಿಡ್ನಿ (ಎಎಫ್‌ಪಿ): ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋತ ಬೆನ್ನಲ್ಲೆ ಭಾರತ ವಿರುದ್ಧ ಬೆನ್ನಲ್ಲೇ ಆಸ್ಟ್ರೇಲಿಯಾ ತಂಡದ ಪ್ರಭಾರ ನಾಯಕ, ಅನುಭವಿ ಬ್ಯಾಟರ್ ಸ್ಟೀವ್ ಸ್ಮಿತ್ ಅವರು ಏಕದಿನ ಕ್ರಿಕೆಟ್‌ಗೆ ಬುಧವಾರ ವಿದಾಯ ಘೋಷಿಸಿದ್ದಾರೆ.

35 ವರ್ಷ ವಯಸ್ಸಿನ ಸ್ಮಿತ್, ವೇಗಿ ಪ್ಯಾಟ್ ಕಮಿನ್ಸ್ ಅನುಪಸ್ಥಿತಿಯಲ್ಲಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಸ್ಟ್ರೇಲಿಯಾ ತಂಡವನ್ನು ಮುನ್ನಡೆಸಿದ್ದರು. ಅವರು ಟೆಸ್ಟ್ ಹಾಗೂ ಟಿ20 ಮಾದರಿಗಳಲ್ಲಿ ಮುಂದುವರಿಯುವರು.

ದುಬೈನಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಸ್ಮಿತ್ 96 ಎಸೆತಗಳಲ್ಲಿ 73 ರನ್ ಗಳಿಸಿದ್ದರು. ಪಂದ್ಯ ಸೋತ ಬೆನ್ನಲ್ಲೇ ತಮ್ಮ ನಿವೃತ್ತಿ ನಿರ್ಧಾರವನ್ನು ಸಹ ಆಟಗಾರರೊಂದಿಗೆ ಹಂಚಿ ಕೊಂಡಿದ್ದಾರೆ.

'ಏಕದಿನ ಕ್ರಿಕೆಟ್‌ನ ಅದ್ಭುತ ಪ್ರಯಾ ಣದಲ್ಲಿ ಪ್ರತಿಯೊಂದು ಕ್ಷಣವನ್ನೂ ಆನಂದಿಸಿದ್ದೇನೆ' ಎಂದು ಸ್ಮಿತ್ ಹೇಳಿದ್ದಾಗಿ ಕ್ರಿಕೆಟ್ ಆಸ್ಟ್ರೇಲಿಯಾ ಪ್ರಕಟಣೆಯಲ್ಲಿ ತಿಳಿಸಿದೆ.

2010ರಲ್ಲಿ ಲೆಗ್ ಸ್ಪಿನ್ ಆಲ್ ರೌಂಡರ್ ಆಗಿ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಅವರು, ಈತನಕ 170 ಪಂದ್ಯಗಳಲ್ಲಿ 43.28 ಸರಾಸರಿಯಲ್ಲಿ 5,800 ರನ್ ಗಳಿಸಿದ್ದಾರೆ. ಅದರಲ್ಲಿ 12 ಶತಕ ಹಾಗೂ 35 ಅರ್ಧಶತಕಗಳು ಸೇರಿವೆ. 2015 ಹಾಗೂ 2023ರ ಏಕದಿನ ವಿಶ್ವಕಪ್ ಗೆದ್ದ ಆಸ್ಟ್ರೇಲಿಯಾ ತಂಡದಲ್ಲಿ ಅವರು ಆಡಿದ್ದರು.

34.67ರ ಸರಾಸರಿಯಲ್ಲಿ 28 ವಿಕೆಟ್ ಪಡೆದಿರುವ ಅವರು, 2015 ಮತ್ತು 2021ರಲ್ಲಿ ಆಸ್ಟ್ರೇಲಿಯಾದ 'ವರ್ಷದ ಏಕದಿನ ಆಟಗಾರ' ಗೌರವಕ್ಕೆ ಪಾತ್ರವಾಗಿದ್ದರು. 'ಟೆಸ್ಟ್ ಕ್ರಿಕೆಟ್ ನನ್ನ ಆದ್ಯತೆಯಾಗಿರಲಿದ್ದು, ಜೂನ್‌ನಲ್ಲಿ ನಡೆಯಲಿರುವ ಟೆಸ್ಟ್ ಚಾಂಪಿಯನ್‌ಷಿಪ್, ವೆಸ್ಟ್ ಇಂಡೀಸ್ ಹಾಗೂ ಇಂಗ್ಲೆಂಡ್ ವಿರುದ್ಧದ ಸರಣಿಯನ್ನು ಎದುರು ನೋಡುತ್ತಿದ್ದೇನೆ' ಎಂದು ಸ್ಮಿತ್ ಅವರು ಹೇಳಿದ್ದಾರೆ.



ಏಕದಿನ ಕ್ರಿಕೆಟ್‌ನಲ್ಲಿ ಸ್ಟೀವ್ ಸ್ಮಿತ್ ಸಾಧನೆ

ಪಂದ್ಯ	ಇನಿಂಗ್ಸ್	ರನ್	ಗರಿಷ್ಠ ರನ್	ಸರಾಸರಿ	ಶತಕ	ಅರ್ಧ ಶತಕ	ವಿಕೆಟ್	ಉತ್ತಮ ಬೌಲಿಂಗ್
170	154	5800	164	43.28	12	35	28	16ಕ್ಕೆ3

ಐದು ಒಲಿಂಪಿಕ್ಸ್‌ಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಟೇಬಲ್ ಟೆನಿಸ್ ದಿಗ್ಗಜ

ಶರತ್ ಕಮಲ್ ನಿವೃತ್ತಿ ಘೋಷಣೆ

ಚೆನ್ನೈ (ಪಿಟಿಐ): ಭಾರತದ ಟೇಬಲ್ ಟೆನಿಸ್ ದಂತಕಥೆ ಅಚಂತ ಶರತ್ ಕಮಲ್ ಅವರು ಎರಡು ದಶಕಗಳ ವೃತ್ತಿ ಜೀವನಕ್ಕೆ ಬುಧವಾರ ನಿವೃತ್ತಿ ಘೋಷಿಸಿದ್ದಾರೆ.

ಚೆನ್ನೈಯಲ್ಲಿ ಇದೇ ತಿಂಗಳ 25 ರಿಂದ 30ರವರೆಗೆ ನಡೆಯಲಿರುವ ವಿಶ್ವ ಟೇಬಲ್ ಟೆನಿಸ್ ಟೂರ್ನಿಯು ತಮ್ಮ ವೃತ್ತಿ ಜೀವನದ ಕೊನೆಯ ಸ್ಪರ್ಧೆಯಾಗಿರಲಿದೆ ಎಂದು 42 ವರ್ಷ ವಯಸ್ಸಿನ ಶರತ್ ತಿಳಿಸಿದ್ದಾರೆ.

'ಚೆನ್ನೈಯಲ್ಲಿ ಮೊದಲ ಅಂತರ ರಾಷ್ಟ್ರೀಯ ಟೂರ್ನಿ ಆಡಿದ್ದೇನೆ. ಈಗ ನನ್ನ ಕೊನೆಯ ಅಂತರ ರಾಷ್ಟ್ರೀಯ ಟೂರ್ನಿಯನ್ನು ಚೆನ್ನೈನಲ್ಲಿಯೇ ಆಡಲಿದ್ದೇನೆ. ಒಬ್ಬ ವೃತ್ತಿಪರ ಕ್ರೀಡಾಪಟುವಾಗಿ ಇದು ನನ್ನ ಕೊನೆಯ ಟೂರ್ನಿಯಾಗಿರಲಿದೆ' ಎಂದು ಹೇಳಿದ್ದಾರೆ.

ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಏಳು ಚಿನ್ನ, ಮೂರು ಬೆಳ್ಳಿ ಮತ್ತು ಮೂರು ಕಂಚಿನ ಪದಕ ಗೆದ್ದಿರುವ ಅವರು ಏಷ್ಯನ್ ಗೇಮ್ಸ್‌ನಲ್ಲಿ ಎರಡು ಕಂಚು ಮತ್ತು ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕು ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

2004ರಿಂದ ಐದು ಒಲಿಂಪಿಕ್ಸ್‌ಗಳಲ್ಲಿ ಭಾರತವನ್ನು ಪ್ರತಿನಿಧಿಸಿರುವ ಶರತ್, ಕಳೆದ ವರ್ಷ ಪ್ಯಾರಿಸ್ ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭದಲ್ಲಿ ಭಾರತದ ಧ್ವಜಧಾರಿಯಾಗಿದ್ದರು.

'ನನ್ನ ಬೀರುವಿನಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಹಾಗೂ ಏಷ್ಯನ್ ಗೇಮ್ಸ್ ಪದಕಗಳಿವೆ. ಆದರೆ ಒಲಿಂಪಿಕ್ಸ್ ಪದಕಗಳಿಲ್ಲ. ಕಿರಿಯ ಪ್ರತಿಭೆಗಳ ಮೂಲಕ ನನ್ನ ಕನಸನ್ನು ಜೀವಂತವಾಗಿಡುವೆ' ಎಂದು ಅವರು ಹೇಳಿದ್ದಾರೆ.

ಅಂತರರಾಷ್ಟ್ರೀಯ ಟೇಬಲ್ ಟೆನಿಸ್ ಫೆಡರೇಷನ್ (ಐಟಿಟಿಎಫ್) ರ್‍ಯಾಂಕಿಂಗ್ ಪಟ್ಟಿಯಲ್ಲಿ 42ನೇ ಸ್ಥಾನದಲ್ಲಿರುವ ಅವರು, ಈಗಲೂ ಭಾರತದ ಅಗ್ರಮಾನ್ಯ ಆಟಗಾರ ಎಂಬ ಹಿರಿಮೆಯನ್ನು ಹೊಂದಿದ್ದಾರೆ.

ಟೇಬಲ್ ಟೆನಿಸ್‌ಗೆ ವಿದಾಯಕ್ಕೆ ಸಂಬಂಧಿಸಿದಂತೆ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಶರತ್ ಕಮಲ್, ಸುದೀರ್ಘ ಭಾವನಾತ್ಮಕ ಪೋಸ್ಟ್ ಹಂಚಿಕೊಂಡಿದ್ದಾರೆ.

ಶರತ್ ಅವರು ಪ್ರಸ್ತುತ ಭಾರತ ಒಲಿಂಪಿಕ್ ಸಂಸ್ಥೆಯ ಕ್ರೀಡಾಪಟುಗಳ ಆಯೋಗದ ಉಪಾಧ್ಯಕ್ಷರಾಗಿದ್ದಾರೆ.

ಶರತ್ ಕಮಲ್ ಹೆಜ್ಜೆಗುರುತು

ಊರು: ಚೆನ್ನೈ | ವಯಸ್ಸು: 42 ವರ್ಷ

30 (2019) ಗರಿಷ್ಠ ವಿಶ್ವ ರ್‍ಯಾಂಕಿಂಗ್

42 ಪ್ರಸ್ತುತ ರ್‍ಯಾಂಕಿಂಗ್

- ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಆರು ಚಿನ್ನ, ಮೂರು ಬೆಳ್ಳಿ ಮತ್ತು ಮೂರು ಕಂಚು
- ಏಷ್ಯನ್ ಗೇಮ್ಸ್‌ನಲ್ಲಿ ಎರಡು ಕಂಚು
- ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕು ಕಂಚಿನ ಪದಕ
- ದಾಖಲೆಯ 10 ಬಾರಿ ಸೀನಿಯರ್ ರಾಷ್ಟ್ರೀಯ ಚಾಂಪಿಯನ್
- 2004ರ ಅಥೆನ್ಸ್, 2008ರ ಬೀಜಿಂಗ್, 2016ರ ರಿಯೊ, 2020 ಟೋಕಿಯೊ, 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗಿ
- 2019ರಲ್ಲಿ ಪದ್ಮಶ್ರೀ ಪ್ರಶಸ್ತಿ, 2022ರಲ್ಲಿ ಖೇಲ್ ರತ್ನ ಪ್ರಶಸ್ತಿ

